# ದೆಹಲಿ ಕರ್ನಾಟಕ ಸಂಘದ ಅಭಿಮತ

ಸೆಪ್ಟೆಂಬರ್ 2012
ಬೆಲೆ ರೂ. 1



# ದೆಹಲಿ ಕನಾಟಕ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ



ದೆಹಲಿ ಕನಾಟಕ ಸಂಘದಲ್ಲಿ ಆಗಸ್ಟ್ 15, 2012ರಂದು ಪ್ರತಿವರ್ಷದಂತೆ ಈ ವರ್ಷವೂ ವಿಜೃಂಭಣೆಯಿಂದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷರು ಧ್ವಜಾರೋಹಣ ಮಾಡಿದರು.

ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಭಾರತಕ್ಕೆ ಸ್ವಾತಂತ್ರ್ಯ ಸಿಗುವಲ್ಲಿ ಕರ್ನಾಟಕದ ದೇಶಭಕ್ತರು ಹೋರಾಡಿದ ಪಾತ್ರ ಅತ್ಯಂತ ಮಹತ್ವವಾದದ್ದು. ಮಹಾತ್ಮ ಗಾಂಧೀಜಿಯವರು ಕರ್ನಾಟಕಕ್ಕೆ ಭೇಟಿ ನೀಡಿದ ವೇಳೆಯಲ್ಲಿ ಅವರು ಕರ್ನಾಟಕದ ಜನರಲ್ಲಿರುವ ಸ್ವಾತಂತ್ರ್ಯದ ಅಭಿಮಾನ, ಕೆಚ್ಚು, ಭಕ್ತಿ, ಹೋರಾಟ, ತ್ಯಾಗ ಭಾವನೆ ಮೆಚ್ಚಿಕೊಂಡು ತಮ್ಮ ಅಭಿಪ್ರಾಯವನ್ನು ಮಂಡಿಸಿದ್ದು ಡಾ. ಜಿ.ಎ. ಬಿರಾದಾರ ಅವರು ಬರೆದ ಪುಸ್ತಕದಲ್ಲಿ ವಿವರವಾಗಿ ಲಭ್ಯವಿದೆ ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜರವರು ಭಾರತದ ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸುವ ಮೂಲಕ ದೇಶದ ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದವರನ್ನು ನೆನೆಪಿಸಿಕೊಂಡು, ಸ್ವಾತಂತ್ರ್ಯ ಉಳಿಸಿಕೊಂಡು ದೇಶದ ಪ್ರಗತಿಗೆ ಹೋರಾಡಬೇಕೆಂದು ಕರೆ ನೀಡಿ, ಕರ್ನಾಟಕ ಸಂಘ ಸ್ಥಾಪಿಸಿದ ಹಿರಿಯರನ್ನು ಎಂದಿಗೂ ಮರೆಯಬಾರದೆಂದು ಕಿವಿಮಾತನ್ನು ಹೇಳಿದರು.

ಇದೇ ಸಂದರ್ಭದಲ್ಲಿ ಹಿರಿಯ ಕಲಾವಿದ ಮುರಗೋಡ ದಂಪತಿಗಳು, ಎನ್.ಎ. ಮಾಧವ, ಕೆ.ಎಸ್.ಜಿ. ಶೆಟ್ಟಿ, ಹರಿಶ್ಚಂದ್ರ ಬಂಟ್ವಾಳ್, ಶಿವಾನಂದ ಇಂಗಳೇಶ್ವರ, ಅಶೋಕ್ ಗೊನಾಲ್, ಬಾ. ಸಾಮಗ, ಡಾ. ಸುಮಂಗಲಾದೇವಿ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಆಂಜನೀ ಗೌಡ, ಪಿ.ಸಿ. ಶ್ರೀನಿವಾಸ, ಆನಂದ್ ಈಶ್ವರಪ್ಪ ಮುರಗೋಡ ಹಾಗೂ ಇನ್ನಿತರ ಸದಸ್ಯರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಡಾ. ಸುಮಂಗಲಾದೇವಿ**

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ 66ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಕೃಷ್ಣ ಭಟ್‌ರವರು ಮಾತನಾಡಿ ಸ್ವಾತಂತ್ರ್ಯ ದಿನಾಚರಣೆಯನ್ನು ಏಕೆ ಆಚರಿಸಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುತ್ತಾ, ವಿಶ್ವದಲ್ಲಿರುವ ವಿಭಿನ್ನ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡು ಭಾರತ ದೇಶದಂತೆ ಅಹಿಂಸಾ ಮಾರ್ಗದಲ್ಲಿ ಸ್ವಾತಂತ್ರ್ಯ ಗಳಿಸಿದ ನಿದರ್ಶನ ಜಗತ್ತಿನಲ್ಲಿ ಇನ್ನೊಂದಿಲ್ಲ. ದೇಶಕ್ಕಾಗಿ ಹೋರಾಟ ಮಾಡಿ ಮಡಿದ ವೀರರಿಗೆ ಗೌರವ ಸೂಚಿಸುವ ಸಲುವಾಗಿ ಹಾಗು ಪರಿಸರ, ಆರೋಗ್ಯ ಮತ್ತು ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಬದ್ಧತೆಯನ್ನು ಮೂಡಿಸುವ ವಿಚಾರವಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವುದು ಬಹಳ ಮುಖ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಉಪಾಧ್ಯಕ್ಷರಾದ ಬಸವರಾಜ ಎಸ್ ಮೇಟಿ, ಗೌರವ ಕಾರ್ಯದರ್ಶಿ ಆಂಜನಿ ಗೌಡ, ಸದಸ್ಯರಾದ ಜಿ.ಎಂ. ಭಾರತಿ, ತಾರಾ ರಮೇಶ್, ಕೆ. ರಾಧಾಕೃಷ್ಣ, ವಿ.ಆರ್. ಗುಡ್ಡೇಗೌಡ, ಹಾಗು ಶಾಲೆಯ ಪ್ರಾಂಶುಪಾಲರಾದ ಕೆ. ಟಿ. ಗಣೇಶ್, ಅಧ್ಯಾಪಕ ವೃಂದದವರು, ವಿದ್ಯಾರ್ಥಿಗಳು ಹಾಗು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿಕ್ಷಕಿಯರಾದ ಪರಿಮಳರಾವ್ ಮತ್ತು ಪ್ರಮೀಳ ದಹಿಯಾ ಅವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

**ಆಂಜನಿ ಗೌಡ**

---



ಉಪಾಧ್ಯಕ್ಷೆ ಡಾ. ಅಹಲ್ಯಾ ಚಿಂತಾಮಣಿ, ಗೌರವ ಕಾರ್ಯದರ್ಶಿ ಶ್ರೀ ಆಂಜನಿ ಗೌಡ, ಪ್ರಾಂಶುಪಾಲ ಶ್ರೀ ಕೆ.ಟಿ. ಗಣೇಶ ಅವರು 1.9.2012ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ದೆಹಲಿ ಸರ್ಕಾರದ ನೂತನ ಶಿಕ್ಷಣ ಸಚಿವರಾಗಿ ನೇಮಕವಾದ ಪ್ರೊ. ಕಿರಣ್ ವಾಲಿಯ ಅವರನ್ನು ಅಭಿನಂದಿಸಿದರು.

ದೆಹಲಿ ಕರ್ನಾಟಕ ಸಂಘದ ಅಭಿಮತ
ಸಂಪುಟ 22 ಸಂಚಿಕೆ 12
ಸೆಪ್ಟೆಂಬರ್ 2012, ಬೆಲೆ ರೂ. 1

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**ಹಿಂಬದಿ ಚಿತ್ರ ಕಲಾವಿದ**
ಸುಧೀರ್ ಫಡ್ನೀಸ್

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ದೆಹಲಿಯಲ್ಲಿ ಈ ಬಾರಿ ಒಳ್ಳೆ ಮಳೆಯಾಗಿದೆ, ಖುಷಿಯನ್ನು ತಂದಿದೆ. ಆದರೆ, ನಮ್ಮ ಕರ್ನಾಟಕದಲ್ಲಿ ಬೀಳಬೇಕಾದಷ್ಟು ಮಳೆ ಬಿದ್ದಿಲ್ಲ. ರಾಜ್ಯದ ಒಟ್ಟು 176 ತಾಲ್ಲೋಕುಗಳಲ್ಲಿ 157 ತಾಲ್ಲೋಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಇದು ರಾಜ್ಯದ ಇತಿಹಾಸದಲ್ಲಿ ಅತ್ಯಂತ ಭಯಾನಕ ಪರ್ವ. ಪಕ್ಷಗಳು ರಾಜಕೀಯ ಹಿತಾಸಕ್ತಿಗಳನ್ನು ಮರೆತು ಬರಪೀಡಿತರ ನೆರವಿಗೆ ಧಾವಿಸಬೇಕಿದೆ. ಇತ್ತ ಬರ, ಅತ್ತ ಸಾಲದ ಸಂಕೋಲೆಯಲ್ಲಿ ಸಿಲುಕಿರುವ ರೈತರ ಸಾಲ ಮನ್ನಾ ಒಂದು ಪರಿಹಾರ ಮಾತ್ರ. ಬೆಳೆ ಬೆಳೆಯಲಾಗದೆ ತತ್ತರಿಸುತ್ತಿರುವ ರೈತರಿಗೆ ಈ ಕಡುಕಷ್ಟದ ಸಂದರ್ಭದಲ್ಲಿ ಉದ್ಯೋಗವನ್ನು ಕಲ್ಪಿಸುವ ಕ್ಷಿಪ್ರ ಕಾರ್ಯಕ್ರಮ ಅನುಷ್ಠಾನಗೊಳ್ಳಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರಚನಾತ್ಮಕವಾಗಿ ಯೋಜನೆಯನ್ನು ಸಿದ್ಧಪಡಿಸಿ ಕಾರ್ಯೋನ್ಮುಖವಾಗಬೇಕು. ಆದರೆ ನಮ್ಮ ದುರಾದೃಷ್ಟ. ರಾಜಕೀಯ ರಾಗದ್ವೇಷಗಳು ನಮ್ಮ ಸರ್ಕಾರದ ಚಾಲನೆಗೆ ಅಡ್ಡಿ ಆತಂಕಗಳನ್ನು ಒಡ್ಡುತ್ತಿವೆ. ಜನಹಿತಕ್ಕಾಗಿ ಈ ರಾಗದ್ವೇಷಗಳನ್ನು ಬದಿಗಿಟ್ಟು ತತ್‌ಕ್ಷಣ ಬರಪರಿಹಾರಕ್ಕೆ ಕ್ರಮಗಳನ್ನು ಕೈಗೊಳ್ಳಲು ನಮ್ಮ ನಾಯಕರನ್ನು ಪ್ರೇರೇಪಿಸಲಿ ಎಂಬುದು ನಮ್ಮ ಅಭಿಲಾಷೆ. ಇಂಥಲ್ಲಿ ತನ್ನನ್ನು ಆಯ್ಕೆಮಾಡಿದಂತಹ ಜನರ ಕಣ್ಣ ಹನಿಗಳನ್ನು ಒರೆಸುವ ಕೆಲಸ ಮಾಡುವ ಬದಲು ನಮ್ಮ ಶಾಸಕರು ಜನರ ದುಡ್ಡಿನಲ್ಲಿ ವಿದೇಶಗಳಲ್ಲಿ ಅಧ್ಯಯನ ಪ್ರವಾಸ ಕೈಗೊಂಡಿರುವುದು ನಿಜಕ್ಕೂ ಸಮಂಜಸವಲ್ಲ. ಮಾನ್ಯ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್ ಅವರು ಇಂಥ ಪ್ರವಾಸಗಳಿಗೆ ಪ್ರಸ್ತುತ ಸಂದರ್ಭದಲ್ಲಿ ಕಡಿವಾಣ ಹಾಕಿರುವುದು ಸ್ವಲ್ಪ ಸಮಾಧಾನದ ಸಂಗತಿ.

ನಮ್ಮ ರಾಜ್ಯದಲ್ಲಿ ಇತ್ತೀಚಿನ ಇನ್ನೊಂದು ಆಘಾತಕಾರಿ ಸಂಗತಿಯೆಂದರೆ ಹದಿನಾಲ್ಕು ಯುವಕರು ನಮ್ಮ ರಾಜ್ಯದಲ್ಲಿ ಭಯೋತ್ಪಾದನೆಯ ಸಂಚಿನ ಮೇಲೆ ಬಂಧಿತರಾಗಿರುವುದು. ವಿಸ್ಮಯವೆಂದರೆ ಈ ಯುವಕರು ವಿದ್ಯಾವಂತರು. ಕೆಲವರು ಇಂಜಿನಿಯರ್ ಹಾಗೂ ವೈದ್ಯ ವೃತ್ತಿಯಲ್ಲಿರುವವರು. ಸಧ್ಯಕ್ಕೆ ಇವರು ಆರೋಪಿಗಳು. ಆರೋಪ ಸಾಬೀತಾದರೆ ಈ ಸಂಗತಿ ನಿಜಕ್ಕೂ ಆತಂಕಕಾರಿ. ಬಹುಶಃ ನಮ್ಮ ವ್ಯವಸ್ಥೆಯಲ್ಲಿ ಮೂಲಭೂತವಾಗಿ ಇರುವ ಕೊರತೆಗಳನ್ನು ನಾವು ಸರಿಪಡಿಸಿಕೊಳ್ಳುವತ್ತ ಗಮನಹರಿಸಬೇಕಾಗುತ್ತದೆ. ಬಹುಶಃ ಎಲ್ಲೋ ಆಳದಾಳದಲ್ಲಿ ಹರಿಯುತ್ತಿರುವ ಧರ್ಮಾಂಧತೆ ಕಾರ್ಕೋಟಕ ವಿಷದಂತೆ ಇಡೀ ಸಮಾಜದ ನೆಮ್ಮದಿಯನ್ನು ಕಬಳಿಸುತ್ತಿದೆ. ಇದು ಒಂದು ಧರ್ಮಕ್ಕೆ ಸೀಮಿತವಾದುದಲ್ಲ. ಧರ್ಮಾಂಧರು ಎಲ್ಲ ಧರ್ಮಗಳಲ್ಲೂ ತಮ್ಮ ರಾಕ್ಷಸ ಪ್ರವೃತ್ತಿಯನ್ನು ಮೆರೆಯುತ್ತಿದ್ದಾರೆ. ನಮ್ಮ ಹಿರಿಯರು, ಧರ್ಮಪ್ರತಿಪಾದಕರು ಬೆಳೆಯುತ್ತಿರುವ ಯುವ ಮನಸ್ಸುಗಳನ್ನು ಧರ್ಮದ ಮೂಲತತ್ವಗಳಾದ ಸಮಾನತೆ, ಪ್ರೀತಿ, ಮಾನವೀಯತೆಗಳತ್ತ ಸೆಳೆಯಬೇಕು. ಯೌವನ, ಉತ್ಸಾಹಗಳಿಂದ ಸದಾ ಪುಟಿಯುವ ಯುವಚೇತನಗಳಿಗೆ ಪ್ರೀತಿಯ ಅನನ್ಯತೆಯನ್ನು ಪರಿಚಯಿಸಬೇಕು. ದೇಶದ ಒಳ ಹಾಗೂ ಹೊರಗಿನ ದುಷ್ಟ ಶಕ್ತಿಗಳು ಅಪ್ರಬುದ್ಧ ಸ್ಥಿತಿಯಲ್ಲಿನ ಯುವಕರನ್ನು ಆಯುಧಗಳನ್ನಾಗಿಸುವ ಮೊದಲು ಅವರಲ್ಲಿ ಸದ್ವಿವೇಕವನ್ನು ಮೂಡಿಸಬೇಕು. ಕೇವಲ ಬಂಧನ, ಶಿಕ್ಷೆ, ಕಾನೂನುಗಳಿಂದ ಭಯೋತ್ಪಾದನೆ ಎಂಬ ವಿಷ ತಗ್ಗುವುದಿಲ್ಲ. ಅದಕ್ಕೆ ಸಮಷ್ಟಿ ಯತ್ನ ಅನಿವಾರ್ಯ. ಈ ಕಾರ್ಯ ನಮ್ಮ ರಾಜ್ಯದಿಂದಲೇ ಆರಂಭವಾಗಲಿ ಎಂಬುದು ನಮ್ಮ ಆಶಯ. ಎಲ್ಲ ಧರ್ಮಗಳ ಪ್ರಮುಖರು ಒಂದು ಸಮನ್ವಯ ವೇದಿಕೆಯನ್ನು ನಿರ್ಮಿಸಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವ ಸಮಯ ಸನ್ನಿಹಿತವಾಗಿದೆ.

ದೀಪಾವಳಿ ಹತ್ತಿರ ಹತ್ತಿರ ಬರುತ್ತಿದ್ದಂತೆ ನಮ್ಮ ಚಿತ್ತ ಭಿತ್ತಿಯಲ್ಲಿ ಪಟಾಕಿಗಳ ಚಟಪಟ ಸದ್ದು ನಮ್ಮನ್ನು ರೋಮಾಂಚನಗೊಳಿಸುತ್ತದೆ. ಆದರೆ ಪ್ರತೀ ವರ್ಷ ಈ ಪಟಾಕಿಗಳನ್ನು, ಸಂಭ್ರಮ ತರುವ ಸುರ್‌ಸುರ್ ಬತ್ತಿಗಳನ್ನು ತಯಾರಿಸುವ ಶಿವಕಾಶಿಯಲ್ಲಿ ದುರಂತಗಳು ಸಂಭವಿಸಿ ನೂರಾರು ಜನ ಬಲಿಯಾಗುತ್ತಿದ್ದಾರೆ. ಈ ಸಲ ಇಂಥ ದುರಂತದಲ್ಲಿ ಸತ್ತವರ ಸಂಖ್ಯೆ ಅರವತ್ತಕ್ಕೂ ಅಧಿಕ. ಅವರಲ್ಲಿ ಬಹುತೇಕರು ಮಕ್ಕಳು. ಬಾಲಕಾರ್ಮಿಕ ಕಾಯ್ದೆ ಇದ್ದರೂ ಈ ಪಟಾಕಿಗಳನ್ನು ತಯಾರಿಸುವ ಘಟಕಗಳು ಹಣ ಉಳಿತಾಯಕ್ಕಾಗಿ ಮಕ್ಕಳನ್ನೇ ನೇಮಿಸಿಕೊಳ್ಳುತ್ತಿರುವುದು ಆತಂಕಕಾರಿ ವಿಷಯ. ಅಲ್ಲಿನ ಕಾನೂನು ವ್ಯವಸ್ಥೆ ಸರಿಯಾಗಿ ಕೆಲಸ ಮಾಡಿದ್ದರೆ ಎಳೆಯ ಕಂದಮ್ಮಗಳ ಬದುಕು ಸಿಡಿಮದ್ದುಗಳ ಬೆಂಕಿಯ ಕೆನ್ನಾಲಗೆಯಲ್ಲಿ ಬೆಂದು ಕರಕಲಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಸಾಕಷ್ಟು ಸಂರಕ್ಷಣಾ ವ್ಯವಸ್ಥೆ ಇಲ್ಲದಿದ್ದರೆ ಅಂತಹ ಘಟಕಗಳನ್ನು ಮುಚ್ಚುವಂತಹ ಕೆಲಸವನ್ನೂ ಮಾಡಬಹುದಿತ್ತು. ಈಗಲಾದರೂ ವ್ಯವಸ್ಥೆ ಎಚ್ಚೆತ್ತು ಕ್ಷಿಪ್ರ ಕ್ರಮಗಳನ್ನು ಕೈಗೊಂಡು ಮುಂದೆ ಇಂತಹ ದುರಂತಗಳು ಸಂಭವಿಸದಂತೆ ಜಾಗೃತರಾಗಲಿ ಎಂಬುದು ನಮ್ಮ ಆಗ್ರಹ. ಏನಾದರೂ ಹೇಳಿ, ಪಟಾಕಿಯನ್ನು ಹಚ್ಚಿ ಸಂಭ್ರಮದಿಂದ ಕುಣಿದು ಕುಪ್ಪಳಿಸುವ ನಮ್ಮ ಮಕ್ಕಳನ್ನು ನೋಡಿ ಯಾವ ಪ್ರಜ್ಞಾವಂತರೂ ಆನಂದಿಸಲಾಗದಂತಹ ಪರಿಸ್ಥಿತಿ ಇದು. ಏಕೆಂದರೆ ಈ ಪಟಾಕಿಗಳು ಅಂಗಡಿಗಳಿಗೆ ಬರುವ ಮುನ್ನವೇ ಅನೇಕ ಕಂದಮ್ಮಗಳನ್ನು ಬಲಿತೆಗೆದುಕೊಂಡಿವೆ ಎಂಬುದು ಮರೆಯಲಾಗದ ಸತ್ಯ.

ಸಾಧನೆಗೆ ಅಗತ್ಯವಿರುವುದು ಛಲ, ಏಕಾಗ್ರತೆ ಹಾಗೂ ಮನೋಸ್ಥೈರ್ಯ. ಒಬ್ಬ ವ್ಯಕ್ತಿಯ ಹಿನ್ನೆಲೆ–ಸಿರಿತನ, ಬಡತನ, ಇಲ್ಲವೇ ದೈಹಿಕ ನ್ಯೂನತೆಗಳು 'ಸಾಧನೆ'ಯ ಮಾರ್ಗದಲ್ಲಿ ಅಡ್ಡಿ ಆತಂಕಗಳೇ ಅಲ್ಲ. ಈ ಮಾತುಗಳನ್ನು ಯಾವುದೋ ಭಾಷಣದಿಂದ ಆಯ್ದದ್ದಲ್ಲ! ನಮ್ಮ ರಾಜ್ಯದ ಹೊಸನಗರದ ಸಾಧಾರಣ ಕೃಷಿಕನ ಮಗ ಎಚ್.ಎನ್. ಗಿರೀಶ್ ಅವರ ಅಪೂರ್ವ ಸಾಧನೆಯಿಂದ ಪ್ರೇರಿತವಾದವು. 24 ವರ್ಷದ ಗಿರೀಶ್ ತನ್ನ ಅಂಗನ್ಯೂನತೆಯನ್ನು 'ನ್ಯೂನತೆ' ಎಂದು ಭಾವಿಸಲೇ ಇಲ್ಲ. ಶ್ರದ್ಧೆಯಿಂದ, ಪರಿಶ್ರಮದಿಂದ ಪರಿಣತಿ ಗಳಿಸಿ ಲಂಡನ್‌ನಲ್ಲಿ ನಡೆದ ಪಾರಾ ಒಲಂಪಿಕ್ಸ್‌ನಲ್ಲಿ ರಜತ ಪದಕ ಗಳಿಸಿದ್ದಾರೆ. ಗಿರೀಶ್ ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು, ನಾಡಿನ ಕೀರ್ತಿಯನ್ನು ದೂರದ ಲಂಡನ್‌ನಲ್ಲಿ ವಿಶ್ವಮಟ್ಟದಲ್ಲಿ ವಿಜೃಂಭಿಸಿದ್ದಕ್ಕೆ ಅಭಿವಂದನೆಗಳು.

**ಎಲ್ಲರಿಗೂ ಗೌರಿ–ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು. ಗೌರಿ ಎಲ್ಲ ಸಮೃದ್ಧಿಯನ್ನು ಹೊತ್ತು ತರಲಿ, ಗಣೇಶ ಎಲ್ಲ ವಿಘ್ನಗಳನ್ನು ನಿವಾರಿಸಲಿ ಎಂಬುದು ನಮ್ಮ ಪ್ರಾರ್ಥನೆ.**

ಉಷಾ ಭರತಾದ್ರಿ

# ಅಭಿಮತ – ಮತ್ತೊಂದು ವರುಷ

ಅಭಿಮತಕ್ಕೆ ಮುಂಬರುವ ಅಕ್ಟೋಬರ್ 2ನೇ ದಿನಾಂಕದಂದು ಹುಟ್ಟುಹಬ್ಬ. ತಮಗೆಲ್ಲ ತಿಳಿದಿರುವ ಹಾಗೆ ಅಭಿಮತದ ಮೊದಲ ಸಂಚಿಕೆಯನ್ನು 1990ರ ಅಕ್ಟೋಬರ್ 2ನೇ ತಾರೀಖಿನಂದು ಸುಂದರ ಹಾಗೂ ಸರಳ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು. ಅಂದಿನಿಂದ ಇಂದಿನವರೆಗೆ ಅಭಿಮತ ತನ್ನ 22 ವರುಷಗಳ ಸಾಧನೆಯನ್ನು ಮುಗಿಸಿ, ಈಗ 23ನೇ ವರುಷಕ್ಕೆ ಕಾಲಿಡುತ್ತಿದೆ. ಈ ಬಗೆಯ ಸಾಧನೆಯ ಸಾಕಾರಕ್ಕೆ ಹಲವಾರು ಕನ್ನಡಿಗರು ಕಾರಣೀಭೂತರಾಗಿದ್ದಾರೆ. ಹತ್ತಾರು ವ್ಯಕ್ತಿಗಳ ಒತ್ತಾಸೆಯಿಂದ ಅಭಿಮತ ಇಲ್ಲಿಯ ತನಕ ಬಾಳಿ ಬದುಕಲಿಲ್ಲ. ಮುಖ್ಯವೆಂದರೆ, ಈ ಹತ್ತಾರು ವ್ಯಕ್ತಿಗಳ ಒತ್ತಾಸೆ, ನೂರಾರು ಜನರ ಸಹಾಯ-ಸಹಕಾರದ ಬುಗ್ಗೆಯಾಗಿ ಅಭಿಮತ ಈಗ ತನ್ನ ಅಸ್ತಿತ್ವವನ್ನು ಸಾರುತ್ತಿದೆ.

ಅಭಿಮತ ಪ್ರಾರಂಭವಾದ ಮೊದಲ 14 ವರುಷಗಳನ್ನು ಅದನ್ನು ಓಲೈಸುವ, ಸಂಪಾದಿಸುವ ಭಾಗ್ಯ ನನ್ನದಾಗಿತ್ತು. ಸಂಪಾದಕ ಮಂಡಳಿಯಲ್ಲಿ ಹಲವು ಹಿರಿಯರು, ಸ್ನೇಹಿತರು, ಬರಹಗಾರರು, ಅಭಿಮಾನಿಗಳು, ಕನ್ನಡದ ಸಹೃದಯರು ನನ್ನೊಂದಿಗೆ ಒಡನಾಡಿದ್ದಾರೆ. ಸುಮಾರು ಏಳು ಕಾರ್ಯಕಾರಿ ಸಮಿತಿಗಳೊಂದಿಗೆ ಸೇರಿಕೊಂಡು ಕೆಲಸ ಮಾಡುವ, ಈ ಕಾರ್ಯಕಾರಿ ಸಮಿತಿಗಳ ಹಾಗೂ ದೆಹಲಿ ಕರ್ನಾಟಕದ ಸಂಘದ ಹಲವಾರು ಚಟುವಟಿಕೆಗಳನ್ನು ಅಭಿಮತದಲ್ಲಿ ದಾಖಲಿಸುವ ಕೆಲಸವನ್ನು ನಾವು ಮಾಡಿದೆವು. ನಾನು 2004ರಲ್ಲಿ ಅಭಿಮತದ ಸಂಪಾದಕ ಮಂಡಳಿಯಿಂದ ಹೊರಬಂದ ಮೇಲೆ ಅದರ ಚುಕ್ಕಾಣಿ ಹಿಡಿದ ಶ್ರೀಮತಿ ಉಷಾ ಭರತಾದ್ರಿಯವರು, ನಂತರದಲ್ಲಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಅದರ ಬೆಳವಣಿಗೆಗೆ ಹಾಗೂ ಹೊಸ ಬಗೆಯ ರಂಗಿನ ವಿನ್ಯಾಸಕ್ಕೆ ನಾಂದಿ ಹಾಡಿದರು. ಈಗ ನಾನು ಅಧ್ಯಕ್ಷನಾದ ಮೇಲೆ ಮತ್ತೆ ಅಭಿಮತದತ್ತ ಸದಾ ಮುಖ ಮಾಡುವ ಸಾಧ್ಯತೆಗಳು ಎದುರಾಗುತ್ತಿವೆ. ಈ ಅಂಕಣವನ್ನು ಪ್ರತಿ ತಿಂಗಳು ಬರೆಯುವ ಜವಾಬ್ದಾರಿಯನ್ನು ಹೊರುವ ಮೂಲಕ ಅಭಿಮತದೊಂದಿಗೆ ನನಗಿರುವ ಋಣವನ್ನು ತೀರಿಸುತ್ತಿದ್ದೇನೆಂದರೆ ತಪ್ಪಾಗಲಾರದು.

ಕಳೆದ ಇಪ್ಪತ್ತೆರಡು ವರುಷಗಳ ಅಭಿಮತದ ಕಥಾನಕವನ್ನು ಈ ಒಂದು ಪುಟದಲ್ಲಿ ನಮೂದಿಸುವುದು ಅಸಾಧ್ಯವಾದ ಮಾತು. ಆದರೆ, ಈ ಎರಡು ದಶಕಗಳಲ್ಲಿ ಅದು ಎಡಬಿಡದೆ ಪ್ರತಿ ತಿಂಗಳೂ ಪ್ರಕಟಣೆಗೊಂಡಿದ್ದು ನಮಗೆಲ್ಲ ಹೆಗ್ಗಳಿಕೆಯ ಸಂಗತಿ. ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾಗಿ ಅದರ ಚಟುವಟಿಕೆಗಳನ್ನು ನಮೂದಿಸುವುದು ಹಾಗೂ ದಾಖಲಿಸುವುದು ಅಭಿಮತದ ಪ್ರಮುಖವಾದ ಉದ್ದೇಶ. ಜೊತೆಜೊತೆಯಲ್ಲಿ ದೆಹಲಿ ಕನ್ನಡಿಗರ ಅನುಭವಗಳ ಹಾಗೂ ಸಂವೇದನೆಗಳ ಸೃಜನಶೀಲ ಅಭಿವ್ಯಕ್ತಿಯಾಗಿ ಅದು ರೂಪುಗೊಳ್ಳಬೇಕೆಂಬುದು ಅದನ್ನು ಪ್ರಾರಂಭಿಸಿದವರೆಲ್ಲರ ಆಶಯವಾಗಿತ್ತು. ಈ ಬಗೆಯ ವರದಿ ಹಾಗೂ ಸೃಜನಶೀಲ ಲೇಖನಗಳೊಂದಿಗೆ ಅಭಿಮತ ಈ ಇಪ್ಪತ್ತೆರಡು ವರುಷಗಳಲ್ಲಿ ಮೂಡಿ ಬಂದಿದೆ. ಒಂದು ದೃಷ್ಟಿಯಲ್ಲಿ ಹೇಳುವುದಾದರೆ, ಅಭಿಮತ ಈ ಇಪ್ಪತ್ತೆರಡು ವರುಷಗಳಲ್ಲಿ ದೆಹಲಿ ಕನ್ನಡಿಗರ ಚರಿತ್ರೆಯನ್ನು ದಾಖಲಿಸಿದೆ. ಹೊರನಾಡ ಕನ್ನಡಿಗರ ಚರಿತ್ರೆಯನ್ನು ನಮೂದಿಸುವಾಗ, ಅದರಲ್ಲೂ ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ಕನ್ನಡದ ಚಟುವಟಿಕೆಗಳನ್ನು ವರದಿ ಮಾಡುವ ಹೆಗ್ಗಳಿಕೆ ಅಭಿಮತದ್ದು.

ಇದೆಲ್ಲ ಆಶಯಗಳು ಏನೇ ಇದ್ದರೂ, ಅಭಿಮತವನ್ನು ಪ್ರತಿ ತಿಂಗಳು ಹೊರ ತರುವ ಕೆಲಸ ಸುಲಭವಾದದ್ದಲ್ಲ. ಇಲ್ಲಿಗೆ ಈ ಕೆಲಸ ಮುಗಿದು ಹೋಯಿತು ಎನ್ನುವ ಹಾಗಿಲ್ಲ. ಈ ತಿಂಗಳು ಕಳೆದರೆ, ಮುಂದಿನ ತಿಂಗಳು ಏನು? ಹತ್ತಾರು ಪುಟಗಳನ್ನು ತುಂಬಬೇಕು. ಯಾರು ವರದಿಯನ್ನು ಬರೆಯುವವರು? ಅಭಿಮತದಲ್ಲಿ ಏನು ಬರಬೇಕು? ಏನು ಬರಬಾರದು? ಯಾವ ಪುಟದಲ್ಲಿ ಯಾವ ವರದಿ ಬರಬೇಕು? ಎಷ್ಟು ಜಾಗೆಯಿದೆ? ಎಷ್ಟು ರಂಗಿನ ಹಾಗೂ ಎಷ್ಟು ಕಪ್ಪು ಬಿಳಿಯ ಫೋಟೋಗಳು/ ಹೇಗೆ ಲೇಖನಗಳನ್ನು, ವರದಿಗಳನ್ನು ಹಾಗೂ ಫೋಟೋಗಳನ್ನು ಹೊಂದಿಸುವುದು? ಬರೆಯುವವರು ಬರೆದು ಬಿಡುತ್ತಾರೆ. ಆದರೆ, ತಾವು ಬರೆದಿದ್ದೆಲ್ಲ ಮಾಣಿಕ್ಯವೆಂದು ತಿಳಿದುಕೊಂಡವರೇ ಇದ್ದರೆ, ಅಭಿಮತವನ್ನು ಸಂಪಾದಿಸುವವರ ಬವಣೆ ಏನಾಗಬೇಡ? ಪದಗಳಲ್ಲಿ, ವಾಕ್ಯಪುಂಜಗಳಲ್ಲಿ, ಲೇಖನಗಳ ಹಾಗೂ ವರದಿಗಳ ಒಳತಡಿಯಲ್ಲಿ ತುಂಬಿರುವ ತಪ್ಪುಒಪ್ಪುಗಳನ್ನು ಸರಿಪಡಿಸಿಕೊಂಡು ಅಭಿಮತವನ್ನು ಸಂಪಾದಿಸುವ ಹೊತ್ತಿಗೆ ಸಂಪಾದಕ ಮಂಡಳಿಗೆ ಒಂದು ಬಗೆಯ ಧನ್ಯತಾ ಭಾವ ಆವರಿಸುತ್ತದೆ. ಪ್ರತಿಯೊಂದು ಅಭಿಮತದ ಸಂಚಿಕೆಯೂ ಜೀವಂತವಾಗಿ, ಒಂದು ಆಕಾರ ಪಡೆದು ಹೊರಬಂದರೆ ಅದೇ ಮನಸ್ಸಿಗೆ, ಅಂತರಂಗಕ್ಕೆ ಒಂದು ಬಗೆಯ ಸಮಾಧಾನವನ್ನು ನೀಡುತ್ತದೆ. ಅಭಿಮತ ಸಂಪಾದಕ ಮಂಡಳಿಗೆ ಅದೇ ದೊಡ್ಡ ಕಾಣಿಕೆ.

ಇಲ್ಲಿಯ ತನಕ ಅಭಿಮತದ ಸಂಪಾದಕರು ಹಾಗೂ ಸಂಪಾದಕ ಮಂಡಳಿ ಯಾವ ಹಣಕಾಸಿನ ಹಾಗೂ ಇತರ ಆಮಿಷಗಳಿಗೆ ಒಳಗಾಗದೇ ತನ್ನ ಕೆಲಸವನ್ನು ಮಾಡಿಕೊಂಡು ಬಂದಿದೆ. ಅಭಿಮತವನ್ನು ಸಂಪಾದಿಸಲು ನೀಡಬೇಕಾದ ವೇಳೆಯ ಪರಿಮಾಣವನ್ನು ಹೇಗೆ ಅಳೆಯಲಾದೀತು? ವೇದಿಕೆಯ ಮೇಲೆ ಪುಂಖಾನುಪುಂಖವಾಗಿ ಭಾಷಣ ಮಾಡುವುದು, ಅದು ಹೀಗೆ-ಇದು ಹಾಗೆ-ಎಂದೆಲ್ಲಾ ಹೇಳುವುದು ಸುಲಭ. ನಾವು ಮಾಡುವ ಭಾಷಣ, ಮಾತುಕತೆ. . . ಎಲ್ಲವೂ ಗಾಳಿಯಲ್ಲಿ ಸೇರಿಬಿಡುತ್ತದೆ. ಆದರೆ, ಈ ನಡವಳಿಕೆಗಳ, ಈ ಚಟುವಟಿಕೆಗಳ ಸಾರಾಂಶವನ್ನು ಮನದಲ್ಲಿ ಗ್ರಹಿಸಿ, ಅಕ್ಷರದಲ್ಲಿ ಒಂದೆರಡು ಪುಟಗಳಲ್ಲಿ ಎಲ್ಲರಿಗೂ ಅರ್ಥವಾಗುವಂತೆ ಬರೆಯುವುದು ಸುಲಭವಾದ ಕೆಲಸವಲ್ಲ. ಒಟ್ಟಾರೆ ಹೇಳುವುದಾದರೆ, ಈ 'ಬರವಣಿಗೆ' ಎಂಬ ಕೆಲಸ ಸುಲಭವಾದದ್ದಲ್ಲ. ಈ ಘಟನೆಗಳ ಹಾಗೂ ಚಟುವಟಿಕೆಗಳ ಚಿತ್ರಣವನ್ನು ನಾವು ಚಿತ್ರದ ರೂಪಕಗಳಲ್ಲಿ ಹಿಡಿದಿಡಿಸಿ, ಅದನ್ನು ಅಭಿಮತದ ಮೂಲೆಮೂಲೆಗಳಲ್ಲಿ ತುಂಬಿ ಬಿಡಬಹುದು. ಆದರೆ, ಅದು ಶಬ್ದಗಳ ಅಭಿವ್ಯಕ್ತಿಯಾಗುವುದಿಲ್ಲ. ಶಬ್ದಗಳ ಸೃಜನಶೀಲ ಜೋಡಣೆ ಒಂದು ಬಗೆಯ ನವಿರಾದ ಸಂವೇದನಾಶೀಲತೆಯನ್ನು ಲೇಖನಗಳಲ್ಲಿ ಹಾಗೂ ವರದಿಗಳಲ್ಲಿ ಪಡಿಮೂಡಿಸುತ್ತದೆ. ಇದನ್ನು ಮಾಡುವ ಹಾಗೂ ಮಾಡಿ, ಮೂಡಿಸುವ ಸಹೃದಯರ ಬಳಗ ದೊಡ್ಡದಾಗಬೇಕು. ಅಭಿಮತದಲ್ಲಿ ಅದನ್ನು ಹಾಕಿ, ಇದನ್ನು ಹಾಕಿ -ಎಂದೆನ್ನುವುದು ಸುಲಭ. ಆದರೆ, ಹಾಕುವ ಬಗೆ, ಬರೆಯುವ ಬಗೆ, ವರದಿಗಳನ್ನು ತಯಾರಿಸುವ ರೀತಿ-ರಿವಾಜು-ಇವೆಲ್ಲವನ್ನೂ ಬರೀ ಸಂಪಾದಕ ಮಂಡಳಿಯ ಮೇಲೆ ಬಿಟ್ಟರೆ ಅಭಿಮತ ಕೆಲ ವರ್ಷಗಳಲ್ಲಿ ಸೊರಗಿ ಹೋಗಬಹುದು.

ಅಭಿಮತವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದು. ಬರೀ ಸಂಪಾದಕ ಮಂಡಳಿಯೊಂದೇ ಈ ಕೆಲಸಗಳನ್ನೆಲ್ಲ ಮಾಡಲು ಸಾಧ್ಯವಾಗುವುದಿಲ್ಲ. ಅಭಿಮತದಲ್ಲಿ ಈ ವರದಿ ಬರಲಿಲ್ಲ-ಆ ವರದಿ ಬರಲಿಲ್ಲ ಎಂದೆಲ್ಲ ಹೇಳುತ್ತ ನಾವು ಅಸಮಾಧಾನಗೊಳ್ಳುವುದು ಸಹಜ. ಅದು ಅಭಿಮತದ ಮೇಲೆ ದೆಹಲಿ ಕನ್ನಡಿಗರಿಗೆ ಇರುವ ಅಭಿಮಾನ ಹಾಗೂ ಪ್ರೀತಿಯನ್ನು ತೋರಿಸುತ್ತದೆ. ಬರೀ ಮಾತಿನ ಜಾಲಗಳಲ್ಲೇ ನಾವು ಕಳೆದು ಹೋಗಬಾರದು. ಈ ಆಶಯಗಳನ್ನು ಶಬ್ದಗಳ ಮೂಲಕ ಪಡಿಮೂಡಿಸುವ ಜವಾಬ್ದಾರಿಯನ್ನು ನಾವು ಕೈಗೆ ತೆಗೆದುಕೊಳ್ಳಬೇಕು. ಆಗಲೇ ಅಭಿಮತ ಇನ್ನೂ ಇಪ್ಪತ್ತು-ನೂರು ವಸಂತಗಳನ್ನು ಕಾಣಲು ಸಾಧ್ಯವಾಗಬಹುದು.

ಈ ಬಗೆಯ ಆಶಯಗಳೊಂದಿಗೆ ನಾವು ಅಭಿಮತದ ಜೊತೆಗೂಡಿ ಕೆಲಸ ಮಾಡೋಣ. ವ್ಯಕ್ತಿಗಳು ಹಾಗೂ ಅವರ ಭಾವನೆಗಳು ದೆಹಲಿ ಕರ್ನಾಟಕ ಸಂಘದ ಒಟ್ಟಾರೆ ಹಿತಾಸಕ್ತಿಗಳ ಅಡಿಯಲ್ಲಿ ಗೌಣ. ನಾವೆಲ್ಲ ಈ ಸಂಘದ ನಾಲ್ಕಾರು ದಶಕಗಳ ಚರಿತ್ರೆಯ ತುಣುಕು ಅಷ್ಟೇ. ಅಭಿಮತವೆಂಬ ಒಂದು ಪುಟ್ಟ ದೋಣಿಯನ್ನು ನಾವೆಲ್ಲ ಈ ದೆಹಲಿಯೆಂಬ ಮಹಾನಗರದಲ್ಲಿ ಹರಿ ಬಿಟ್ಟಿದ್ದೇವೆ. ದೆಹಲಿ ಕರ್ನಾಟಕ ಸಂಘದ ಹಾಗೂ ದೆಹಲಿ ಕನ್ನಡಿಗರ ಆಸರೆ ಅದಕ್ಕಿದೆ. ಈ ಆಸರೆಯ ಬಲದಿಂದ ಅದು ಮುನ್ನಡೆಯಲಿ ಎಂದು ಹಾರೈಸುತ್ತೇನೆ. ಅಭಿಮತಕ್ಕೆ ಹುಟ್ಟು ಹಬ್ಬದ ಶುಭಾಶಯಗಳು.

**ಡಾ. ವೆಂಕಟಾಚಲ ಹೆಗಡೆ**

## ಮುನ್ನೋಟ

ದೆಹಲಿಯಲ್ಲಿ ಈ ಬಾರಿಯ ಮಳೆ ತಂಪಾಗಿಸಿದೆ. ಈ ವರ್ಷದ ಮಳೆ ಕಳೆದ 15 ವರ್ಷದ ದಾಖಲೆಯನ್ನು ಮುರಿದಿದೆ. ದೆಹಲಿಯಲ್ಲಿ ಈಗ ಸ್ವಲ್ಪಮಟ್ಟಿಗೆ ತಂಪಾದ ವಾತಾವರಣವಿದೆ. ಈ ವಾತಾವರಣದಲ್ಲಿ ಕರ್ನಾಟಕದ ಸಂಘದ ಕಾರ್ಯಕ್ರಮಗಳೂ ಸಹ ತುಂಬಾ ನಡೆಯುತ್ತಿವೆ. ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ, ಕನ್ನಡ ಭಾರತೀ, ದೆಹಲಿ ಕನ್ನಡ ಲೇಡಿಸ್ ಕ್ಲಬ್, ಹಾಗು ಕನ್ನಡದ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶ್ರೀಮತಿ ಜ್ಯೋತ್ಸ್ನಾರಾವ್ ಅವರು ನಮ್ಮನ್ನಗಲಿದ್ದಾರೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಕರ್ನಾಟಕ ಸಂಘದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಅವರ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ.

'ಯಮುನೆಯ ತಡಿಯಲ್ಲಿ ಕನ್ನಡ ನುಡಿ' ಸಾಂಸ್ಕೃತಿಕ ಮಾಲಿಕೆಯಲ್ಲಿನ ಮೊದಲ ಕಾರ್ಯಕ್ರಮ ಶ್ರೀಮತಿ ಶುಭಾ ಧನಂಜಯ ಅವರ ನೃತ್ಯ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂತು. ಪ್ರತಿ ತಿಂಗಳ ಎರಡನೇ ಶನಿವಾರ ಈ ಮಾಲಿಕೆಯಲ್ಲಿ ಅತ್ಯುತ್ತಮವಾದ ಕಾರ್ಯಕ್ರಮಗಳು ನಡೆಯಲಿವೆ. ಸೆಪ್ಟಂಬರ್ 8 ರಂದು ಈ ಮಾಲಿಕೆಯಲ್ಲಿ ಡಾ. ವೀರೇಶ್ ಬಳ್ಳಾರಿ ಹಾಗೂ ತಂಡದವರಿಂದ ಜಾನಪದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಈ ವರ್ಷದ ಏಕಾಂಕ ನಾಟಕ ಸ್ಪರ್ಧೆಯನ್ನು ಅಕ್ಟೋಬರ್ ತಿಂಗಳಿನ 12, 13 ಮತ್ತು 14ರಂದು ಆಯೋಜಿಸಲಾಗಿದೆ. ದೆಹಲಿ ಕನ್ನಡಿಗರು, ಕನ್ನಡ ಸಂಘ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಸಂಘದಲ್ಲಿ ಇನ್ನೂ ತುಂಬಾ ಕಾರ್ಯಕ್ರಮಗಳು ನಡೆಯಬೇಕಾಗಿವೆ. ಯುವ ಪೀಳಿಗೆಗೆ ಒಂದು ದಿನ ಸಂಘದಲ್ಲಿ ಕಾರ್ಯಕ್ರಮ ನಡೆಯಬೇಕಾಗಿದೆ. ಹಾಗೆ ದೆಹಲಿಯಲ್ಲಿರುವ ಕನ್ನಡಿಗರ ಹೋಟೆಲ್ ಉದ್ಯಮಿಗಳಿಂದ ಅಕ್ಟೋಬರ್/ನವೆಂಬರ್ ತಿಂಗಳಿನಲ್ಲಿ ಆಹಾರ ಮೇಳವನ್ನು ಆಯೋಜಿಸುವ ಉದ್ದೇಶವಿದೆ.

ಹೆಣ್ಣು ಮಗುವನ್ನು ರಕ್ಷಿಸುವ ಸಲುವಾಗಿ ಜನರಲ್ಲಿ ಅರಿವು ಮೂಡಿಸಲು 'Save Baby Girl Child to save the Country' ಎಂಬ ಘೋಷಣೆಯೊಂದಿಗೆ ಕರ್ನಾಟಕದ ಬೆಳಗಾಂನಿಂದ ದೆಹಲಿಗೆ ಸುಮಾರು 2000 ಕಿಲೊಮೀಟರ್ ಸ್ಕೇಟಿಂಗ್‌ನಲ್ಲಿ ಬಂದ ಚಿಕ್ಕ ಮಕ್ಕಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಬರಮಾಡಿಕೊಂಡು ಗೌರವಿಸಲಾಯಿತು. ಈ ಚಿಕ್ಕ ಮಕ್ಕಳನ್ನು ರಾಷ್ಟ್ರಪತಿಗಳು ಗೌರವಿಸಿರುವುದು ಅಭಿನಂದನೀಯ. ಇವರಲ್ಲಿ ಅಭಿಷೇಕ್ ನವಾಲೆ ಸ್ಕೇಟಿಂಗ್‌ನಲ್ಲಿ 3 ಬಾರಿ ಸ್ವರ್ಣ ಪದಕಗಳನ್ನು ಪಡೆದಿದ್ದಾನೆ. ಕರ್ನಾಟಕ ಸರ್ಕಾರ ಕೂಡಾ ಈ ಎಳೆಯ ಪ್ರತಿಭೆಯನ್ನು ಗೌರವಿಸಿದೆ. ಈತನಿಗೆ ಇನ್ನೂ ಹೆಚ್ಚಿನ ಯಶಸ್ಸು ಸಿಗಲಿ ಎಂದು ದೆಹಲಿ ಕನ್ನಡಿಗರು ಹಾರೈಸೋಣ.

ದೆಹಲಿ ಕರ್ನಾಟಕ ಸಂಘ ಈ ಬಾರಿಯ ಗಣೇಶೋತ್ಸವವನ್ನು ಈ ತಿಂಗಳ 19ರಂದು ಆಚರಿಸಲಿದೆ. ಎಲ್ಲ ಕನ್ನಡ ಸಂಘ ಸಂಸ್ಥೆಗಳು ಹಾಗು ಕನ್ನಡಿಗರು ಗಣೇಶೋತ್ಸವದಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.

**ಸಿ ಎಂ ನಾಗರಾಜ**

**ದೆಹಲಿ ಕರ್ನಾಟಕ ಸಂಘ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು**

ಸಹಯೋಗದೊಂದಿಗೆ

"ಯಮುನೆಯ ತಡಿಯಲ್ಲಿ ಕನ್ನಡ ನುಡಿ–ಸಾಂಸ್ಕೃತಿಕ ಮಾಲಿಕೆ"

# ಸುಗಮ ಸಂಗೀತ

**ಶ್ರೀ ಮೃತ್ಯುಂಜಯ ದೊಡ್ಡವಾಡ ಮತ್ತು ತಂಡದ ಕಲಾವಿದರಿಂದ**



**ಅಕ್ಟೋಬರ್ 13, 2012ರ ಶನಿವಾರ**

**ಸಮಯ : ಸಂಜೆ 5.30ಗಂಟೆಗೆ**

**ಸ್ಥಳ : ಸಂಘದ ಸಭಾಂಗಣ**

**ತಮಗೆಲ್ಲರಿಗೂ ಆದರದ ಸ್ವಾಗತ**

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

## ಉಚಿತ ವೈದ್ಯಕೀಯ ತಪಾಸಣೆ

ಸೆಪ್ಟೆಂಬರ್ 30 ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

## ದೆಹಲಿ ಕರ್ನಾಟಕ ಸಂಘ

## ಏಕಾಂಕ ನಾಟಕ ಸ್ಪರ್ಧೆ–2012

ಈ ಸಾಲಿನ ಏಕಾಂಕ ನಾಟಕ ಸ್ಪರ್ಧೆಯನ್ನು ಅಕ್ಟೋಬರ್ 12, 13 ಮತ್ತು 14, 2012ರಂದು ಆಯೋಜಿಸಿದ್ದು, ಆಸಕ್ತಿಯುಳ್ಳವರು ತಮ್ಮ ತಂಡದ ಹೆಸರನ್ನು ಸಂಪೂರ್ಣ ವಿವರಗಳೊಂದಿಗೆ ಸಂಘದ ಕಚೇರಿಯಲ್ಲಿ ಸೆಪ್ಟೆಂಬರ್ 30, 2012ರ ಸಾಯಂಕಾಲ 5 ಗಂಟೆಯ ಒಳಗಾಗಿ ನೊಂದಾಯಿಸಬೇಕಾಗಿ ವಿನಂತಿ.

ಸ್ಪರ್ಧೆಯಲ್ಲಿ ಪಾಲ್ಗೊಂಡ ತಂಡಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು.

ನಿಯಮಾವಳಿ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

**011–26109615 / 26104818**

# ‘ಪಶ್ಚಿಮ ಘಟ್ಟ ವಿಶ್ವ ಪಾರಂಪರಿಕ ತಾಣವಾಗಲಿ–ಪಾಂಡುರಂಗ ಹೆಗಡೆ



ಜಗತ್ತಿನಲ್ಲಿ ಅಮೆಝಾನ್ ಕಾಡುಗಳಷ್ಟೇ ಜೀವ ವೈವಿಧ್ಯತೆ ಹೊಂದಿರುವ ಶ್ರೀಮಂತ ಕಾಡು ಅಂದರೆ ನಮ್ಮ ಸಹ್ಯಾದ್ರಿ ಶ್ರೇಣಿಗಳ ಪಶ್ಚಿಮ ಘಟ್ಟ. ಅಮೆಝಾನ್ ಎಲ್ಲರಿಗೂ ತಿಳಿದಿದೆ. ಆದರೆ ನಮ್ಮ ಪಶ್ಚಿಮ ಘಟ್ಟಗಳು ಅಷ್ಟಾಗಿ ಹೆಸರಾಗಿಲ್ಲ. ಆದರೆ ಇತ್ತೀಚೆಗೆ ವಿಶ್ವ ಪಾರಂಪರಿಕ ತಾಣವೆಂಬ ಹಣೆಪಟ್ಟಿಯ ವಿವಾದ ಎದ್ದಿರುವುದರಿಂದ ಇವು ಈಗ ಸುದ್ದಿ ಮಾಡುತ್ತಿವೆ. ಹಾಗಾದರೆ ಈ ವರ್ಲ್ಡ್ ಹೆರಿಟೇಜ್ ಸೈಟ್ ಟ್ಯಾಗ್ ಅರ್ಥಾತ್ ವಿಶ್ವ ಪಾರಂಪರಿಕ ತಾಣದ ಹಣೆ ಪಟ್ಟಿ ಏನು? ಅದರ ಸುತ್ತ ಯಾಕೆ ಇಷ್ಟು ವಿವಾದಗಳಾಗುತ್ತಿವೆ? ಅವಕ್ಕೆ ಕಾರಣಗಳೇನು? ಅನ್ನುವುದರ ಬಗ್ಗೆ ದೆಹಲಿ ಕನ್ನಡಿಗರಲ್ಲಿ ಚಿಂತನೆಯನ್ನು ಹಚ್ಚಿದವರು ಹೆಸರಾಂತ ಪರಿಸರವಾದಿ, ಅಪ್ಪಿಕೋ ಚಳುವಳಿಯ ನೇತಾರ ಶ್ರೀ ಪಾಂಡುರಂಗ ಹೆಗಡೆಯವರು.

ದಿನಾಂಕ 12 ಆಗಸ್ಟ್, ರವಿವಾರದ ದಿನ ಸಂಘದ ಸೆಮಿನಾರ್ ಹಾಲ್‌ನಲ್ಲಿ ಎರಡು ತಾಸಿಗೂ ಮಿಕ್ಕಿ ನಡೆದ ವಿದ್ವತ್ಪೂರ್ಣ ಕಾರ್ಯಕ್ರಮದಲ್ಲಿ ಶ್ರೀ ಪಾಂಡುರಂಗ ಹೆಗಡೆಯವರು ಮಾತನಾಡುತ್ತಾ, “ಗುಜರಾತ್ ಮತ್ತು ಮಹಾರಾಷ್ಟ್ರಗಳ ಗಡಿಯಿಂದ ಆರಂಭಿಸಿ ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳವರೆಗೆ ಸುಮಾರು 1600 ಕಿ.ಮೀ. ಉದ್ದವಾಗಿ ಹಬ್ಬಿರುವ, ಸುಮಾರು 1,50,000 ಚದರ ಕಿ.ಮೀ ವಿಸ್ತಾರವಾಗಿರುವ ಈ ಪಶ್ಚಿಮ ಘಟ್ಟಗಳು ಅದೆಷ್ಟೋ ಸಸ್ಯ ವೈವಿಧ್ಯತೆಗೆ, ಪ್ರಾಣಿ ವೈವಿಧ್ಯತೆಗೆ ತೊಟ್ಟಿಲಾಗಿವೆ, ಕರ್ನಾಟಕದಲ್ಲಂತೂ ಕುಣಬಿ, ತುಮ್ರಿ, ಮರಾಠಿ ಬುಡಕಟ್ಟು ಜನಾಂಗಗಳಿಗೆ ಜೀವಧಾರೆ ಆಗಿದೆ ಅನ್ನುವುದನ್ನು ನೋಡಿದರೆ ಆಶ್ಚರ್ಯ ಹುಟ್ಟಿಸುತ್ತದೆ” ಎಂದರು. ಪಶ್ಚಿಮ ಘಟ್ಟಗಳ ಕಾಡುಗಳು ನಮ್ಮ ಕರ್ನಾಟಕದ ಅದೆಷ್ಟು ಕವಿಗಳಿಗೆ, ಸಾಹಿತಿಗಳಿಗೆ ಸ್ಫೂರ್ತಿ ನೀಡಿವೆ ಅಂದರೆ ಈ ಕಾಡುಗಳಿಲ್ಲದೇ ಹೋಗಿದ್ದರೆ ಬಹುಶಃ ಬೇಂದ್ರೆಯವರ ಮೇಘದೂತವಿರಬಹುದು, ಕಾರಂತರ ಬೆಟ್ಟದ ಜೀವ ಇರಬಹುದು, ಕುವೆಂಪು ಅವರ ಕಾದಂಬರಿಗಳಿರಬಹುದು, ಬಹುಶಃ ಅವುಗಳಿಗೆ ಅಸ್ತಿತ್ವ ಇರುತ್ತಿರಲಿಲ್ಲವೇನೋ. ಇಂಥ ಪಶ್ಚಿಮ ಘಟ್ಟಗಳಿಗೆ ವಿಶ್ವ ಪಾರಂಪರಿಕ ತಾಣ ಅಂತ ಘೋಷಣೆ ಮಾಡುವ ಪ್ರಕ್ರಿಯೆ ಆರಂಭವಾದದ್ದು 2004ರಲ್ಲಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ. ಇಡೀ ಪಶ್ಚಿಮ ಘಟ್ಟಗಳಿಗೆ ವಿಶ್ವ ಪಾರಂಪರಿಕ ತಾಣ ಅಂತ ಘೋಷಿಸಲಾಗುತ್ತದೆ ಎನ್ನುವುದು ತಪ್ಪು. ಕೇವಲ 39 ಸ್ಥಳಗಳನ್ನು ಮಾತ್ರ ಗುರುತಿಸಲಾಗಿದೆ. ಹೀಗಿದ್ದಾಗಿಯೂ ಕೂಡ ಇವತ್ತು ದಕ್ಷಿಣದ ರಾಜ್ಯಗಳಲ್ಲಿ ನಮ್ಮ ಕರ್ನಾಟಕ ಸರಕಾರ ಮಾತ್ರ ಇದನ್ನು ವಿಧಾನ ಸಭೆಯಲ್ಲಿ ಸರ್ವಾನುಮತದಿಂದ ವಿರೋಧಿಸಿರುವಂಥದ್ದು ಅತೀ ದೊಡ್ಡ ದುರಂತ. ಸರಕಾರದ ಈ ಕ್ರಮದ ಬಗ್ಗೆ ಹಳ್ಳಿ ಹಳ್ಳಿಗಳಲ್ಲಿ, ನಗರ ಪ್ರದೇಶಗಳಲ್ಲಿ ಚರ್ಚೆಗಳಾಗಲೇ ಬೇಕು ಎಂದು ಶ್ರೀ ಹೆಗಡೆ ತಮ್ಮ ಅಭಿಪ್ರಾಯ ತಿಳಿಸಿದರು.

ಜಗತ್ತಿನ ಜೀವ ವೈವಿಧ್ಯತೆಯ 8 ಅತ್ಯಂತ ಮುಖ್ಯ ತಾಣಗಳಲ್ಲೊಂದಾದ ಈ ಪರ್ವತ ಶ್ರೇಣಿಗಳು ಹಿಮಾಲಯ ಪರ್ವತಗಳಿಗಿಂತ ಪುರಾತನವಾಗಿದ್ದು ಭಾರತದ ಮಾನ್‌ಸೂನಿನ ಮೇಲೆ, ಹವಾಮಾನದ ಮೇಲೆ ಪ್ರಭಾವ ಬೀರುತ್ತಿದ್ದು ಇದರ ವಿಶ್ವ ಮೌಲ್ಯವನ್ನು ಗೌರವಿಸುತ್ತ, ಯುನೆಸ್ಕೊ ಈ ಘಟ್ಟಗಳಲ್ಲಿ 39 ತಾಣಗಳನ್ನು ವರ್ಲ್ಡ್ ಹೆರಿಟೇಜ್ ಸೈಟ್ ಎಂದು ಘೋಷಿಸಲು ಮುಂದಾಗಿದ್ದನ್ನು, ನಮ್ಮ ಸರಕಾರ ಹಿಂದೆ ಮುಂದೆ ನೋಡದೇ, ಚರ್ಚಿಸದೇ ಯುನೆಸ್ಕೊದ ಈ ಹೆಜ್ಜೆಯನ್ನು ತಿರಸ್ಕರಿಸಿದ್ದು ಮಾನವೀಯತೆಯ ಮೇಲೆ ಹಲ್ಲೆ ಮತ್ತು ಇದು ಸರಕಾರದ ದಾರ್ಷ್ಟ್ಯತೆಯನ್ನು ತೋರಿಸುತ್ತದೆ ಎಂದು ಪಾಂಡುರಂಗ ಹೆಗಡೆ ಕಿಡಿಕಾರಿದರು. ಗಣಿ ಲಾಬಿ ಮಾಡುವವರು, ಕಿರು ಜಲ ವಿದ್ಯುತ್ ಪ್ರೋತ್ಸಾಹಕರು, ನಾಟಾ–ಕಟ್ಟಿಗೆಗಳ ಮಾಫಿಯಾ, ರಿಯಲ್ ಎಸ್ಟೇಟ್ ಮತ್ತು ರೆಸಾರ್ಟ್‌ನವರ ಒತ್ತಡ ಹಾಗೂ ಸಹಯೋಗ ಸರಕಾರದ ಜೊತೆ ಇರುವುದು ಇದರಿಂದ ಸಾಬೀತಾಗುತ್ತದೆ. ಅಭಿವೃದ್ಧಿಯ ಹೆಸರಿನಲ್ಲಿ ಈ ಪಶ್ಚಿಮ ಘಟ್ಟಗಳ ಶೋಷಣೆ ಆಗುತ್ತಿದೆ ಎಂದು ಹೇಳಿದ ಅಪ್ಪಿಕೋ ಚಳುವಳಿಯ ನೇತಾರ ಯಾವ ರೀತಿ 183 ಕಿ.ಮೀ ಹರಿವಿನ ಕಾಳಿ ಈಗ 8 ಕಿ.ಮೀ ಕೂಡ ಹರಿಯುತ್ತಿಲ್ಲ, ಕಾಳಿ ಕಣಿವೆಯಲ್ಲಿ 8 ಅಣೆಕಟ್ಟುಗಳಾಗಿ ಯಾವ ರೀತಿ ಉತ್ತರ ಕನ್ನಡ ಜಿಲ್ಲೆ ಅತ್ಯಾಚಾರಕ್ಕೆ ಒಳಗಾಗುತ್ತಿದೆ ಎಂಬುದನ್ನು ದುಃಖದಿಂದ ಸಂಘದ ಸದಸ್ಯರೊಂದಿಗೆ ಹಂಚಿಕೊಂಡರು.

ಆಫ್ರಿಕಾದ ಮಾಲಿ ದೇಶದಲ್ಲಿ 16ನೇ ಶತಮಾನದಲ್ಲಿ ಮುಸ್ಲಿಂ ಸೂಫಿ ಸಂತರು ಧರ್ಮ ಪ್ರಚಾರದ ಸಮಯದಲ್ಲಿ ತುಂಬಾ ಸುಂದರವಾದ ದೇವಾಲಯಗಳನ್ನು ಕಟ್ಟಿದ್ದರು. ಈಗ 20 ವರ್ಷದ ಹಿಂದೆ ಅವುಗಳನ್ನು ವಿಶ್ವ ಪಾರಂಪರಿಕ ತಾಣ ಎಂದು ಘೋಷಿಸಲಾಯ್ತು. ಒಂದು ತಿಂಗಳ ಹಿಂದೆ ತಾಲಿಬಾನಿಗಳು ಅವನ್ನು ನೆಲಸಮ ಮಾಡಿದರು. ಅವುಗಳ ಪುನರ್‌ನಿರ್ಮಾಣಕ್ಕೆ ಯುನೆಸ್ಕೊ ಕಾರ್ಯ ಆರಂಭಿಸಿದೆ ಎಂದು ಉದಾಹರಣೆ ಸಹಿತ ವಿವರಿಸಿದ ಶ್ರೀ ಪಾಂಡುರಂಗ ಹೆಗಡೆಯವರು ಸರಕಾರ ತಾಲೀಬಾನಿನ ಮಾನಸಿಕತೆಯಲ್ಲಿ ನಮ್ಮ ಪಶ್ಚಿಮ ಘಟ್ಟಗಳನ್ನು ನಾವೇ ನೋಡಿಕೊಳ್ಳುತ್ತೇವೆ ಎಂದು ವಾದಿಸುತ್ತಿರುವುದು ಅಪಾಯಕಾರಿ ಬೆಳವಣಿಗೆ. ಈ ಬೆಳವಣಿಗೆಯ ಬಗ್ಗೆ ಶಿವಮೊಗ್ಗ, ಶಿರಸಿ, ಅಂಕೋಲೆಗಳಲ್ಲಿ ಚರ್ಚೆ ವ್ಯಾಪಕವಾಗಿ ನಡೆಯುತ್ತಿರುವುದು ನಮ್ಮ ಜನರ ಪ್ರಜಾಪ್ರಭುತ್ವದ ನಿಜವಾದ ಕೂಗು ಆಗಬಹುದು, ಇಂಥ ಚರ್ಚೆಗಳ ಮೂಲಕ ಜನ ಜಾಗೃತಿಯಾಗಲಿ ಎಂದು ಹೇಳಿದರು. ಪಶ್ಚಿಮ ಘಟ್ಟಗಳು ಕೇವಲ ಆ ಪ್ರದೇಶದಲ್ಲಿದ್ದವರದು ಮಾತ್ರ ಅಲ್ಲ. ಮಲೆನಾಡ ಹಸಿರು ಬಯಲು ಸೀಮೆಯ ಉಸಿರು ಅನ್ನೋದನ್ನ ಯಾರೂ ಮರೆಯಕೂಡದು ಎಂದು ಕಿವಿಮಾತು ಹೇಳಿದರು.

ನಂತರ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆಯವರು ಯುನೆಸ್ಕೊದ ಕಿರು ಪರಿಚಯ ಮಾಡಿಕೊಡುತ್ತಾ, ಯುನೆಸ್ಕೊ ಅಂದರೆ United Nation Convention on Economics, Social, Cultural Organisation. ಇದು ವಿಶ್ವಸಂಸ್ಥೆಯ ಒಂದು ವಿಶೇಷ ಏಜೆನ್ಸಿ. ಇದಕ್ಕೆ ಅದರದ್ದೇ ಆದ ಧ್ಯೇಯೋದ್ದೇಶಗಳಿವೆ. ಭಾರತ ಕೂಡ ಅದರ ಸದಸ್ಯ ದೇಶ ಎಂದರು. ತಮ್ಮ ಅಂತರರಾಷ್ಟ್ರೀಯ ಕಾನೂನು ಹಾಗೂ ಹಕ್ಕು ಸ್ವಾಮ್ಯ (ಪೇಟೇಂಟ್) ಕ್ಷೇತ್ರದಲ್ಲಿನ ಅನುಭವದ ಮೂಲಕ ಯುನೆಸ್ಕೊ ಮತ್ತು ವರ್ಲ್ಡ್ ಹೆರಿಟೇಜ್ ಟ್ಯಾಗ್‌ನ್ನು ಸರಳವಾಗಿ ಬಿಡಿಸಿಡುತ್ತ ಡಾ.ಹೆಗಡೆಯವರು –ಜಗತ್ತಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ಅಂತರರಾಷ್ಟ್ರೀಯ ಒಡಂಬಡಿಕೆಗಳಿವೆ, ಬಹುರಾಷ್ಟ್ರೀಯ ಒಡಂಬಡಿಕೆಗಳಿವೆ. ಇವುಗಳಲ್ಲಿ (ಸ್ಪರ್ಷಾತೀತ ಸಾಂಸ್ಕೃತಿಕ ಪರಂಪರೆ) intangible cultural heritage ಗೆ ಸಂಬಂಧಿಸಿದ ಒಂದು ವ್ಯಾಖ್ಯಾನ ಇದೆ. ಇದರಲ್ಲಿ ಕೆಲವು treaties ಇವೆ. ಅವುಗಳಲ್ಲಿ ಒಂದು ವರ್ಲ್ಡ್ ಹೆರಿಟೇಜ್ ಕನ್‌ವೆನ್ಷನ್. 1972ರಲ್ಲಿ ರೂಪಿತವಾದ ಇದು ಜಗತ್ತಿನ ಪರಂಪರೆಯ ಮೌಲ್ಯಗಳನ್ನು, ವ್ಯವಸ್ಥೆಗಳನ್ನು ಹೇಗೆ ಕಾಪಾಡುವುದು ಎನ್ನುವುದರ ಬಗ್ಗೆ 6–7 ಪುಟಗಳ ವಿವರಣೆಯನ್ನೊಳಗೊಂಡಿದೆ. ಇದರಲ್ಲಿ ಬರುವಂತಹದ್ದು ನೈಸರ್ಗಿಕ ಮತ್ತು ಸಾಂಸ್ಕೃತಿಕ ಒಡಂಬಡಿಕೆಗಳು. ಯುನೆಸ್ಕೊ ಇವುಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದೆ ಎಂದು ವಿವರಿಸಿದರು. ನಮ್ಮ ದೇಶದಲ್ಲಿ ಈಗಾಗಲೇ ಹಲವಾರು ಸ್ಥಳಗಳು ಅದರಡಿಯಲ್ಲಿ ಬರುತ್ತಿವೆ. ಉದಾಹರಣೆಗೆ– ಖಜುರಾಹೋ, ಹಂಪಿ, ಬಾಲ್ಲಿ, ಸುಂದರ್ ಬನ್ಸ್ ಇತ್ಯಾದಿ. ವರ್ಲ್ಡ್ ಹೆರಿಟೇಜ್ ಸೈಟ್‌ನ ಟ್ಯಾಗ್ ಒಂದು ಸ್ಥಳಕ್ಕೆ ಸಿಕ್ಕಾಗ ಅದರ ಪರಿಣಾಮ ಊಹಿಸುವುದಕ್ಕೂ ಸಾಧ್ಯವಿಲ್ಲ. ಹೀಗಿದ್ದಾಗಲೂ ಸಹ ನಮ್ಮ ಸರಕಾರ ಇಂಥ ಬೌದ್ಧಿಕ ಆಸ್ತಿ (Intellectual Property)ಯ ಬಗ್ಗೆ ಅಸಡ್ಡೆ ತೋರಿಸುವುದು ತುಂಬಾ ಆಶ್ಚರ್ಯದಾಯಕ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

**ವರ್ಲ್ಡ್ ಹೆರಿಟೇಜ್ ಸೈಟ್‌ನ ನಿಯಮಾವಳಿ ಹೇಳುವುದಿಷ್ಟೇ–ಘೋಷಿತ ತಾಣವನ್ನು ಸರಿಯಾಗಿ ನೋಡಿಕೊಳ್ಳಬೇಕು. ಯುನೆಸ್ಕೊ ಸ್ಥಳೀಯ ಸರಕಾರದ ಮೇಲೆ ಯಾವುದೇ ವಿಷಯವಾಗಿ ಒತ್ತಡ ಹೇರುವುದಿಲ್ಲ. ಕೇವಲ ಜಾಗರೂಕತೆಯನ್ನು ಮೂಡಿಸುವ ಕೆಲಸ ಮಾಡುತ್ತದೆ, ಸರಕಾರದ ಪರಿಸರ ವಿರೋಧಿ ಕ್ರಮಗಳನ್ನು ಎತ್ತಿ ತೋರಿಸುತ್ತದೆ.** ಹೇಗೆ ಪದ್ಮ ಪ್ರಶಸ್ತಿಗಳು ಬಂದಾಗ ಒಬ್ಬ ವ್ಯಕ್ತಿಗೆ ಹೆಸರು ಗೌರವ ಸಿಗುತ್ತದೋ ಅದೇ ರೀತಿ ಪಶ್ಚಿಮಘಟ್ಟಗಳಿಗೆ ಒಂದು ರೀತಿಯಲ್ಲಿ ವಿಶ್ವ ಮಟ್ಟದಲ್ಲಿ ನಾವು ನೀಡುವ ಗೌರವವೇ ವಿಶ್ವ ಪಾರಂಪರಿಕ ತಾಣ ಹಣೆ ಪಟ್ಟಿ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿ ಆಗಬಹುದು ಎಂದು ವೆಂಕಟಾಚಲ ಹೆಗಡೆ ವಿವರಿಸಿದರು.

ಚರ್ಚೆಯಲ್ಲಿ ಉಪಸ್ಥಿತರಿದ್ದ ದಿ ವೀಕ್ ಪತ್ರಿಕೆಯ ಸ್ಥಾನೀಯ ಸಂಪಾದಕ ಹಾಗೂ ಅಂಕಣಕಾರ ಶ್ರೀ ಸಚ್ಚಿದಾನಂದ ಮೂರ್ತಿಯವರು ಮಾತನಾಡುತ್ತಾ ಯಾವ ರೀತಿ ಪಾಂಡುರಂಗ ಹೆಗಡೆಯವರು 'ಕಾಡು ನೀತಿ'ಯನ್ನು ರೂಪಿಸಲು ಕಾರಣೀಭೂತರಾದರು ಮತ್ತು ದಿವಂಗತ ರಾಜೀವ್ ಗಾಂಧಿಯವರು ಹೇಗೆ ಇವರ ಕಲ್ಪನೆಗಳನ್ನು ಸೆರೆ ಹಿಡಿದರು ಎಂದು ಹೇಳುತ್ತಾ ಪರಿಸರವಾದಿ ಪಾಂಡುರಂಗ ಹೆಗಡೆಯವರ ಹೋರಾಟ ನಡೆಯುತ್ತಲೇ ಇರಲಿ. ಮುಂದಿನ ಪೀಳಿಗೆ ಅದನ್ನು ಮುಂದುವರಿಸಿಕೊಂಡು ಹೋಗಲಿ ಎಂದು ಆಶಿಸಿದರು. ಆರ್ಥಿಕ ಉದಾರೀಕರಣ ಹಾಗೂ ವಿಶ್ವ ಮಾರುಕಟ್ಟೆ ವ್ಯವಸ್ಥೆಗಳು ಜಾರಿಗೆ ಬಂದಂದಿನಿಂದ ಪರಿಸರವಾದಿಗಳ ಮೇಲೆ ಒತ್ತಡ ಹೆಚ್ಚಿದೆ, ಇದನ್ನು ನಾವೆಲ್ಲರೂ ಸೇರಿ ಕಡಿಮೆ ಮಾಡಬೇಕಿದೆ ಎಂದರು.

ಇದೇ ಸಂದರ್ಭದಲ್ಲಿ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಅಂಕಣಕಾರ ಸುಧೀಂದ್ರ ಶರ್ಮಾ ಮಾತನಾಡುತ್ತ ಪಶ್ಚಿಮ ಘಟ್ಟಗಳು ಸಸ್ಯ ವೈವಿಧ್ಯತೆ, ಪ್ರಾಣಿ ವೈವಿಧ್ಯತೆ, ನೂರಾರು ವಿವಿಧ ರೀತಿಯ ಚಿಟ್ಟೆಗಳು, ಕ್ರಿಮಿಕೀಟಗಳ ಆಗಾಧ ಕಾಡಿನ ಸಂಪತ್ತು. ಪಶ್ಚಿಮ ಘಟ್ಟಗಳನ್ನು ವಿಶ್ವ ಪಾರಂಪರಿಕ ತಾಣವಾಗಿಸುವ ಅಗತ್ಯತೆಯನ್ನು ಒತ್ತಿ ಹೇಳಿದರು.

ಚರ್ಚೆಯಲ್ಲಿ ಸಂಘದ ಅನೇಕ ಸದಸ್ಯರು ತಮ್ಮ ಅಮೂಲ್ಯವಾದ ಅಭಿಪ್ರಾಯಗಳನ್ನು ಹಂಚಿಕೊಂಡರು, ಸಂಶಯಗಳನ್ನು, ಪ್ರಶ್ನೆಗಳನ್ನು ಪರಿಸರ ತಜ್ಞರ ಮುಂದಿಟ್ಟು ಮುಂಬರುವ ದಿನಗಳಲ್ಲಿ ದೆಹಲಿ ಕರ್ನಾಟಕ ಸಂಘವು ಪರಿಸರ ಸಂರಕ್ಷಣೆಯ ವಿಷಯದಲ್ಲಿ ಗಮನಾರ್ಹ ಹೆಜ್ಜೆ ಇಡುವ ಭರವಸೆಯನ್ನಿತ್ತಿತು.

ಸಂತೋಷ ಕುಮಾರ್ ಉಪಾಧ್ಯಾಯ

## ಭಾರತ್ ನಿರ್ಮಾಣ್ ಮತ್ತು ಫ್ಲ್ಯಾಗ್‌ಶಿಪ್ ಯೋಜನೆಗ್ಳ ಅನುಷ್ಠಾನದ ಕುರಿತ 3ನೇ ಆವೃತ್ತಿಯ ಕೈಪಿಡಿ ಬಿಡುಗಡೆ



ಕರ್ನಾಟಕದ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್‌ರವರು 2011–12ನೇ ಆರ್ಥಿಕ ಸಾಲಿನ ಭಾರತ್ ನಿರ್ಮಾಣ್, ಫ್ಲ್ಯಾಗ್‌ಶಿಪ್ ಮತ್ತು ಇತರ ಯೋಜನೆಗಳ ಅನುಷ್ಠಾನದ ಮಾಹಿತಿಯನ್ನೊಳಗೊಂಡ ಕನ್ನಡ ಮತ್ತು ಇಂಗ್ಲಿಷಿನ ಕೈಪಿಡಿಯನ್ನು ಕೇಂದ್ರ ಸಚಿವರು, ಕರ್ನಾಟಕ ಸರ್ಕಾರದ ಸಚಿವರು ಮತ್ತು ರಾಜ್ಯದ ಸಂಸತ್ ಸದಸ್ಯರುಗಳ ಉಪಸ್ಥಿತಿಯಲ್ಲಿ ನವದೆಹಲಿಯ ಕರ್ನಾಟಕ ಭವನದಲ್ಲಿ 17ನೇ ಆಗಸ್ಟ್ 2012ರಂದು ಬಿಡುಗಡೆ ಮಾಡಿದರು. ನವದೆಹಲಿಯಲ್ಲಿನ ಕರ್ನಾಟಕ ಸರ್ಕಾರದ ಹೆಚ್ಚುವರಿ ವಿಶೇಷ ಪ್ರತಿನಿಧಿ ಶ್ರೀ ಬೈಕೆರೆ ನಾಗೇಶ್ ಅವರು ಕೇಂದ್ರ ಮತ್ತು ರಾಜ್ಯ ಸಚಿವಾಲಯಗಳು ಮತ್ತು ಇಲಾಖೆಗಳೊಂದಿಗೆ ಸಮಾಲೋಚಿಸಿ ಮಾಹಿತಿಯನ್ನು ಕಲೆಹಾಕಿ ಈ ಕೈಪಿಡಿಯನ್ನು ಸಿದ್ಧಪಡಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯದ ಸಹಯೋಗದೊಂದಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಈ ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರಾಜ್ಯದಲ್ಲಿ ಜಾರಿಗೆ ತರಲು ಮತ್ತು ಯೋಜನೆಗಳ ಬಗ್ಗೆ ಮಾಹಿತಿಯನ್ನು ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ತಲುಪಿಸುವ ಸದುದ್ದೇಶದಿಂದ ಕೈಪಿಡಿಯನ್ನು ಸಿದ್ಧಪಡಿಸಿ ಬಿಡುಗಡೆಗೊಳಿಸಲಾಗಿದೆ.

ಇದು 3ನೇ ಆವೃತ್ತಿಯ ಕೈಪಿಡಿಯಾಗಿದ್ದು, ಈ ಹಿಂದೆ 2009–10 ಹಾಗೂ 2010–11ನೇ ಸಾಲಿನ ಕೈಪಿಡಿಯನ್ನು ಬಿಡುಗಡೆಗೊಳಿಸಿ, ಕೈಪಿಡಿಯನ್ನು ರಾಜ್ಯದ ಮಾನ್ಯ ಸಚಿವರುಗಳು, ಸಂಸದರು, ಶಾಸಕರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಅಧಿಕಾರಿಗಳಿಗೆ ವಿತರಿಸಲಾಗಿದೆ.

ಕೇಂದ್ರದ ಯೋಜನೆಗಳನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಹಾಗೂ ಹೆಚ್ಚು ತ್ವರಿತವಾಗಿ ಅನುಷ್ಠಾನಗೊಳಿಸಲು 'ಭಾರತ್ ನಿರ್ಮಾಣ್ ಮತ್ತು ಫ್ಲ್ಯಾಗ್‌ಶಿಪ್ ಯೋಜನೆಗಳ ಕೈಪಿಡಿ' ಉಪಯುಕ್ತವಾಗಿರುತ್ತದೆ ಮತ್ತು ಇಂತಹ ಉಪಯುಕ್ತ ಮಾಹಿತಿಯುಳ್ಳ ಕೈಪಿಡಿಯನ್ನು ಹೊರತರುವಲ್ಲಿ ಕರ್ನಾಟಕ ರಾಜ್ಯವೇ ಪ್ರಥಮ ಎಂದು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ.

ರಾಜ್ಯ ಸರ್ಕಾರದ ಸಮಸ್ತ ಅಧಿಕಾರಿ ವರ್ಗದವರ ಪ್ರಾಮಾಣಿಕ ಪ್ರಯತ್ನ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಫಲವಾಗಿ ಕರ್ನಾಟಕದಲ್ಲಿ ಈ ಯೋಜನೆಗಳು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದ್ದು, ಕೇಂದ್ರ ಯೋಜನಾ ಆಯೋಗದ ಅಂಕಿ ಅಂಶಗಳ ಪ್ರಕಾರ ರಾಜ್ಯವು ದೇಶದಲ್ಲಿಯೇ ಮುಂದಿರುವ ರಾಜ್ಯಗಳಲ್ಲಿ ಒಂದಾಗಿರುವುದು ಹೆಮ್ಮೆಯ ವಿಷಯ.

ಕೈಪಿಡಿ ಬಿಡುಗಡೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಜಗದೀಶ್ ಶೆಟ್ಟರ್ ಮಾತನಾಡಿ ಈ ಮಹತ್ತರ ಯೋಜನೆಗಳನ್ನು ಕರ್ನಾಟಕದಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸ ಲಾಗುತ್ತಿದೆಯೆಂದು ಮತ್ತು ಇದಕ್ಕೆ ಪೂರಕವಾಗಿ ಈ ಕೈಪಿಡಿ ಬಹಳ ಉಪಯುಕ್ತ ವಾಗಲಿದೆಯೆಂದು ತಿಳಿಸಿದರು.



ದೆಹಲಿಯ ಹಂಸರಾಜ್ ಮಾಡೆಲ್ ಸ್ಕೂಲ್‌ನ ವಿದ್ಯಾರ್ಥಿನಿಯಾಗಿರುವ ಕುಮಾರಿ ಮೇಘ ಭಟ್ 10ನೇ ತರಗತಿಯ ಸಿ.ಬಿ.ಎಸ್.ಇ. ಪರೀಕ್ಷೆಯಲ್ಲಿ ಶೇ. 95 ಅಂಕ ಗಳಿಸಿ ಶಾಲೆಯಲ್ಲೇ ಪ್ರಥಮ ಸ್ಥಾನ ಪಡೆದಿದ್ದಾಳೆ. ನಾರಾಯಣ ಭಟ್ ಮತ್ತು ಶ್ರೀಮತಿ ಸವಿತಾ ಅವರ ಪುತ್ರಿಯಾಗಿರುವ ಮೇಘ ಹಿಂದಿನ ತರಗತಿಗಳಲ್ಲಿ ಪ್ರಥಮ ಸ್ಥಾನ ಪಡೆಯುತ್ತಿದ್ದು ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ. ಶ್ರೀಮತಿ ಉಷಾ ರಾವ್ ಅವರಿಂದ ಭರತನಾಟ್ಯ ಕಲಿಯುತ್ತಿರುವ ಮೇಘ ಕಳೆದ ವರ್ಷ 'ಅರಂಗ್ರೇಟ್ರಂ' ಪ್ರದರ್ಶನ ನೀಡಿ ಕಲಾ ವಿಮರ್ಶಕರ ಮನಸೂರೆಗೊಂಡಿದ್ದಾಳೆ. ಸಂಗೀತ ಮತ್ತು ಕ್ರೀಡೆಗಳಲ್ಲಿ ಅಭಿರುಚಿ ಬೆಳೆಸಿಕೊಂಡಿರುವ ಮೇಘ ಅನೇಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾಳೆ. ಮೇಘ ಭಟ್ ಅವರಿಗೆ 'ಅಭಿಮತ'ದ ಅಭಿನಂದನೆಗಳು.

## ಗಣೇಶೋತ್ಸವ

ಗಣೇಶ ಮಿತ್ರ ಮಂಡಳಿಯ 20ನೇ ಗಣೇಶೋತ್ಸವವನ್ನು ಸೆಪ್ಟೆಂಬರ್ 19 ರಿಂದ 23 ರವರೆಗೆ 5 ದಿನಗಳ ಕಾಲ ಆಚರಿಸಲಾಗುತ್ತದೆ. ಪ್ರತಿ ದಿನ ಬೆಳಿಗ್ಗೆ, ಸಂಜೆ ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮ, ಭಜನೆ, ಪ್ರಸಾದ ವಿನಿಯೋಗ ನಡೆಯಲಿದೆ.

# ಶತಾಯುಷಿಗಳಾಗಿರುವ ಪ್ರೊ. ಜಿ. ವೆಂಕಟಸುಬ್ಬಯ್ಯ




ಆಗಸ್ಟ್ 23, 1913ರಲ್ಲಿ ಜನಿಸಿದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರಂಥಹ ಸಾಧಕರು ತಮ್ಮ ನೂರನೆಯ ವರ್ಷಕ್ಕೆ ಕಾಲಿಡುತ್ತಿರುವುದು ಕನ್ನಡಿಗರೆಲ್ಲರ ಸೌಭಾಗ್ಯವಾಗಿದೆ. ನಿಘಂಟು ತಜ್ಞರೆಂದೇ ಕನ್ನಡ ನಾಡಿನಲ್ಲಿ ಪ್ರಖ್ಯಾತರಾದ ವೆಂಕಟಸುಬ್ಬಯ್ಯನವರು ಹುಟ್ಟಿದ್ದು ಮಂಡ್ಯ ಜಿಲ್ಲೆಯ ಕೈಗೋನಹಳ್ಳಿಯಲ್ಲಿ. ತಂದೆ ಗಂಜಾಂ ತಿಮ್ಮಣ್ಣಯ್ಯನವರು ಮೈಸೂರು ಅರಮನೆಯ ವಿದ್ವಾಂಸರಾಗಿದ್ದವರು. ತಾಯಿ ಸುಬ್ಬಮ್ಮನವರು. ಜಿ. ವಿ. ಅವರ ಪ್ರಾರಂಭಿಕ ಶಿಕ್ಷಣ ಹುಟ್ಟಿದೂರಿನಲ್ಲಿಯೇ ನೆರವೇರಿತು. ಅವರು ಹೈಸ್ಕೂಲಿಗೆ ಸೇರಿದ್ದು ಮಧುಗಿರಿಯಲ್ಲಿ. ಇಂಟರ್ ಮೀಡಿಯೆಟ್ ಮತ್ತು ಆನರ್ಸ್ ಓದಿದ್ದು ಮೈಸೂರು ಮಹಾರಾಜ ಕಾಲೇಜಿನಲ್ಲಿ. 1937ರಲ್ಲಿ ಎಂ.ಎ ಮತ್ತು 1939ರಲ್ಲಿ ಬಿ.ಟಿ. ಪದವಿ ಗಳಿಸಿದರು.

ತಮ್ಮ ನೂರು ವರ್ಷದ ಬದುಕನ್ನು ಕುರಿತು ಜೀ.ವಿ ಹೇಳುತ್ತಾರೆ "ಸಂಸ್ಕೃತದಲ್ಲಿ ಒಂದು ಮಾತಿದೆ. 'ಜೀವನ್ ಭದ್ರಾಣಿ ಪಶ್ಯತಿ' ಅಂತ. ಆ ಮಾತು ನನಗೆ ಚೆನ್ನಾಗಿ ಅನ್ವಯಿಸುತ್ತೆ. ನಾನು ಹೊಸಗನ್ನಡ ಅರುಣೋದಯದ ಕಾಲವನ್ನು ಕಂಡವನು. ಹೊಸಗನ್ನಡ ಬೆಳೀಬೇಕು ಅನ್ನುವ ಬಿ. ಎಂ. ಶ್ರೀಕಂಠಯ್ಯನವರು ಮಾಡಿದ ಪ್ರಯತ್ನದ ಪರಿಣಾಮವಾಗಿ ಆಂದೋಲನ ಸುಮಾರು 75 ವರ್ಷಗಳ ಕಾಲ ಬಹಳಷ್ಟು ಕೆಲಸ ಮಾಡಿತು. ಬಹುಶಃ ಇನ್ಯಾವ ಭಾರತೀಯ ಭಾಷೆಯಲ್ಲಿಯೂ ಆಗದೆ ಇದ್ದಂತಹ ಸಾಹಿತ್ಯದ ಪ್ರಯೋಗ, ಪ್ರಯೋಜನ ಎಲ್ಲ ಆಗ ಆದವು. ಅದನ್ನು ನಾನು ಕಣ್ಣಾರೆ ಕಂಡವನು. ಅಲ್ಲದೆ ಬಿ. ಎಂ. ಶ್ರೀಕಂಠಯ್ಯನವರ ನೇರ ಶಿಷ್ಯನಾದ್ದರಿಂದ ಅವರ ಉತ್ಸಾಹ ಮತ್ತು ಪರಿಶ್ರಮವನ್ನು ಕಂಡವನು. ಈ ನೂರು ವರ್ಷ ಬದುಕಿರೋದಿದೆಯಲ್ಲ, ನನಗೆ ಒಂದು ವಿಧದಲ್ಲಿ ಸಂತೋಷವನ್ನು ತರುತ್ತೆ. ನೂರು ವರ್ಷ ಅನ್ನೋದು ಇಷ್ಟು ಬೇಗ ಆಗ್ ಹೋಗತ್ಯೆ? ಇಷ್ಟೇನಾ ನೂರು ವರ್ಷ ಅನ್ನೋದು ಅಂತ ಆಶ್ಚರ್ಯ ಆಗುತ್ತೆ. ನಾನು ಎಷ್ಟು ಕೆಲಸ ಮಾಡಬಹುದಾಗಿತ್ತೋ ಅಷ್ಟು ಕೆಲಸ ಮಾಡಿಲ್ಲ ಅಂತ ಒಂದ್ಕಡೆ ವ್ಯಸನಾನೂ ಇದೆ. ನನಗೆ ಕೆಲವು ವಿಚಾರಗಳಲ್ಲಿ ಹೆಚ್ಚು ಸಾಮರ್ಥ್ಯ ಇತ್ತು. ಅದನ್ನ ಉಪಯೋಗಿಸಿಕೊಳ್ಳುವ ಅವಕಾಶ ಒದಗಲಿಲ್ಲ. ನಾನು ವಿಶ್ವವಿದ್ಯಾಲಯದಲ್ಲಿ ಇದ್ದಿದ್ರೆ, ಬೇಕಾದಂಥ ಗ್ರಂಥಗಳೆಲ್ಲ ಸಿಕ್ಕುವ ಹಾಗಿದ್ದಿದ್ರೆ, ನನ್ನ ಮನಸ್ಸಿನಲ್ಲಿ ಏನೇನು ಇಟ್ಕೊಂಡಿದ್ನೋ ಅದನ್ನೆಲ್ಲ ಮಾಡಬಹುದಾಗಿತ್ತು. ಕನ್ನಡ ಎಂ. ಎ ಪರೀಕ್ಷೆಗೆ ಆಗ ನಾನು ಮತ್ತು ಶಂಕರನಾರಾಯಣರಾವ್ ಇಬ್ಬರೇ ವಿದ್ಯಾರ್ಥಿಗಳು. ಬಿ.ಎಂ. ಶ್ರೀ ಅವರು ಮೌಖಿಕ ಪರೀಕ್ಷೆಗೆ ಬಂದಿದ್ದರು. ಪರೀಕ್ಷೆಯ ನಂತರ, 'ಪರೀಕ್ಷೆಯಲ್ಲಿ ನೀವು ಸಫಲರಾಗಿದ್ದೀರಿ. ಆದರೆ ನಿಮ್ಮ ಜವಾಬ್ದಾರಿ ಇಲ್ಲಿಗೇ ಮುಗಿಯುವುದಿಲ್ಲ. ಏಕೆಂದರೆ ನಾವು ಮುದುಕರಾಗಿಬಿಟ್ವಿ. ಈ ಕನ್ನಡವನ್ನ ನಿಮ್ಮ ಕೈಲಿ ಇಡ್ತಾ ಇದೀವಿ, ಅಂತ ಹೇಳಿದ್ರು. ನಾನು ಕನ್ನಡ ಕೆಲಸ ಮಾಡಲು ಈ ಮಾತು ಪ್ರೇರಣೆಯಾಯಿತು'.

ಪ್ರೊ. ಜಿ. ವೆಂಕಟಸುಬ್ಬಯ್ಯನವರು ಉದ್ಯೋಗಕ್ಕಾಗಿ ಸೇರಿದ್ದು ಮಂಡ್ಯದ ಪುರಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ. ನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಬೆಂಗಳೂರಿನ ಹೈಸ್ಕೂಲಿನಲ್ಲಿ ಕೆಲಕಾಲ ಅಧ್ಯಾಪಕರಾಗಿ, ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, 1972ರಲ್ಲಿ ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ 1973ರಲ್ಲಿ ನಿವೃತ್ತಿ ಪಡೆದರು.

ಜಿ. ವೆಂ.ರವರು ಕನ್ನಡ ಸಾಹಿತ್ಯವನ್ನು ಬೆಳೆಸುವ ಕೈಂಕರ್ಯದಲ್ಲಿ ಎಂದೂ ಮುಂದು. ಮಹಾರಾಜಾ ಕಾಲೇಜಿನ ಪ್ರಚಾರೋಪನ್ಯಾಸ ಪುಸ್ತಕ ಮಾಲೆಯಲ್ಲಿ ಅವರು ಹಲವಾರು ಕೃತಿ ರಚನೆ ಮಾಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ 'ಬಾಲ ಕರ್ನಾಟಕ' ಸಂಘ ಸ್ಥಾಪನೆ ಮಾಡಿದರು. ಎಚ್.ಎಂ. ಶಂಕರ ನಾರಾಯಣರಾಯರು ಹೊರತಂದ 'ರೋಹಿಣಿ' ಕೈಬರಹದ ಪತ್ರಿಕೆಗೆ ಸಹಾಯ ನೀಡಿದರು. ಬೆಂಗಳೂರಿಗೆ ಬಂದ ನಂತರ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿಯಾದರು. 1954–56ರವರೆಗೆ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ, 1965–69ರವರೆಗೆ ಅಧ್ಯಕ್ಷರಾಗಿ, ಪರಿಷತ್ತಿನ ನಿಘಂಟು ಸಮಿತಿಯ ಸದಸ್ಯರಾಗಿ, 1965–67ರವರೆಗೆ ವಿಶ್ವಕೋಶದ ಸಮಿತಿಯ ಸದಸ್ಯರಾಗಿ, ವಿಶ್ವವಿದ್ಯಾಲಯದ ಅಕೆಡಮಿಕ್ ಕೌನ್ಸಿಲ್, ಸೆನೆಟ್, ಪಠ್ಯಪುಸ್ತಕ ಸಮಿತಿ, ಪರೀಕ್ಷಾ ಸಮಿತಿಯ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆ ಅಪಾರವಾದದ್ದು.

ಕನ್ನಡ ನಿಘಂಟು ಮೂಡುವುದಕ್ಕೆ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಕೊಡುಗೆ ಮಹತ್ವವಾದದ್ದು. ಕನ್ನಡ ನಿಘಂಟು ತಯಾರು ಮಾಡಬೇಕು ಎಂದು ಅವರಿಗೆ ಮೊದಲಿನಿಂದಲೂ ಆಸಕ್ತಿ ಇತ್ತು. 1943ರ ವರ್ಷದಲ್ಲಿ ಡಿ. ಎಲ್. ನರಸಿಂಹಾಚಾರ್ಯರು ನಿಘಂಟಿಗೆ ಶಬ್ದಗಳನ್ನು ಆರಿಸುವುದಕ್ಕೆ ಆಯೋಜಿಸಿದ್ದ ಕೆಲವರಲ್ಲಿ ಪ್ರೊ. ಜಿ. ವಿ. ಅವರೂ ಒಬ್ಬರು. ಇವರುಗಳ ಕೈಯಲ್ಲಿ ದಿನನಿತ್ಯದ ಭಾಷೆಯಿಂದ, ಹಳೆಗನ್ನಡದಿಂದ, ಹೊಸಗನ್ನಡದಿಂದ ನಿಘಂಟಿಗೆ ಬೇಕಾದ ಶಬ್ದಗಳನ್ನು ಆಯ್ಕೆ ಮಾಡುವ ಜವಾಬ್ದಾರಿ ವಹಿಸಿದರು. ಮುಂದೆ ಜಿ. ವಿ. ಅವರಿಗೆ ಪ್ರೊಫೆಸರ್ ಆಗಿದ್ದ ಎ. ಆರ್. ಕೃಷ್ಣಶಾಸ್ತ್ರಿಗಳು ಪರಿಷತ್ತಿನ ನಿಘಂಟಿಗೆ ಪ್ರಧಾನ ಸಂಪಾದಕರಾದಾಗ, ಇವರಲ್ಲಿ ನಿಘಂಟಿನ ಕುರಿತಾಗಿದ್ದ ಪ್ರೀತಿಯನ್ನು ಗಮನಿಸಿ ಅವರನ್ನು ವೈಯಕ್ತಿಕವಾಗಿ ಮನೆಗೆ ಕರೆಸಿಕೊಂಡು ಸಂಸ್ಕೃತ ನಿಘಂಟನ್ನ, ವೈದಿಕ ನಿಘಂಟನ್ನ, ಯಾಸ್ಕನ ನಿರುಕ್ತವನ್ನ ಪಾಠ ಮಾಡಿದರು. ಹಾಗಾಗಿ ಪ್ರೊ. ಜಿ. ವಿ. ಅವರಿಗೆ ಅದರ ಮೇಲೆ ಅಪಾರ ಆಸಕ್ತಿ ಮೂಡಿತ್ತು. ಮುಂದೆ ಜಿ. ವಿ. ಅವರೇ ಪರಿಷತ್ತಿನ ನಿಘಂಟಿಗೆ ಪ್ರಧಾನ ಸಂಪಾದರಾದರು.

ಪ್ರೊ ಜಿ ವಿ ಅವರ ಮತ್ತೊಂದು ಮಹತ್ವದ ಸಾಧನೆಯೆಂದರೆ ರಾಮಕೃಷ್ಣ ಸ್ಟೂಡೆ–ಂಟ್ ಹೋಂ ಅನ್ನು ಕಟ್ಟಿ ಬೆಳೆಸಿದುದು. ಅದಕ್ಕೆ ಮೊದಲು ಜಿ ವಿ ಅವರನ್ನು ಸದಸ್ಯರಾಗಿಸಿದವರು ಎಂ. ಬಿ. ಗೋಪಾಲಸ್ವಾಮಿ ಅವರು. ಗೋಪಲಾಸ್ವಾಮಿ ಅವರು ನೀವು ಮಕ್ಕಳಿಗೆ ಪ್ರೀತಿಯಿಂದ ಪಾಠ ಹೇಳುವುದರಲ್ಲಿ ಎತ್ತಿದ್ದ ಕೈ. ಹಾಗಾಗಿ ನೀವು ಈ ಕೆಲಸ ಮಾಡಬೇಕು ಎಂದಾಗ ಜಿ. ವಿ ಅವರು ಪ್ರತಿನಿತ್ಯ ಬಿಡುವಿನ ಹೊತ್ತಿನಲ್ಲಿ ಹೋಗಿ ಅಲ್ಲಿನ ಬಡ ಮಕ್ಕಳಿಗೆ ಪಾಠ ಹೇಳುತ್ತಿದ್ದರು. ಅಲ್ಲಿ ಅವರು ವಿದ್ಯಾರ್ಥಿಗಳಿಂದ ಅದೆಷ್ಟು ಪ್ರೀತಿ ಸಂಪಾದಿಸಿದರು ಅಂದರೆ ಅವರನ್ನೇ ವಾರ್ಡನ್ ಮಾಡಲಾಯಿತು. ರಾಮಕೃಷ್ಣ ಸ್ಟೂಡೆಂಟ್ ಹೋಂನಲ್ಲಿ ಪ್ರೊ ಜಿ ವಿ ಅವರು ಬೆಳೆಸಿದ ವಿದ್ಯಾರ್ಥಿಗಳ ಸಂಖ್ಯೆ ಸಹಸ್ರಾರು.

ಶಿಕ್ಷಣ ಮಾಧ್ಯಮವಾಗಿ ಕನ್ನಡ ಹೇಗಿರಬೇಕು, ಶಿಕ್ಷಣ ವ್ಯವಸ್ಥೆ ಹೇಗಿರಬೇಕು ಎಂಬ ವಿಚಾರದಲ್ಲಿ ಪ್ರೊ. ಜಿ. ವೆಂಕಟಸುಬ್ಬಯ್ಯನವರ ಮಾತು ಅತ್ಯಂತ ಅರ್ಥಪೂರ್ಣವಾಗಿದೆ. 'ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯ ದೊಡ್ಡ ತಪ್ಪು ಏನೆಂದರೆ, ವಿಜ್ಞಾನವನ್ನು ಬೋಧೆ ಮಾಡುವಾಗ ಪಾರಿಭಾಷಿಕ ಶಬ್ದಗಳನ್ನು ಉಪಯೋಗ ಮಾಡದೇ, ಅದನ್ನು ಅನುವಾದ ಮಾಡೋಕೆ ಪ್ರಯತ್ನಪಟ್ಟದ್ದು. ಕನ್ನಡದಲ್ಲಿ ವಿಜ್ಞಾನ ಬೋಧಿಸುವುದಕ್ಕೆ ಬರುವುದಿಲ್ಲ ಎಂಬ ವಾದ ಶುರುವಾಗಿದ್ದು ಅಲ್ಲೇ. ಇಂಗ್ಲಿಷ್ ಮೀಡಿಯಂ ಎಂದು ಬಂದಿದ್ದು ಆ ಕಾರಣಕ್ಕೇ. ಇಂಗ್ಲಿಷ್ ಅನ್ನು ಭಾಷೆಯಾಗಿ ಕಲಿಸೋದೇ ಬೇರೆ. ಮೀಡಿಯಂ ಆಗಿ ಕಲಿಸೋದೇ ಬೇರೆ. ಇಂಗ್ಲಿಷ್ ಮೀಡಿಯಂನಿಂದ ಇಂಗ್ಲಿಷ್ ಭಾಷೆ ಖಂಡಿತವಾಗಿ ಬರೋಲ್ಲ. ಅದಕ್ಕೆ ಬೇರೆ ಮಾದರಿಯ ಕಲಿಕೆ ಬೇಕು. ಇಂಗ್ಲಿಷ್ ಭಾಷೆಯನ್ನು ಒಂದು ಸಬ್ಜೆಕ್ಟ್ ಆಗಿ ಪಾಠ ಮಾಡಿ. ಕನ್ನಡ ಮೀಡಿಯಂ ಇಟ್ಕೊಳ್ಳಿ.

ಇಂಗ್ಲಿಷ್ ಮೀಡಿಯಂ ಬಿಟ್ಹಾಕಿ. ಎಜುಕೇಷನ್ ಅನ್ನೋದನ್ನ ಸೆಂಟ್ರಲ್ ಸಬ್ಜೆಕ್ಟ್ ಮಾಡಬೇಕು. ಆವಾಗ ಒಂದೇ ಮೆಥೆಡ್ನಲ್ಲಿ ದೇಶದಾದ್ಯಂತ ಶಿಕ್ಷಣ ನಡೆ-ಯುತ್ತೆ. ಈಗ ಅದು ಸ್ಟೇಟ್ ಸಬ್ಜೆಕ್ಟ್ ಆಗಿರುವುದರಿಂದ ಒಂದೊಂದು ಸ್ಟೇಟ್ನಲ್ಲಿ ಒಂದೊಂದು ಥರಾ ಕಲಿಕೆಯ ವಿಧಾನ ಇದೆ. ಇಷ್ಟ ಬಂದಹಾಗೆ ಮಾಡ್ಕೊಂಡು ಹೋಗ್ತಿದಾರೆ. ಒಟ್ಟು ಇಂಡಿಯಾ ದೇಶಕ್ಕೆ ಒಂದೇ ರೀತಿಯ ಶಿಕ್ಷಣ ಬೇಕು. ಇದನ್ನ ನಾನು ಅನೇಕ ಸಲ ಹೇಳಿದೀನಿ, ಈಗ ಆಗಬೇಕಿರುವ ಕೆಲಸ ಸಂಸತ್ತಿನಲ್ಲಿ ಈ ಕುರಿತು ತಿದ್ದುಪಡಿಯನ್ನು ತರುವುದು'. ರಾಜ ಮಹಾರಾಜರ ಕಾಲದಲ್ಲಿ ಇದ್ದ ಒಳ್ಳೆಯ ಆಡಳಿತ ಬರಬರುತ್ತಾ ಹದಗೆಟ್ಟು, ರಾಜಕೀಯ, ಆಡಳಿತ, ನ್ಯಾಯಾಂಗ ಇವೆಲ್ಲಾ ಭ್ರಷ್ಟತೆಯಿಂದ ತುಂಬಿತುಳುಕುತ್ತಿರುವ ಬಗ್ಗೆ ಜೀ ವಿ ಅವರಲ್ಲಿ ಅಪಾರವಾದ ನೋವಿದೆ.

ಪ್ರೊ ಜಿ. ವೆಂಕಟಸುಬ್ಬಯ್ಯನವರು ರಚಿಸಿರುವ ಕೃತಿಗಳಲ್ಲಿ ವಿಮರ್ಶೆಯಾಗಿ ನಯಸೇನ, ಅನುಕಲ್ಪನೆ; ಸಂಪಾದಿತ ಕೃತಿಗಳಾಗಿ ವಿಕಾಸ, ಕಾವ್ಯಲಹರಿ, ಕಾವ್ಯಸಂಪುಟ; ಅನುವಾದಗಳಾಗಿ ಶಂಕರಾಚಾರ್ಯಯ, ಕಬೀರ, ಲಿಂಡನ್ ಜಾನ್ಸನ್; ಮಕ್ಕಳ ಕೃತಿಗಳಾಗಿ ರಾಬಿನ್‌ಸನ್ ಕ್ರೂಸೋ, ಕವಿಜನ್ನ, ಚಾವುಂಡರಾಯ; ಕಾವ್ಯಕೃತಿಗಳಾಗಿ ನಳಚಂಪು ಸಂಗ್ರಹ, ಅಕ್ರೂರ ಚರಿತ್ರೆ ಸಂಗ್ರಹ, ಕರ್ಣ ಕರ್ಣಾಮೃತ ಮುಂತಾದವು ಪ್ರಖ್ಯಾತವಾಗಿವೆ. ಕನ್ನಡ ಶಾಸನ ಪರಿಚಯ, ಭಾಷಾಂತರ ಪಾಠಗಳು, ಕಾಲೇಜು ಭಾಷಾಂತರ, ಇಗೋ ಕನ್ನಡ, ಸಾಮಾಜಿಕ ನಿಘಂಟು ಮುಂತಾದ ವಿಶಿಷ್ಟ ಕೃತಿಗಳೂ ಸೇರಿದಂತೆ ಪ್ರೊ. ಜಿ. ವಿ ಅವರು ಅರವತ್ತಕ್ಕೂ ಹೆಚ್ಚು ಮಹತ್ವಪೂರ್ಣ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡಮಿ ಪ್ರಶಸ್ತಿ, ಶಂಬಾ ಪ್ರಶಸ್ತಿ, ಸೇಡಿಯಾಪು ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಮುದ್ದಣ ಪುರಸ್ಕಾರ, ರಾಜ್ಯ ಪತ್ರಿಕಾ ಅಕಾಡಮಿ ವಿಶೇಷ ಪ್ರಶಸ್ತಿ, ಅಂಕಣಶ್ರೀ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ಗೊರೂರು ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಅ.ನ. ಕೃ. ಪ್ರತಿಷ್ಠಾನ ಪ್ರಶಸ್ತಿ, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಂತಾದ ಹಲವಾರು ಗೌರವಗಳು ಪ್ರೊ. ಜಿ. ವಿ. ಅವರಿಗೆ ಸಂದಿವೆ.

ಇಂದಿನ ಬರಹಗಾರರು ಚೆನ್ನಾಗಿ ಬರೆಯುತ್ತಿದ್ದಾರೆ. ಚೆನ್ನಾಗಿ ಬರೆಯಿರಿ. ಬರೆಯುವುದಕ್ಕಿಂತ ಹತ್ತುಪಟ್ಟು ಹೆಚ್ಚಾಗಿ ಓದಿ ಎನ್ನುತ್ತಾರೆ. ಎಲ್ಲ ವಯಸ್ಸಿನ ವಯೋಮಾನದವರನ್ನು ಯಾವುದೇ ಭೇದವಿಲ್ಲದೆ ಆತ್ಮೀಯವಾಗಿ ಮಾತನಾಡಿಸುವ ಗುಣ ಅವರ ಬಳಿ ಹೋದ ನಮ್ಮಂತಹ ಪ್ರತಿಯೋರ್ವರಿಗೂ ಲಭ್ಯವಾಗಿದೆ.

ನೂರನೆಯ ವರ್ಷದ ಬದುಕಿಗೆ ಕಾಲಿರಿಸಿರುವ ಈ ಹಿರಿಯರಿಗೆ ನಮನ ಸಲ್ಲಿಸುತ್ತಾ ಅವರ ಬದುಕು ಸಂತಸ ಪೂರ್ಣವಾಗಿರಲಿ, ಕನ್ನಡಿಗರಿಗೆ ಅವರ ಮಾರ್ಗದರ್ಶನ ನಿರಂತರವಾಗಿ ದೊರಕುತ್ತಿರಲಿ ಎಂದು ಶುಭ ಕೋರುತ್ತಾ ಹುಟ್ಟುಹಬ್ಬದ ಶುಭ ಹಾರೈಕೆಗಳನ್ನು ಸಲ್ಲಿಸೋಣ.

ಕನ್ನಡ ಸಾರಸ್ವತ ಲೋಕಕ್ಕೆ ವಿಶಿಷ್ಟ ಕೊಡುಗೆ ನೀಡಿದ ಶತಾಯುಷಿ ಜಿ.ವಿ. ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃದಯ ಪೂರ್ವಕ ಶುಭಾಶಯಗಳು.

ಕೃಪೆ : ಕನ್ನಡ ಸಂಪದ



ಕನ್ನಡ ಚಿತ್ರರಂಗದ ಜನಪ್ರಿಯ ಹಾಸ್ಯ ಕಲಾವಿದ ಟೆನ್ನಿಸ್ ಕೃಷ್ಣ ಅವರು ಆಗಸ್ಟ್ 15ರಂದು ಸಂಘಕ್ಕೆ ಭೇಟಿ ನೀಡಿದರು


# Saujanya Printing Press

A HOUSE OF QUALITY PRINTING

D-47, Okhla Industrial Area, Phase-I,
New Delhi - 110 020
Phone : 40520770, 26815778
Mobile : 9811104398, 9811604398
e-mail : saujanyapp2010@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ‘ಯಮುನೆಯ ತಡಿಯಲ್ಲಿ ಕನ್ನಡ ನುಡಿ’ ಸಾಂಸ್ಕೃತಿಕ ಮಾಲಿಕೆಯ ಮೊದಲ ಕಂತು ‘ಬೆಳ್ಳಿ ಚುಕ್ಕಿ ಕಿತ್ತೂರು ರಾಣಿ ಚೆನ್ನಮ್ಮ’



‘ಯಮುನೆಯ ತಡಿಯಲ್ಲಿ ಕನ್ನಡ ನುಡಿ’ ಸಾಂಸ್ಕೃತಿಕ ಮಾಲಿಕೆಯ ಮೊದಲ ಕಂತು ‘ಬೆಳ್ಳಿ ಚುಕ್ಕಿ ಕಿತ್ತೂರು ರಾಣಿ ಚೆನ್ನಮ್ಮ’ ಶುಭ ಧನಂಜಯ ಮತ್ತು ತಂಡದವರಿಂದ ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಗಸ್ಟ್ 11ರ ಶನಿವಾರ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಯಿತು. ಉತ್ತರ ರೈಲ್ವೇಯ ಉಪ ರಕ್ಷಣಾ ಆಯುಕ್ತರಾದ ಸಂತೋಷ್ ಎನ್. ಚಂದ್ರನ್, ನಾಟ್ಯ ಸರಸ್ವತಿ ಶುಭಾಧನಂಜಯ ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ದೆಹಲಿಯಲ್ಲಿ ಕಳೆದ ಆರು ವರ್ಷಗಳಿಂದ ನೆಲೆಸಿರುವ ಸಂತೋಷ್ ಎನ್. ಚಂದ್ರನ್ ಅವರು ರಾಜಧಾನಿಯ ಕೇಂದ್ರ ಭಾಗದಲ್ಲಿ ಕನ್ನಡ ಚಟುವಟಿಕೆಗಳು ಇಷ್ಟು ಸಡಗರದಲ್ಲಿ ಆಚರಣೆಗೊಳ್ಳುತ್ತಿರುವುದುನ್ನು ಕಂಡು ತಮಗೆ ಅತ್ಯಂತ ಸಂತೋಷವಾಗಿದೆಯೆಂದು ಸಂತಸವನ್ನು ವ್ಯಕ್ತಪಡಿಸಿದರು. ಮಾಜಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯುಕ್ತ ಮತ್ತು ಪ್ರಸ್ತುತ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಇಲಾಖೆಯ ನಿರ್ದೇಶಕರಾಗಿರುವ ಡಾ. ಮನು ಬಳಿಗಾರ್ ಅವರು ಸಂಘದ ಕಟ್ಟಡ ಹೆಚ್ಚುವರಿ ಕೆಲಸಗಳ ನಿರ್ಮಾಣ ಕಾರ್ಯದ ಪರಿವೀಕ್ಷಣೆಗಾಗಿ ಭೇಟಿಕೊಟ್ಟಾಗ ಈ ‘ಯಮುನೆಯ ತಡಿಯಲ್ಲಿ ಕನ್ನಡ ನುಡಿ’ ಸಾಂಸ್ಕೃತಿಕ ಮಾಲಿಕೆಯನ್ನು ಮಂಜೂರುಗೊಳಿಸಿ, ಪ್ರತಿ ತಿಂಗಳ ಎರಡನೇ ಶನಿವಾರ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮ ರಾಜಧಾನಿಯಲ್ಲಿ ನಡೆಯುತ್ತಿರುವಂತೆ ಪ್ರಾಯೋಜಿಸಿದ್ದನ್ನು ಸ್ಮರಿಸಿದ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರು ತಮ್ಮ ಸ್ವಾಗತ ಮತ್ತು ಪ್ರಸ್ತಾವನೆಯಲ್ಲಿ ಮನಃಪೂರ್ವಕವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ಖ್ಯಾತ ಕಥಕ್ ಮತ್ತು ಭರತನಾಟ್ಯ ಕಲಾವಿದೆ, ನಾಟ್ಯ ಸರಸ್ವತಿ ಶುಭಾ ಧನಂಜಯ್ ಅವರು “ಬೆಳ್ಳಿ ಚುಕ್ಕಿ” ಕಿತ್ತೂರು ರಾಣಿ ಚೆನ್ನಮ್ಮ ನೃತ್ಯ ರೂಪಕವನ್ನು ಅಮೋಘವಾಗಿ ಪ್ರದರ್ಶಿಸಿದರು. ದೇಶದಾದ್ಯಂತ 1857 ರಲ್ಲಿ ಸ್ವಾತಂತ್ರ್ಯ ಸಂಗ್ರಾಮ ಚಳುವಳಿ ಆರಂಭಗೊಳ್ಳುವ ಮುವತ್ತ್ಮೂರು ವರ್ಷಗಳ ಮೊದಲೇ ವೀರ ರಾಣಿ ಚೆನ್ನಮ್ಮ ಕಿತ್ತೂರಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನ್ನು ಮೊಳಗಿಸಿದ್ದಳು. ಅಲ್ಲದೇ ಝಾನ್ಸಿ ರಾಣಿ ಲಕ್ಷ್ಮೀಬಾಯಿಗಿಂತಲೂ 56 ವರ್ಷ ಹಿಂದಿನವಳು. ಸ್ಥಾನಿಕ ರಾಜರುಗಳು ಬ್ರಿಟಿಷರಿಗೆ ನೀಡಬೇಕಾಗಿದ್ದ ಕಪ್ಪ ಕಾಯಿದೆಯನ್ನು ನಿರಾಕರಿಸಿ ದಂಗೆಯೆದ್ದ ಮೊದಲ ಮಹಿಳೆ. ತನ್ನ ಅಗಾಧ ಶೌರ್ಯ– ಧೈರ್ಯ ಸಾಹಸಗಳಿಂದ ಬ್ರಿಟಿಷರನ್ನು ಬಗ್ಗುಬಡಿದ ವೀರ ವನಿತೆ ಚೆನ್ನಮ್ಮನ ಸಾಹಸ ಗಾಥೆಯನ್ನು ಶುಭಾ ಧನಂಜಯ ತಂಡದ ಕಲಾವಿದೆಯರು ಅತ್ಯಂತ ಸಮರ್ಪಕವಾಗಿ ಪ್ರದರ್ಶಿಸಿದರು. ಜತೆಗೆ ಜಾತಿ–ಅಸವಮಾನತೆ, ಶೋಷಣೆ ಹಾಗೂ ಪುರೋಹಿತಶಾಹಿಯುನ್ನು ಧಿಕ್ಕರಿಸಿದ ವಿಶ್ವಮಾನವ ರಸಋಷಿ ಕುವೆಂಪು ಅವರ ‘ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ’ ಹಾಗೂ ‘ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೇ’ ರಚನೆಗಳಿಗೆ ಶುಭಾ ಧನಂಜಯ ಹಾಗೂ ತಂಡದ ಕಲಾವಿದೆಯರು ಮನಮೋಹಕವಾಗಿ ನೃತ್ಯಿಸಿ ಜನರ ಮನಸೂರೆಗೊಂಡರು. ಸಂಘದ ಅಧ್ಯಕ್ಷರಾದ ಡಾ.ವೆಂಕಟಾಚಲ ಹೆಗಡೆ ಅವರು ಪುಷ್ಪ ಗುಚ್ಛ ನೀಡಿ ಕಲಾವಿದೆಯರನ್ನು ಅಭಿನಂದಿಸಿದರು. ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ವಂದಿಸಿದರು.

**ರೇಣುಕಾ ನಿಡಗುಂದಿ**







ಶ್ರದ್ಧಾಂಜಲಿ

# ಮಿಂಚಿ ಮರೆಯಾದ ಅಪೂರ್ವ ಪ್ರತಿಭೆ–ಜ್ಯೋತ್ಸ್ನಾ ರಾವ್



ನಾಲ್ಕು ದಶಕಗಳ ಕಾಲ ದೆಹಲಿಯಲ್ಲಿ ನೆಲೆಸಿ, ಕನ್ನಡ ಸಾಂಸ್ಕೃತಿಕ ರಾಯಭಾರಿಯಂತೆ ಮಿಂಚಿದ ಅಪೂರ್ವ ಪ್ರತಿಭೆ ಜ್ಯೋತ್ಸ್ನಾ ರಾವ್ ಇನ್ನಿಲ್ಲ. ಅವರು ಆಗಸ್ಟ್ 24ರಂದು ಮೈಸೂರಿನಲ್ಲಿ ನಿಧನರಾದರು. ರಾಷ್ಟ್ರದ ರಾಜಧಾನಿಯಲ್ಲಿ 70ರ ದಶಕದಲ್ಲಿ ಉತ್ತುಂಗ ಶಿಖರವೇರಿದ್ದ ಕನ್ನಡ–ಭಾರತೀ ಸಂಸ್ಥೆಯ ಸಕ್ರಿಯ ಸದಸ್ಯೆಯಾಗಿದ್ದ ಜ್ಯೋತ್ಸ್ನಾ ರಾವ್ 'ಉತ್ಸಾಹದ ಚಿಲುಮೆ' ಎಂದೇ ಖ್ಯಾತರಾಗಿದ್ದರು. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ಕನ್ನಡ ಲೇಡಿಸ್ ಕ್ಲಬ್, ಕನ್ನಡ ಫಿಲ್ಮ್ ಸೊಸೈಟಿ, ಕನ್ನಡ–ಭಾರತೀ ಮೊದಲಾದ ಕನ್ನಡ ಪರ ಸಂಘಟನೆಗಳ ಮುಂಚೂಣಿಯಲ್ಲಿ ಪಾಲ್ಗೊಂಡ ಉತ್ಸಾಹಿ ಮಹಿಳೆ ಜ್ಯೋತ್ಸ್ನಾ ಭರತನಾಟ್ಯ ಕಲಾವಿದೆ, ಚಲನಚಿತ್ರ ಹಾಗೂ ರಂಗಭೂಮಿ ನಟಿಯಾಗಿ ತಮ್ಮ ಕಲಾ ವೈಭವವನ್ನು ಮೆರೆದರು.

ವೃತ್ತಿಯ ಸಲುವಾಗಿ 1954 ರಲ್ಲಿಯೇ ದೆಹಲಿಯಲ್ಲಿ ವಾಸವಿದ್ದ ಎಚ್‌ಎಮ್‌ಆರ್. ರಾವ್ ಅವರನ್ನು 1961ರಲ್ಲಿ ವಿವಾಹವಾದ ಜ್ಯೋತ್ಸ್ನಾ ಅವರು ಮೈಸೂರಿನಿಂದ ದೆಹಲಿಗೆ ಬಂದವರು. ನಾಲ್ಕು ದಶಕಗಳ ಸುದೀರ್ಘ ವಾಸ್ತವ್ಯದಲ್ಲಿ ದೆಹಲಿ ಕನ್ನಡಿಗರ ಮನೆ ಮಾತಾಗಿದ್ದರು. 1999–2001ರ ಸಾಲಿನಲ್ಲಿ ದಿ. ಕೆ.ಆರ್. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಜ್ಯೋತ್ಸ್ನಾ ಅವರು ಉಪಾಧ್ಯಕ್ಷೆಯಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸಿದರು.

ಆಗಸ್ಟ್ 26, ಭಾನುವಾರದಂದು ದೆಹಲಿ ಕರ್ನಾಟಕ ಸಂಘದಲ್ಲಿ ಸಂತಾಪ ಸಭೆ ಸೇರಿ ಅಗಲಿದ ಜ್ಯೋತ್ಸ್ನಾ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ದೆಹಲಿಯ ಹಿರಿಯ ಕಲಾವಿದರು, ರಂಗಾಸಕ್ತರು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಮೌನಾಚರಣೆ ಮಾಡಿ, ಜ್ಯೋತ್ಸ್ನಾ ಅವರ ಭಾವಚಿತ್ರಕ್ಕೆ ಪುಷ್ಪವನ್ನು ಅರ್ಪಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಿದರು.

ಪಾರದರ್ಶಕತೆಯನ್ನು ಒಳಗೊಂಡ ಹಿರಿಯ ಕನ್ನಡತಿ ಜ್ಯೋತ್ಸ್ನಾ ಅವರ ನಿಧನದಿಂದ ನಿಜಕ್ಕೂ ದೆಹಲಿ ಕನ್ನಡ ವಲಯಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಾ ಮಿಂಚಿ ಮರೆಯಾದ ಅಪೂರ್ವ ಪ್ರತಿಭೆ ಎಂದು ಬಣ್ಣಿಸಿದರು.

ಜ್ಯೋತ್ಸ್ನಾ ಅವರ ಸುದೀರ್ಘ ಕಾಲದ ಒಡನಾಡಿ, ಗೆಳತಿ, ಡಾ. ಅಹಲ್ಯಾ ಚಿಂತಾಮಣಿಯವರು ಎರಡು ತಿಂಗಳ ಹಿಂದೆ ಅವರೊಡನೆ ಕಳೆದ ಕಾಲ ಅವಿಸ್ಮರಣೀಯ ಎಂದರು. ದೆಹಲಿ ಕನ್ನಡ ಮಹಿಳೆಯರ ಹೆಮ್ಮೆಯ ಪ್ರತೀಕವಾಗಿದ್ದ ಜ್ಯೋತ್ಸ್ನಾ ಅವರ ವ್ಯಕ್ತಿತ್ವದ ಹಲವು ಅನುಭವಗಳನ್ನು ತೆರೆದಿಟ್ಟರು.

ದೆಹಲಿಯ ಹಿರಿಯ ರಂಗಕರ್ಮಿ, ಕಲಾವಿದ, ಕವಿ, ಎಚ್.ಎಸ್. ಕುಲಕರ್ಣಿ ಅವರು ಜ್ಯೋತ್ಸ್ನಾ ಅವರೊಡನೆಯ 5 ದಶಕಗಳ ಸ್ನೇಹ ಸಂಬಂಧದ ಸಿಹಿ ನೆನಪುಗಳನ್ನು ಹಂಚಿಕೊಂಡರು. 1964ರಲ್ಲಿ 'ಮ್ಯಾಕ್‌ಬೆತ್' ನಾಟಕದಲ್ಲಿ ಅವರೊಡನೆ ಅಭಿನಯಿಸಲು ಪ್ರಾರಂಭಿಸಿ ಮುಂದೆ ಹಲವಾರು ನಾಟಕಗಳಲ್ಲಿ ಜೊತೆಯಾಗಿ ಅಭಿನಯಿಸಿದ ದಿನಗಳನ್ನು ಸ್ಮರಿಸುತ್ತಾ ಯಾವುದೇ ಪಾತ್ರದಲ್ಲೂ ತಲ್ಲೀನತೆಯಿಂದ ನಟಿಸುತ್ತಿದ್ದ ಜ್ಯೋತ್ಸ್ನಾ ಅವರಿಂದ ಬಹಳಷ್ಟು ಕಲಿತೆ ಎಂದರು. ಪ್ರೀತಿ, ವಿಶ್ವಾಸ, ಸ್ನೇಹ ಭರಿತ ಜ್ಯೋತ್ಸ್ನಾ ಅವರು ಸ್ನೇಹಮಯಿ, ಪ್ರೇಮಮಯಿ ವ್ಯಕ್ತಿತ್ವವುಳ್ಳ ಅಪರೂಪದ ಕಲಾವಿದೆ ಎಂದು ಪ್ರಶಂಸಿಸಿದರು.

1970ರಲ್ಲಿ ಕನ್ನಡ–ಭಾರತಿಯ ಸೆಳೆತದಿಂದಾಗಿಯೇ ದೆಹಲಿಗೆ ಬಂದು ನೆಲೆಸಿದ ಹಿರಿಯ ಕಲಾವಿದ ಭೀಮರಾವ್ ಮುರಗೋಡ ಅವರು ಎಲ್ಲರೊಡನೆ ಮುಕ್ತವಾಗಿ ಬೆರೆಯುತ್ತಿದ್ದ ಜ್ಯೋತ್ಸ್ನಾ ಅವರಿಲ್ಲದೆ ದೆಹಲಿ ಕನ್ನಡ ಚಟುವಟಿಕೆಗಳೇ ಇಲ್ಲದ ದಿನಗಳನ್ನು ನೆನಪಿಸಿಕೊಂಡರು. ಪತ್ನಿಯ ಎಲ್ಲ ಚಟುವಟಿಕೆಗಳಿಗೆ ಸದಾ ಪ್ರೋತ್ಸಾಹ, ಬೆಂಬಲ, ಉತ್ತೇಜನ ನೀಡಿದ ಎಚ್‌ಎಂಆರ್. ರಾವ್ ಅವರು ನಿಜಕ್ಕೂ ಆದರ್ಶ ದಂಪತಿಗಳು ಎಂದು ಮುರಗೋಡ ಅವರು ಹೇಳಿದರು. ಜ್ಯೋತ್ಸ್ನಾ ಅವರೊಡನೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ ತಮ್ಮ ಅನುಭವಗಳನ್ನು ಹಂಚಿಕೊಂಡರು.

"ಮೋಟೇರಾಮನ ಸತ್ಯಾಗ್ರಹ" ನಾಟಕದಲ್ಲಿ ಅವರೊಡನೆ ಅಭಿನಯಿಸಿದ ಅರವಿಂದ ಕೌಜಲಗಿ ಅವರು ಸರಳ, ಸಜ್ಜನಿಕೆಯ ಆತ್ಮೀಯ ವ್ಯಕ್ತಿತ್ವವುಳ್ಳ ಸ್ನೇಹ ಜೀವಿ ಜ್ಯೋತ್ಸ್ನಾ ಎಂದು ಸ್ಮರಿಸಿದರು.

ಭೇಟಿಯಾದ ಕೂಡಲೇ ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡಿಗರೆಲ್ಲರ ಬಗ್ಗೆಯೂ ಕಳಕಳಿಯಿಂದ ಜ್ಯೋತ್ಸ್ನಾ ಅವರು ವಿಚಾರಿಸಿಕೊಳ್ಳುತ್ತಿದ್ದರು ಎಂಬುದಾಗಿ ಅವರ ಕುಟುಂಬದ ಸಂಬಂಧಿ ಆನಂದ್ ರಾವ್ ಅವರು ಹೇಳಿದರು. ಬಹುಕಾಲದ ಆತ್ಮೀಯ ಕನ್ನಡತಿಯನ್ನು ಕಳೆದುಕೊಂಡದ್ದು ಬಹಳ ನೋವಾಗಿದೆ ಎಂದು ಹಿರಿಯ ಕನ್ನಡತಿ ಸಾವಿತ್ರಿ ಶಾಸ್ತ್ರಿಯವರು ದುಃಖ ವ್ಯಕ್ತಪಡಿಸಿದರು.

ಕನ್ನಡ–ಭಾರತಿಯ ಅವಿಭಾಜ್ಯ ಅಂಗವಾಗಿದ್ದ ಜ್ಯೋತ್ಸ್ನಾ ಸರಳ, ಸೌಜನ್ಯತೆಯ ಸಾಕಾರ ಮೂರ್ತಿ. 30 ವರ್ಷಗಳ ಹಿಂದೆ ಆತ್ಮೀಯತೆಯನ್ನು ತಂದು–ಕೊಟ್ಟ ಅಪರೂಪದ ಸ್ನೇಹಜೀವಿ. ಪಕ್ಷಭೇಧವಿಲ್ಲದೇ ಎಲ್ಲರನ್ನೂ ಪ್ರೀತಿಸುವ ವ್ಯಕ್ತಿತ್ವವುಳ್ಳ ಅವರ ಸಾವಿನಿಂದ ರಂಗಭೂಮಿಗೆ ತುಂಬಲಾರದ ನಷ್ಟವಾಗಿದೆ–ಎಂದು ವಸಂತ ಶೆಟ್ಟಿ ಬೆಳ್ಳಾರೆ ಅವರು ತಮ್ಮ ತೀವ್ರ ಸಂತಾಪ ಸೂಚಿಸಿದರು.

ಅಂದಿನ ದಿನಗಳಲ್ಲಿ ವಿರಳವಾಗಿದ್ದ ಕನ್ನಡಿಗರನ್ನು ಒಗ್ಗೂಡಿಸುವುದೇ ದೊಡ್ಡ ಸಾಹಸವಾಗಿತ್ತು. ಕನ್ನಡಿಗರನ್ನು ಹುರಿದುಂಬಿಸಿ ಸಂಘಟಿಸುತ್ತಿದ್ದ ಜ್ಯೋತ್ಸ್ನಾ ಅವರು ಅತ್ಯಂತ ಶಿಸ್ತಿನ ವ್ಯಕ್ತಿ. ಕನ್ನಡ–ಭಾರತೀ ಹಾಗೂ ದೆಹಲಿ ಕನ್ನಡ ಫಿಲ್ಮ್ ಸೊಸೈಟಿಗೆ ಅವರು ನೀಡಿದ ಕೊಡುಗೆ ಅಪಾರ ಎಂಬುದಾಗಿ ಕೆ.ಎಸ್.ಜಿ. ಶೆಟ್ಟಿ ಅವರು ಸ್ಮರಿಸಿದರು.

ಅಗಲಿದ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ದೆಹಲಿ ರಂಗಾಸಕ್ತರೆಲ್ಲರ ಪರವಾಗಿ ಕೋರುತ್ತೇವೆ.

ಉಷಾ ಭರತಾದ್ರಿ

# ಕನ್ನಡ–ಭಾರತಿಯ ಮತ್ತೊಂದು ಜ್ಯೋತಿ ಜ್ಯೋತ್ಸ್ನಾರಾವ್ ಇನ್ನಿಲ್ಲ



'ಮನವೆಂಬ ಮರ್ಕಟ'–ನಾಟಕದಲ್ಲಿ ಎಂ.ಆರ್.ವಿ. ಸುಬ್ಬಯ್ಯ, ಜ್ಯೋತ್ಸ್ನಾ ರಾವ್–
ಸುನಂದಮ್ಮ ಪಾತ್ರದಲ್ಲಿ, ಗಾಯತ್ರಿ ಬಾಲು ಮತ್ತು ಬಾಲಸುಬ್ರಹ್ಮಣ್ಯ (ನಿಂತವರು)

ಆಗಸ್ಟ್ 24, ಶುಕ್ರವಾರ ರಾತ್ರಿ 11.30ರ ಸುಮಾರಿಗೆ ಕನ್ನಡ–ಭಾರತಿಯ ಮುಖ್ಯ ಅಂಗಗಳಲ್ಲೊಂದಾಗಿದ್ದ ಜ್ಯೋತ್ಸ್ನಾರಾವ್ ಮೈಸೂರಿನಲ್ಲಿ ಕೊನೆಯುಸಿರೆಳೆದರು. ಸುಮಾರು ನಾಲ್ಕು ದಶಕಗಳ ಕಾಲ ದೆಹಲಿಯಲ್ಲಿ ಅರ್ಥಪೂರ್ಣ ಬದುಕನ್ನು ಮುಗಿಸಿ ಜ್ಯೋತ್ಸ್ನಾ ಮತ್ತು ಅವರ ಪತಿ ಎಚ್.ಎಂ.ಆರ್. ರಾವ್ ಅವರು ಮೈಸೂರಿಗೆ ಬಂದು ನೆಲೆಸಿದರು. ಕಳೆದ ಮೂರು ವರ್ಷಗಳಿಂದ ಅವರ ಆರೋಗ್ಯ ಕ್ಷೀಣಿಸಿತ್ತು. ಮೂವರು ಹೆಣ್ಣು ಮಕ್ಕಳು, ಪತಿ, ಬಂಧು ಬಳಗ, ಅಪಾರ ಸ್ನೇಹಿತರು, ಕಲಾಭಿಮಾನಿಗಳು ಎಲ್ಲರನ್ನೂ ತ್ಯಜಿಸಿ ಆಗಸ್ಟ್ 24ರಂದು ಜ್ಯೋತ್ಸ್ನಾ ತಮ್ಮ ಸ್ವಂತ ಮನೆ ಸೇರಿಕೊಂಡರು.

ಹತ್ತಿರ ಹತ್ತಿರ ಐದು ದಶಕಗಳ ಹಿಂದಿನ ಮಾತು. 1963ರ ಆರಂಭ. ತಾಯ್ನಾಡಿನಿಂದ ದೂರ ಬಂದು ದೇಶದ ರಾಜಧಾನಿ ದೆಹಲಿಯಲ್ಲಿ ನೆಲೆಸಿದ್ದ ಕೆಲವು ಉತ್ಸಾಹೀ ತರುಣರು ಕನ್ನಡ ನುಡಿ, ಸಂಸ್ಕೃತಿ, ಕನ್ನಡ ರಂಗಭೂಮಿಯ ಬಾವುಟವನ್ನು ಎತ್ತಿ ಹಿಡಿದು 'ತಮ್ಮತನವನ್ನು' ಉಳಿಸಿಕೊಳ್ಳುವುದೇ ಅಲ್ಲದೆ ಇತರ ಭಾಷಾ ಪ್ರೇಮಿಗಳಿಗೂ ಕನ್ನಡದ ಹಿರಿಮೆಯ ಅರಿವುಂಟು ಮಾಡುವ ಹಂಬಲದಿಂದ ಕನ್ನಡ–ಭಾರತೀ ಸಂಸ್ಥೆಯನ್ನು ಆರಂಭಿಸಿದರು. ಏಪ್ರಿಲ್ 1963ರಲ್ಲಿ ಪ್ರೊ.ವಿ. ಸೀತಾರಾಮಯ್ಯನವರು ಸಂಸ್ಥೆಯನ್ನು ಉದ್ಘಾಟಿಸಿದರು. ಆ ಸಂದರ್ಭದಲ್ಲೇ ನಮಗೆಲ್ಲಾ ಜ್ಯೋತ್ಸ್ನಾ ರಾವ್ ದಂಪತಿಗಳ ಪರಿಚಯವಾದದ್ದು. ಮೈಸೂರಿನಿಂದ ಬಂದು ಅದೇ ತಾನೆ ದೆಹಲಿಯ ಕರೋಲ್‌ಬಾಗ್ ಬಡಾವಣೆಯಲ್ಲಿ ಮನೆ ಮಾಡಿದ್ದರು. ಕನ್ನಡ–ಭಾರತಿಯ ಅನೇಕ ಸದಸ್ಯರು ಅಂದಿನ ಕಾಲದಲ್ಲಿ ಕರೋಲ್‌ಬಾಗಿನಲ್ಲೇ ಮನೆ ಮಾಡಿದ್ದರು. ಎಂ.ಎಸ್. ಸತ್ಯು, ಬಿ.ವಿ. ಕಾರಂತ, ಶಾ. ಬಾಲೂರಾವ್, ವಿ. ರಾಮಮೂರ್ತಿ ಹೀಗೆ ರಂಗ ದಿಗ್ಗಜರೆಲ್ಲಾ ಕನ್ನಡ–ಭಾರತಿಯ ಸಂಸ್ಥಾಪಕ ಸದಸ್ಯರು.

ಆರಂಭದಲ್ಲಿ ಸಭೆ ಸೇರುತ್ತಿದ್ದುದು ನಮ್ಮ ಮನೆಯಲ್ಲಿ ಇಲ್ಲವೇ ಜ್ಯೋತ್ಸ್ನಾ ರಾವ್ ಅವರ ಮನೆಯಲ್ಲಿ. ಆರಂಭದಲ್ಲಿ ಟಿ.ಪಿ. ಕೈಲಾಸಂ ಅವರ "ಬಂಡ್ವಾಳ್ವಿಲ್ಲದ ಬಡಾಯಿ" ನಾಟಕವನ್ನು ಪ್ರಯೋಗಾತ್ಮಕವಾಗಿ ನೀಡುವುದೆಂದು ತೀರ್ಮಾನಿಸಲಾಯಿತು. ನಾಟಕದ ಮುಖ್ಯ ನಟಿಯ ಪಾತ್ರ ಜ್ಯೋತ್ಸ್ನಾ ಅವರದು. "ಜೀವು" ಪಾತ್ರಕ್ಕೆ ಜೀವ ತುಂಬಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ನಾಟಕದ ಪ್ರಯೋಗ ನಾರ್ತ್ ಅವೆನ್ಯೂನಲ್ಲಿದ್ದ ಎಂ. ಪಿ. ಕ್ಲಬ್ಬಿನಲ್ಲಿ, ಡಿಸೆಂಬರ್ 29, 1963ರಂದು ಜರುಗಿತು.

ಜ್ಯೋತ್ಸ್ನಾ ಓದಿದ್ದು ಮೈಸೂರಿನಲ್ಲಿ. ವಿದ್ಯಾರ್ಥಿನಿಯಾಗಿದ್ದಾಗಲೇ ಭರತ ನಾಟ್ಯವನ್ನು ಅಭ್ಯಾಸ ಮಾಡಿದ್ದರು. ನಾಟ್ಯಕಲೆ ಅವರಿಗೆ ರಕ್ತಗತವಾಗಿತ್ತು. ನಂತರ ಅವರು ಭಾಗವಹಿಸಿದ್ದು 'ಹುತ್ತದಲ್ಲಿ ಹುತ್ತ' ನಾಟಕದಲ್ಲಿ. ಇದೂ ಕೈಲಾಸಂ ಅವರದೇ. ಬದುಕಿನ ವಿವಿಧ ಮಜಲುಗಳನ್ನು ರೂಪಿಸುವ ಪರಿಣಾಮಕಾರೀ ನಾಟಕ. ಇದರಲ್ಲಿ ಜ್ಯೋತ್ಸ್ನಾ ಅವರದು ವಿಧವೆ ಸುಬ್ಬಮ್ಮನವರ ಪಾತ್ರ. ರಾವ್‌ಸಾಹೇಬ್ ಜೋಡೀದಾರ್ ರಾಮರಾಯರ ಪತ್ನಿಯಾಗಿ. ಇದರ ಪ್ರಯೋಗವಾದದ್ದು ತ್ರಿವೇಣಿ ಗಾರ್ಡನ್ ಥಿಯೇಟರ್‌ನಲ್ಲಿ. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೋರಿಕೆಯ ಮೇರೆಗೆ 'ಸಂಸ' ಅವರ 'ವಿಜಯ ನಾರಸಿಂಹ' ನಾಟಕವನ್ನು ಕನ್ನಡ–ಭಾರತೀ 1967ರಲ್ಲಿ AIFACS ರಂಗಮಂದಿರದಲ್ಲಿ ಪ್ರಯೋಗಿಸಿತು. ಮೈಸೂರು ಅರಸರ ರಾಜಮನೆತನದ ಚಾರಿತ್ರಿಕ ಹಿನ್ನೆಲೆಯ ಈ ನಾಟಕದಲ್ಲಿ ಜ್ಯೋತ್ಸ್ನಾ ಅವರದು "ಪಾರ್ವತಮ್ಮ"ನ ಪಾತ್ರ–ಧರ್ಮೇಶ್ವರ ದೀಕ್ಷಿತರ ಪತ್ನಿಯಾಗಿ. ದೀಕ್ಷಿತರ ಪಾತ್ರವನ್ನು ಅವರ ಪತಿ ಎಚ್.ಎಂ. ಆರ್. ರಾವ್ ಅವರೇ ವಹಿಸಿದ್ದರು. ರಸಿಕರ ಒಲುಮೆಗೆ ಪಾತ್ರವಾದ ಈ ನಾಟಕವನ್ನು ಮತ್ತೆ ಮತ್ತೆ ಪ್ರಯೋಗಿಸಬೇಕಾಯಿತು.

"ಆನಂದ" (ಅಜ್ಜಂಪುರದ ಸೀತಾರಾಂ) ಅವರ "ದಹನ ಚಿತ್ರ"ದ ಪ್ರಯೋಗ 1968ರಲ್ಲಿ AIFACS ರಂಗಮಂದಿರದಲ್ಲಿ ನಡೆಯಿತು. ಅದರಲ್ಲಿ ಜ್ಯೋತ್ಸ್ನಾ ರಾವ್ ಕಲಾವಿದೆ "ಚಂಪಾ" ಪಾತ್ರವನ್ನು ವಹಿಸಿದ್ದರು. ಕಲೆಗಾರ ಗಿರಿಗೆ ಮಾಡೆಲ್ ಆಗಿ. ಪಾತ್ರ ದೊಡ್ಡದಾಗಲಿ, ಚಿಕ್ಕದಾಗಲಿ, ಒಳ್ಳೆಯದಾಗಲಿ, ಕೆಟ್ಟದಾಗಲಿ, ಯಾವ ಬೇಸರವೂ ಇಲ್ಲದೆ ಒಪ್ಪಿಕೊಂಡು ಮೆಚ್ಚುವಂತ ಅಭಿನಯವನ್ನು ನೀಡುವ ಕಲೆ ಜ್ಯೋತ್ಸ್ನಾ ಅವರಿಗೆ ಕರಗತವಾಗಿತ್ತು. ದ.ರಾ. ಬೇಂದ್ರೆ ಅವರ "ಸಾಯೋ ಆಟ"ದಲ್ಲಿ (ಸತ್ತು ಹೋದ ಕಳ್ಳನ ಹೆಂಡತಿಯಾಗಿ) 'ಕಳ್ಳಿ'ಯ ಪಾತ್ರ. ಅವರ ನಟನೆಯನ್ನು ಎಲ್ಲರೂ ಹೊಗಳಿದರು. (1969 ಏಪ್ರಿಲ್)

ನಂತರ ರಂಗಕ್ಕೇರಿದ ಹೆಸರಾಂತ ನಾಟಕ–ಗಿರೀಶ್ ಕಾರ್ನಾಡರ 'ಯಯಾತಿ' (ಜನವರಿ 1970). ಈ ನಾಟಕದಲ್ಲಿ ಜ್ಯೋತ್ಸ್ನಾಗೆ 'ಶರ್ಮಿಷ್ಠೆ' ಪಾತ್ರ.. ಇದೊಂದು ಪೌರಾಣಿಕ ನಾಟಕ. ಶುಕ್ರಾಚಾರ್ಯರ ಮಗಳಾದ ಶರ್ಮಿಷ್ಠೆ ಗಾಂಧರ್ವ ವಿವಾಹದ ರೂಪವಾಗಿ ಯಯಾತಿಯನ್ನು ಮದುವೆ ಆಗಿದ್ದಳು. ಈ ನಾಟಕವನ್ನು ಮುಂಬಯಿ ಕನ್ನಡ ಕಲಾ ಕೇಂದ್ರದ ಆಶ್ರಯದಲ್ಲಿ ಪ್ರಯೋಗಿಸಲಾಗಿತ್ತು. ಡಿಸೆಂಬರ್ 1970 ರಲ್ಲಿ ಕನ್ನಡ ಭಾರತೀ ರಂಗಕ್ಕೆ ತಂದ ಅದ್ಭುತ ನಾಟಕ "ಹಯವದನ". ಇದರಲ್ಲಿ ಜ್ಯೋತ್ಸ್ನಾ ಅವರದು "ಮಹಾಕಾಳೀ" ಪಾತ್ರ. ಈ ನಾಟಕವನ್ನೂ ದೆಹಲಿಯ ಕನ್ನಡ ಹಾಗೂ ಕನ್ನಡೇತರರಿಗಾಗಿ ಮತ್ತೆರಡು ಬಾರಿ ಪ್ರಯೋಗಿಸಲಾಯಿತು.

ಶ್ರೀರಂಗರ 'ಕತ್ತಲೆ ಬೆಳಕು' ನಾಟಕದಲ್ಲಿ 'ಯುವತಿ'ಯ ಪಾತ್ರ (ಡಿಸೆಂಬರ್ 1972), 'ಜೆ.ಪಿ. ಪ್ರೀಸ್ಟ್ಲಿ' ಅವರ An Inspector Calls ನಾಟಕದ ಕನ್ನಡಾನುವಾದ "ಮನವೆಂಬ ಮರ್ಕಟ" ನಾಟಕದಲ್ಲಿ (ಏಪ್ರಿಲ್ 1973) 'ಸುನಂದಮ್ಮ'ನ ಪಾತ್ರ, ದಿ. ಶಂಕರಾಚಾರ್ಯರ ಪರಕಾಯಪ್ಪ ವೇಶಾಧಾರಿತ "ನಹಿ ನಹಿ, ರಕ್ಷತಿ" ನಾಟಕದಲ್ಲಿ (ಫೆಬ್ರವರಿ 1979) ಅಮೃತ ನಗರದ ರಾಣಿಯ ಸ್ನೇಹಿತೆ "ಶಿವಧ್ಯಾವಿ"ಯ ಪಾತ್ರ ಎಲ್ಲವೂ ಜ್ಯೋತ್ಸ್ನಾ ಅವರ ಬಹುಮುಖ ಪ್ರತಿಭೆಯನ್ನು ಹೊರತಂದುವು.

ನಂತರ ಬಂದದ್ದು 'ಜಿ.ಬಿ. ಜೋಶಿ' ಅವರ ಸುಪ್ರಸಿದ್ಧ ನಾಟಕ 'ನಾನೇ ಬಿಜ್ಜಳ' (ಡಿಸೆಂಬರ್ 1979). ಇದರಲ್ಲಿ ಬಹುಮುಖ್ಯ ಪಾತ್ರವಾದ "ಪದ್ಮಾವತಿ" ಪಾತ್ರವನ್ನು ಮನಮುಟ್ಟುವಂತೆ ಜ್ಯೋತ್ಸ್ನಾ ಅವರ ಮಗಳು ಅರ್ಚನಾ ಕೂಡ ಅಭಿನಯಿಸಿ ತಮ್ಮ ಕಲೆಗಾರಿಕೆಯನ್ನು ಮೆರೆದರು. ಈ ನಾಟಕವನ್ನು ಬಿಜಾಪುರ ಮತ್ತು ಬೆಂಗಳೂರಿನಲ್ಲೂ ಪ್ರಯೋಗಿಸಲಾಯಿತು. ಇದರಲ್ಲಿ ನಾಯಕನ ಪಾತ್ರವಹಿಸಿದ್ದ ಪ್ರಸಿದ್ಧ ನಟ ಹೆಚ್.ಜಿ. ದತ್ತಾತ್ರೇಯ ಅವರ ಅಭಿನಯವನ್ನು ಮಾಧ್ಯಮದವರು ಕೊಂಡಾಡಿ ಅವರನ್ನು ಹೆಸರಾಂತ ಇಂಗ್ಲಿಷ್ ನಟ "ಲಾರೆನ್ಸ್ ಒಲಿವಿಯರ್"ಗೆ ಹೋಲಿಸಿದ್ದರು.

1990–91ರಲ್ಲಿ ಕನ್ನಡ–ಭಾರತಿಯ 'ಬೆಳ್ಳಿಹಬ್ಬ'ವನ್ನು ಆಚರಿಸಿದಾಗ ಸುಮಾರು ಒಂದು ತಿಂಗಳ ಕಾಲ ನಾನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಎಂ.ಎಸ್. ಸತ್ಯು ಅವರು ನಿರ್ದೇಶಿಸಿದ "ಮೋಟೇರಾಮನ ಸತ್ಯಾಗ್ರಹ" ನಾಟಕ, ಬಿ.ವಿ. ಕಾರಂತರು ನೀಡಿದ "ಪುರಂದರ ಸಂಜೆ" ಸಂಗೀತ ಕಾರ್ಯಕ್ರಮ, ಕೆ. ವಾಗೀಶ್ ಅವರ ಸಂಗೀತ ಕಾರ್ಯಕ್ರಮ, ಯು.ಕೆ. ಸಂಧ್ಯಾ ಅವರ ಭರತ ನಾಟ್ಯ ಮತ್ತು ಇವೆಲ್ಲದರ ಜೊತೆಗೆ ಕನ್ನಡ–ಭಾರತೀ ಜನ್ಮ ತಾಳಿದ ಸಂದರ್ಭದಲ್ಲಿ ಪ್ರಯೋಗಿಸಿದ "ಬಂಡ್ವಾಳ್ವಿಲ್ಲದ ಬಡಾಯಿ" ನಾಟಕದ ಪುನರಾವರ್ತನೆ. ಇಪ್ಪತ್ತೆಂಟು ವರ್ಷಗಳ ನಂತರ ಪುನರಾವರ್ತನೆಗೊಂಡ ಈ ಪ್ರಯೋಗದಲ್ಲಿ ಜ್ಯೋತ್ಸ್ನಾ ಅವರು ನೀಡಿದ ನಟನಾ ಕೊಡುಗೆ ಅತ್ಯದ್ಭುತವಾಗಿತ್ತು. ವಯಸ್ಸಿನ ಅಂತರ ರಂಗದ ಮೇಲೆ ಮಾಯವಾಗಿತ್ತು. ಅದೇ "ಜೀವೂ" ಪಾತ್ರ–ಜೀವಂತವಾಗಿತ್ತು. ಅನೇಕ ನಾಟಕಗಳಲ್ಲಿ ಪಾತ್ರ ವಹಿಸದಿದ್ದರೆ ವಸ್ತ್ರಾಲಂಕಾರದ ಅಥವಾ ಪ್ರಸಾಧನ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಜ್ಯೋತ್ಸ್ನಾ ವಹಿಸಿಕೊಳ್ಳುತ್ತಿದ್ದರು. ಎಲ್ಲರಿಗೂ ಬೇಕಾದವರಾಗಿದ್ದರು. ಎಲ್ಲರೊಡನೆಯೂ ಸ್ನೇಹಮಯಿ. ಜ್ಯೋತ್ಸ್ನಾ ಅವರಿಗೆ ಕರ್ನಾಟಕ ಸರ್ಕಾರದ ನಾಟಕೋತ್ಸವ ಪ್ರಶಸ್ತಿ ಲಭಿಸಿತ್ತು. ಕನ್ನಡ ಭಾರತಿಯ ಗೆಳೆಯರ ಸಮೂಹ 2009ರಲ್ಲಿ ಬೆಂಗಳೂರಿನಲ್ಲಿ ಸಭೆ ಸೇರಿ ಅವರಿಗೆ ಸನ್ಮಾನ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈಗ ಅವರ ನೆನಪು ಮಾತ್ರ. ಇಂಗ್ಲಿಷ್‌ನಲ್ಲಿ ಹೇಳುವಂತೆ -Birth is an accident. Death is a certainty.

ಎಂ.ವಿ. ನಾರಾಯಣ ರಾವ್, ಬೆಂಗಳೂರು

# ಜ್ಯೋತ್ಸ್ನಾ ಜ್ಯೋತಿ ಶಾಂತವಾಯಿತು



ಕೈಲಾಸಂ ಅವರ 'ಹುತ್ತದಲ್ಲಿ ಹುತ್ತ'–ನಾಟಕದಲ್ಲಿ ವಿಧವೆ ಸುಬ್ಬಮ್ಮನ ಪಾತ್ರದಲ್ಲಿ ಜ್ಯೋತ್ಸ್ನಾ ರಾವ್

ಶ್ರೀಮತಿ ಜ್ಯೋತ್ಸ್ನಾ ರಾವ್ ಅವರು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅವರ ನಿಧನ ಮೈಸೂರಿನಲ್ಲಿ ದಿನಾಂಕ 24.08.2012ರಂದು ಆಯಿತೆಂದು ದೂರವಾಣಿಯ ಮೂಲಕ ದೆಹಲಿ ಕರ್ನಾಟಕ ಸಂಘದಿಂದ ತಿಳಿಯಿತು. ಕೂಡಲೆ ಗೆಳೆಯ ಶ್ರೀ ಎಚ್.ಎಂ.ಆರ್. ರಾವ್ ಅವರ ಕೂಡ ಮಾತಾಡಿ ವಿಚಾರಿಸಿದೆ– "ದೀರ್ಘ ಕಾಯಿಲೆ ಏನೂ ಇರಲಿಲ್ಲ. ಸ್ವಲ್ಪ ಅಸ್ವಸ್ಥತೆಯ ಕಾರಣ ಆಸ್ಪತ್ರೆಯಲ್ಲಿ ಸೇರಿಸಬೇಕಾಯಿತು. ಆದರೆ ನಾಲ್ಕು ತಾಸಿನಲ್ಲಿ ಅವರು ಮೃತರಾದರು" ಎಂದು ಅವರು ಹೇಳಿದರು. ಕೆಲವು ಕ್ಷಣ ಮನಸ್ಸು ವಿಚಲಿತವಾಯಿತು, ನಂಬಲಾಗಲಿಲ್ಲ. ಆದರೆ ವಿಧಿ ಲಿಖಿತ ತಪ್ಪಿಸುವುದು ಅಸಾಧ್ಯ. ಕಾಲ ತನ್ನ ಕೆಲಸ ನಿರಂತರವಾಗಿ ಮಾಡುತ್ತ ನಡೆಯುವುದು.

ದೆಹಲಿಯ ಎಲ್ಲ ಕನ್ನಡ ಚಟುವಟಿಕೆಗಳಲ್ಲಿ ಕಳೆದ ಐದು ದಶಕಗಳ ಕಾಲ ಅತ್ಯಂತ ಲವಲವಿಕೆ ಹಾಗೂ ಉತ್ಸಾಹದಿಂದ ಭಾಗವಹಿಸಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಕಟ್ಟಿ ಬೆಳೆಸುವಲ್ಲಿ ಅಪಾರ ಕೆಲಸ ಮಾಡಿದ್ದಾರೆ. ದೆಹಲಿ ಕರ್ನಾಟಕ ಸಂಘ, ದೆಹಲಿಯ ಕನ್ನಡ ಭಾರತೀ, ದೆಹಲಿ ಕನ್ನಡ ಶಾಲೆ, ಕನ್ನಡ ಲೇಡಿಸ್ ಕ್ಲಬ್ ಮುಂತಾದ ಕನ್ನಡ ಸಂಘ ಸಂಸ್ಥೆಗಳಲ್ಲಿ ಉತ್ಸಾಹದಿಂದ ಕೆಲಸ ಮಾಡಿರುವರು.

ನನಗೆ ಅವರ ಪರಿಚಯವಾದದ್ದು ಐದು ದಶಕಗಳ ಹಿಂದೆ ನಾಟಕ ರಂಗದಲ್ಲಿ ದೆಹಲಿಯ ಹೆಸರಾದ ಕನ್ನಡ ಸಾಂಸ್ಕೃತಿಕ ಸಂಸ್ಥೆ, ಕನ್ನಡ ಭಾರತೀ ಆಶ್ರಯದಲ್ಲಿ. ಅವರು ಆಡಿದ ಅನೇಕ ನಾಟಕಗಳಲ್ಲಿ ನಾವಿಬ್ಬರೂ ಭಾಗವಹಿಸಿದ ನೆನಪು ಇನ್ನೂ ಹಚ್ಚಹಸಿರಾಗಿ ಉಳಿದಿದೆ. ಸ್ಟೇಜಿನ ಮೇಲೆ ನಾಟಕ ಆಡುವಾಗ ಅಷ್ಟೇ ಅಲ್ಲ, ನಾಟಕದ ತಾಲೀಮಿನಲ್ಲೂ ಅವರು ತೋರಿಸುತ್ತಿದ್ದ ಸೀರಿಯಸ್‌ನೆಸ್ ಮರೆಯುವಂತಿಲ್ಲ. ರಿಹರ್ಸಲ್ ಮಾಡುವಾಗ ನಾನು ಏನಾದರೂ ತಮಾಷೆ ಮಾಡಿದರೆ–"ಬಾವಾ ಬಿ ಸೀರಿಯಸ್" ಎಂದು ಹೇಳುವವಳು.

ಕರೋಲ್‌ಬಾಗಿನಲ್ಲಿ ಅವರ ಮನೆಗೆ ಕೆಲವು ಬಾರಿ ಹೋದ ನೆನಪಿದೆ. ಅವರು ಮತ್ತು ಅವರ ಯಜಮಾನರು, ನನ್ನ ಗೆಳೆಯ, ಶ್ರೀ ಎಚ್.ಎಂ.ಆರ್. ರಾವ್ ಅವರದು ಆದರಾತಿಥ್ಯದಲ್ಲಿ ಎತ್ತಿದ ಕೈ. ಚಕ್ಕುಲಿ, ಕೋಡುಬಳೆ, ಕಾಫಿ–ಒಮ್ಮೊಮ್ಮೆ ಹೋಳಿಗೆ ತುಪ್ಪ ತಪ್ಪಿದ್ದಲ್ಲ. "ಬಾ ಬಾ ಬಾವಾ ಬಾ, ಏನ್ ಅಪರೂಪ ಇತ್ತ ಕಡೆ ಬಂದಿದೀಯಾ" ಎಂದು ಪ್ರೀತಿಯಿಂದ ಬರಮಾಡಿಕೊಂಡು ಮಾತಾಡಿದ ದೃಶ್ಯಗಳು ಕಣ್ಣ ಮುಂದೆ ಹಾಯ್ದು ಹೋದಂತೆ ಈಗಲೂ ಭಾಸವಾಗುತ್ತದೆ.

ಅವರಿಗೆ ಅನೇಕ ಪಾರಿತೋಷಕಗಳು ಲಭಿಸಿವೆ. ಮುಖ್ಯವೆಂದರೆ ಅವರು ಕನ್ನಡ ನಾಟಕರಂಗಕ್ಕೆ ಸಲ್ಲಿಸಿದ ಅನೇಕ ವರ್ಷಗಳ ಸೇವೆಯನ್ನು ಪರಿಗಣಿಸಿ ಕರ್ನಾಟಕ ನಾಟಕ ಅಕಾಡೆಮಿ ಅವರನ್ನು ಹಾರ ತುರಾಯಿ ಫಲಕಗಳನ್ನು ನೀಡಿ 1993ರಲ್ಲಿ ಸನ್ಮಾನಿಸಿದೆ. ಮೂರು ವರ್ಷಗಳ ಹಿಂದೆ ನಮ್ಮ ನೆಚ್ಚಿನ ಪ್ರಖ್ಯಾತ ಸಾಂಸ್ಕೃತಿಕ ಸಂಘ ಕನ್ನಡ ಭಾರತೀ ಬೆಂಗಳೂರಿನಲ್ಲಿ ಆಯೋಜಿಸಿದ ಒಂದು ಭವ್ಯ ಸಮಾರಂಭದಲ್ಲಿ ಶ್ರೀಮತಿ ಜ್ಯೋತ್ಸ್ನಾ ರಾವ್ ಅವರನ್ನು ಶ್ರೀ ಎಂ.ಎಸ್. ಸತ್ಯು, ಶ್ರೀ ಎಂ.ವಿ. ನಾರಾಯಣ ರಾವ್, ಶ್ರೀ ಪದಕಿ, ಶ್ರೀಮತಿ ಇಂದು ಬಾಯಿ ರಮೇಶ್ ಹಾಗೂ ನನಗೆ ಕಿರೀಟ ತೊಡಿಸಿ ಮಾನ ಪತ್ರ ನೀಡಿ ಸನ್ಮಾನಿಸಲಾಯಿತು.

ದಿ.ಶ್ರೀಮತಿ ಜ್ಯೋತ್ಸ್ನಾ ರಾವ್ ಅವರಲ್ಲಿ ಕಂಡ ಪ್ರೀತಿ, ವಿಶ್ವಾಸ, ಆತ್ಮೀಯತೆ ಮುಂತಾದವುಗಳ ಬಗ್ಗೆ ನಾಲ್ಕು ಸಾಲುಗಳಲ್ಲಿ ಸಂಕ್ಷೇಪವಾಗಿ ಹೀಗೆ ಹೇಳಬಹುದು.

ಬದುಕನ್ನು ಕ್ರಿಯಾಶೀಲವಾಗಿರಿಸಿ
ದುರಾಸೆಯನು ಜೀವನದಿಂದ ತೊಲಗಿಸಿ
ಸಜ್ಜನರ ಸಂಗತಿ ಸಂಭಾಳಿಸಿ
"ಸರ್ವೇ ಭವಂತು ಸುಖಿನಾಂ" ಹೇಳಿಕೆಯನು

ಜೀವನದುದ್ದಕ್ಕೂ ಪಾಲಿಸಿದ ಸಾಧ್ವಿ ದಿ. ಶ್ರೀಮತಿ ಜ್ಯೋತ್ಸ್ನಾ ರಾವ ಇವರಿಗೆ ನನ್ನ ಅನೇಕ ನಮನಗಳು. ಅವರ ಆತ್ಮಕ್ಕೆ ಚಿರ ಶಾಂತಿ ದಯಪಾಲಿಸಲೆಂದು ಆ ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ಎಚ್.ಎಸ್. ಕುಲಕರ್ಣಿ, ನವದೆಹಲಿ

# ಶ್ರೀಮತಿ ಜ್ಯೋತ್ಸ್ನಾ ರಾವ್ – ಒಂದು ನೆನಪು



ಇತ್ತೀಚೆಗೆ ನಮ್ಮನ್ನೆಲ್ಲ ಬಿಟ್ಟು ಅಗಲಿದ ಶ್ರೀಮತಿ ಜ್ಯೋತ್ಸ್ನಾ ರಾವ್‌ರವರು ಯಾವಾಗಲೂ ಉತ್ಸಾಹದ ಚಿಲುಮೆಯಂತಿದ್ದರು. ಈಗ ಅವರಿಲ್ಲವೆಂದರೆ ನಂಬಲು ಅಸಾಧ್ಯವಾಗುತ್ತಿದೆ. ಸುಮಾರು ಎರಡು ದಶಕಗಳ ಹಿಂದೆ ನಾನು ಆಗಿನ ಹಳೆಯ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಪ್ರಾರಂಭಿಸಿದಾಗ, ಶ್ರೀಮತಿ ಜ್ಯೋತ್ಸ್ನಾ ರಾವ್ ಯಾರೆಂಬುದನ್ನು ಪತ್ತೆ ಹಚ್ಚಲು ಹೆಚ್ಚು ವೇಳೆ ಬೇಕಾಗಿರಲಿಲ್ಲ. ಅವರೇ ನಾವು ಯಾರು? ಏನು? ಎಂಬುದನ್ನೆಲ್ಲ ತಿಳಿದುಕೊಂಡು ಕೆಲವೇ ನಿಮಿಷಗಳಲ್ಲಿ ಆಪ್ತರಾಗಿ ಬಿಡುತ್ತಿದ್ದರು. ಅವರು ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾಗಿದ್ದರು. ಅವರು ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಇರಲಿ–ಇಲ್ಲದೇ ಇರಲಿ, ಅದು ಯಾವ ಬಗೆಯಲ್ಲೂ ಅವರ ಪಾದರಸದಂತಹ ಕಾರ್ಯವೈಖರಿಗೆ ಭಂಗ ತರುತ್ತಿರಲಿಲ್ಲ. ಸಂಘದ ಎಲ್ಲ ಕಾರ್ಯಚಟುವಟಿಕೆಗಳಲ್ಲೂ ಮುಂಚೂಣಿಯಲ್ಲಿದ್ದುಕೊಂಡು ಕಾರ್ಯ ನಿರ್ವಹಿಸುತ್ತಿದ್ದರು. ಅವರದ್ದು ಯಾವಾಗಲೂ ನಗುಮುಖ, ತುಸು ಚೂಪಾದ ಗಲ್ಲ, ನಕ್ಕರೆ ಪೂರಾ ಮುಖದಲ್ಲಿ ಒಂದು ಬಗೆಯ ಮಿಂಚು ಹರಿದ ಹಾಗೆ. ಅವರ ಒಡನಾಟದಲ್ಲಿ ಸೇರಿಕೊಂಡವರಿಗೆ ಅವರು ಮೈಸೂರು ಮಲ್ಲಿಗೆಯ ಕಂಪನ್ನು ಬೀರುತ್ತಿದ್ದರು. ಇನ್ನೊಂದು ಬಗೆಯಲ್ಲಿ ನೋಡಿದರೆ ಶ್ರೀಮತಿ ಜ್ಯೋತ್ಸ್ನಾ ರಾವ್‌ರವರು ಖಂಡಿತವಾದಿಯಂತೆ ತೋರುತ್ತಿದ್ದರು. ಹೊರಕವಚ ಹಾಗಿತ್ತಷ್ಟೆ. ಸ್ವಲ್ಪ 'ಹಾಗೆ–ಹೀಗೆ' ಎಂದು ಒಲಿಸಿಕೊಂಡು ಮಾತನಾಡಿದರೆ, ಅವರ ಮುನಿಸೆಲ್ಲಾ ಗಸಗಸೆ ಪಾಯಸದಂತೆ ಸವಿಯಾಗಿ ಮರೆಯಾಗಿ ಬಿಡುತ್ತಿತ್ತು.

ನಾನು ದೆಹಲಿಗೆ ಬಂದು ದೆಹಲಿ ಕರ್ನಾಟಕ ಸಂಘದ ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಹೊತ್ತಿಗೆ ಶ್ರೀಮತಿ ಜ್ಯೋತ್ಸ್ನಾ ರಾವ್ ಅವರು ಸಂಘದ ಮುಂಚೂಣಿಯಲ್ಲಿದ್ದರು. ಪ್ರತಿಯೊಂದು ಕಾರ್ಯಕ್ರಮದಲ್ಲಿ, ಅದರಲ್ಲೂ ಮುಖ್ಯವಾಗಿ ಸಂಘದ ವಾರ್ಷಿಕೋತ್ಸವದ ಕಾರ್ಯಕ್ರಮಗಳಲ್ಲಿ ಅವರ ಛಾಪು ಇದ್ದೇ ಇರುತ್ತಿತ್ತು. ಅಭಿಮತವನ್ನು ನಾನು ಸಂಪಾದಿಸಲು ಪ್ರಾರಂಭಿಸಿದ ಮೇಲೆ ಸಂಘದೊಂದಿಗೆ ಸಂಬಂಧ ನಿಕಟವಾಯಿತು. ಈ 1990ರ ದಶಕದಲ್ಲಿ ನಡೆದ ಎಲ್ಲ ಕಾರ್ಯ ಚಟುವಟಿಕೆಗಳ ದಾಖಲಾತಿಯನ್ನು ಅಭಿಮತದಲ್ಲಿ ನಾವು ಮಾಡಿದ್ದೆವು. ಅದರಲ್ಲಿ ಶ್ರೀಮತಿ ಜ್ಯೋತ್ಸ್ನಾ ರಾವ್ ಅವರದ್ದು ಸಿಂಹಪಾಲು ಎಂದು ಬೇರೆ ಹೇಳಬೇಕಾಗಿಲ್ಲ. ಈ ವೇಳೆಯಲ್ಲಿ 'ಕನ್ನಡ–ಭಾರತೀ' ಅಸ್ತಿತ್ವದಲ್ಲಿದ್ದರೂ ಯಾವುದೇ ಕಾರ್ಯಕ್ರಮಗಳನ್ನು ನೀಡುತ್ತಿರಲಿಲ್ಲ. ಶ್ರೀಮತಿ ಜ್ಯೋತ್ಸ್ನಾ ರಾವ್‌ರವರು 'ಕನ್ನಡ–ಭಾರತೀ'ಯ ನಾಟಕಗಳಲ್ಲಿ ಅಭಿನಯಿಸಿದ್ದರ ಕುರಿತಾಗಿ ಹಲವರು ಹೇಳಿದ್ದಾರೆ ಮತ್ತು ಬರೆದಿದ್ದಾರೆ. ಈ 1990ರ ದಶಕದಲ್ಲಿ ಕನ್ನಡ–ಭಾರತೀ ಯ ಹಲವು ಗಣ್ಯರು ದೆಹಲಿಯಿಂದ ಕರ್ನಾಟಕದತ್ತ ತೆರಳಿ ಅಲ್ಲಿ ಸಕ್ರಿಯವಾಗಿದ್ದರು.

ಶ್ರೀಮತಿ ಜ್ಯೋತ್ಸ್ನಾ ರಾವ್‌ರವರ ಕುರಿತಾದ ಲೇಖನವನ್ನು ಅವರ ಪತಿ ಶ್ರೀ ಎಚ್‌ಎಮ್‌ಆರ್ ರಾವ್‌ರವರನ್ನು ನೆನಪು ಮಾಡದೇ ಮುಗಿಸುವ ಹಾಗೆ ಇಲ್ಲ. ಶ್ರೀ ರಾವ್‌ರವರೂ ಸಹ ದೆಹಲಿ ಕರ್ನಾಟಕ ಸಂಘದ ಪ್ರತಿಯೊಂದು ಚಟುವಟಿಕೆಗಳಲ್ಲೂ ಸದ್ದುಗದ್ದಲವಿಲ್ಲದೆ ಪಾಲ್ಗೊಳ್ಳುತ್ತಿದ್ದರು. ತೀರಾ ಶಾಂತ ಸ್ವಭಾವದ ಹಾಗೂ ಅತ್ಯಂತ ಸರಳ ವ್ಯಕ್ತಿ. ಶ್ರೀಮತಿ ಜ್ಯೋತ್ಸ್ನಾ ರಾವ್‌ರವರದ್ದು ಒಂದು ಬಗೆಯಲ್ಲಿ ರಭಸದಿಂದ ಚಟಪಟನೇ ಹಿಮಾಲಯದಿಂದ ಕೆಳಗಿಳಿಯುವ ಗಂಗೆಯಂತಹ ವ್ಯಕ್ತಿತ್ವವಾದರೆ, ಶ್ರೀ ಎಚ್‌ಎಮ್‌ಆರ್ ರಾಯರದ್ದು ಗಂಭೀರವಾಗಿ, ನಿಧಾನವಾಗಿ, ವಿಸ್ತಾರವಾಗಿ ಉತ್ತರ ಭಾರತದ ಗುಂಟ ಹರಿಯುವ ಗಂಗೆಯಂತೆ. ಎರಡು ಭಿನ್ನ ವ್ಯಕ್ತಿತ್ವಗಳು, ಆದರೆ ಒಂದಕ್ಕೊಂದು ಹೊಂದಿಕೊಂಡು ನಡೆದ ಬಗೆ ಅದ್ಭುತವಾದದ್ದು.

ಶ್ರೀ ಎಚ್‌ಎಮ್‌ಆರ್ ರಾಯರ ಬಳಿ ದೂರವಾಣಿಯಲ್ಲಿ ಮಾತನಾಡಿದಾಗ ಅದೇ ಸೌಜನ್ಯತೆ ಹಾಗೂ ಸರಳತೆ. 'ದೆಹಲಿಗೆ ಬಂದಾಗ ಸಂಘಕ್ಕೆ ಬನ್ನಿ' ಎಂದೆ. "ಖಂಡಿತವಾಗಿ ಬರ್ತೇನೆ" ಎಂದರು. ಸಂಘದ ಕಾರ್ಯಚಟುವಟಿಕೆಗಳ ವಿಚಾರಗಳನ್ನು ಕೇಳಿ ಸಂತಸಪಟ್ಟರು. ಕೊನೆಯಲ್ಲಿ ಹೇಳುವುದಾದರೆ, ಈ ಬಗೆಯ ಪ್ರೀತಿ ವಿಶ್ವಾಸಗಳ ಬುನಾದಿಯಲ್ಲಿ ದೆಹಲಿ ಕರ್ನಾಟಕ ಸಂಘ ರೂಪುಗೊಂಡಿದೆ. ಅದರೊಳಗಿದ್ದು ಕೆಲಸ ಮಾಡಿದವರಿಗೆಲ್ಲ ಸಂಘವೆಂದರೆ ಒಂದು ಬಗೆಯಲ್ಲಿ ಮನೆಯಿದ್ದ ಹಾಗೆ. ದಿವಂಗತ ಶ್ರೀಮತಿ ಜ್ಯೋತ್ಸ್ನಾ ರಾವ್‌ರವರು ನಂತರದಲ್ಲಿ ದೆಹಲಿಯನ್ನು ತೊರೆದು ಮೈಸೂರಿಗೆ ತೆರಳಿದರೂ, ತಮ್ಮೊಂದಿಗೆ ಸಂಘದ ಒಂದು ತುಣುಕನ್ನು ತಮ್ಮೊಂದಿಗೆ ತೆಗೆದುಕೊಂಡೇ ನಡೆದರು. ಅವರಿಗೆ ವೈಯಕ್ತಿಕವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಪ್ರೀತಿಯ ನಮನಗಳು ಹಾಗೂ ಶ್ರದ್ಧಾಂಜಲಿಗಳು.

ಡಾ. ವೆಂಕಟಾಚಲ ಹೆಗಡೆ, ನವದೆಹಲಿ

# ಚಿರಂತನ ಚೇತನ–ಜ್ಯೋತ್ಸ್ನಾ ರಾವ್

ಋತು ಚಕ್ರ ತಿರುಗುವುದು, ಕಾಲನೆದೆ ಮರುಗುವುದು ।
ಮೃತನ ಮಣ್ಣಿಂದ ಹೊಸ ಹುಲ್ಲು ಮೊಳೆಯುವುದು ॥
ಕ್ಷಿತಿ ಗರ್ಭಧರಿಸುವಳು ಮತ್ತುದಿಸುವುದು ಜೀವ ।
ಸತತ ಕೃಷಿಯೋ ಪ್ರಕೃತಿ – ಮಂಕುತಿಮ್ಮ ॥

ಯಾರು ಹುಟ್ಟುವರೋ ಅವರ ಸಾವು ನಿಶ್ಚಿತ. ಆದರೆ ಕನ್ನಡ ಮಾತೆಯ ಅವರ ಪ್ರೀತಿ, ಜನಪ್ರಿಯತೆ ಸಾವಿನ ನಂತರವೂ ಜೀವಂತವಾಗಿರುತ್ತದೆ ಎಂಬ ಮಾತಿಗೆ ಸಾಕ್ಷಿ ನಮ್ಮೆಲ್ಲರ ಪ್ರೀತಿಯ ಜ್ಯೋತ್ಸ್ನಾ.

ನಾನು 22 ಜೂನ್ 2012 ರಂದು ಅವರನ್ನು ಅವರ ಮೈಸೂರು ಮನೆಯಲ್ಲಿ ರಾತ್ರಿ 7 ಗಂಟೆಗೆ ಭೇಟಿ ಮಾಡಿ 8.30ಗಂಟೆಗೆ ವಾಪಸ್ ಬಂದೆ. ಆ ಒಂದೂವರೆ ಗಂಟೆಯಲ್ಲಿ ಅದೇನನ್ನು ಮಾತಾಡಿದೆವೋ, ಏನೇನು ಜ್ಞಾಪಿಸಿಕೊಂಡೆವೋ ಲೆಕ್ಕವಿಲ್ಲ. ಅವರ ಜ್ಞಾಪಕಶಕ್ತಿ, ಮಾತಿನಲ್ಲಿ ಉತ್ಸಾಹ, ನಾನು ಬಂದ ಸಂತೋಷ ಹೇಳತೀರದು. ಮಾರನೇ ದಿನ ಬರುವ ಮೊಮ್ಮಕ್ಕಳಿಗೆ ಮಾಡಿಸಿಟ್ಟ ಕೋಡುಬಳೆ, ಚಕ್ಕಲಿ, ಕೊಬ್ಬರಿ ಮಿಠಾಯಿ, ಪತಿಯು ಮಾಡುತ್ತಿರುವ ಸೇವೆಗೆ ಅವರ ಒಲವಿನ ಮಾತು, ದೆಹಲಿಯಲ್ಲಿ 45 ವರುಷಗಳ ಕಾಲ ಇದ್ದ ಅನುಭವ ಒಂದೇ ಎರಡೇ? ಅವರು ಮಲಗಿದ್ದ ಸ್ಥಿತಿಯಲ್ಲಿ ಆಚೀಚೆ ತಿರುಗಲೂ ಸಾಧ್ಯವಿಲ್ಲದೆ, ವ್ಹೀಲ್‌ಚೇರ್ ಮೇಲೂ ಕುಳಿತುಕೊಳ್ಳಲಾರದಂತಹ ಸ್ಥಿತಿಯಲ್ಲಿ ನಾನು ನೋಡಿದಾಗ "ಈ ಸ್ಥಿತಿಯಲ್ಲಿ ನನ್ನನ್ನು ನೋಡಲು ಬಂದೆಯಾ ನನಗೆ ಗೊತ್ತಿತ್ತು, ನೀನು ಯಾವಾಗ ಬಂದರೂ ನನ್ನನ್ನು ನೋಡಲು ಬರುವೆ. ಇದೇ ಕಡೆಯ ಭೇಟಿಯೇನೋ" ಎಂದರು. ಅವರು ಇತ್ತೀಚೆಗೆ ಶಾರೀರಿಕ ತೊಂದರೆಗೆ ಒಳಗಾಗಿ ಬಹಳ ನೋವು ಅನುಭವಿಸಿದರೂ ಆ ನೋವಿನಲ್ಲೂ ನಲಿವು–ಹಾಸ್ಯ ಉಲ್ಲಾಸವಾಡುತ್ತಿತ್ತು. ಕುಟುಂಬದಲ್ಲಿ ಅವರು ಪತಿ–ಪತ್ನಿಯರು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿದ್ದರು. ಜ್ಯೋತ್ಸ್ನಾರವರ ಪತಿ ರಾವ್‌ರವರು ಅವರನ್ನು ಈಗ 3 ವರ್ಷಗಳಿಂದ ಆಕೆಯನ್ನು ನೋಡಿ–ಕೊಂಡು, ಒಂದು ದಿನವೂ ಬೇಸರವಾಗದಂತೆ ಕಾಪಾಡಿಕೊಂಡು ಬಂದಿದ್ದನ್ನು ನಾನು ಹತ್ತಿರದಿಂದ ಕಂಡಿದ್ದೇನೆ.

ಜ್ಯೋತ್ಸ್ನಾ ಉತ್ಸಾಹದ ಚಿಲುಮೆ, ಪಾದರಸದಂತೆ ಕರ್ನಾಟಕ ಸಂಘ, ಕನ್ನಡ ಲೇಡಿಸ್ ಕ್ಲಬ್, ದೆಹಲಿ ಕನ್ನಡಿಗ ಸಮ್ಮೇಳನ, ಕನ್ನಡ ಫಿಲ್ಮ್ ಅಸೋಸಿಯೇಶನ್ ಪದಾಧಿಕಾರಿಯಾಗಿ ಎಲ್ಲೆಡೆ ಮಿಂಚುತ್ತಿದ್ದರು.

ಜ್ಯೋತ್ಸ್ನಾರವರ ಪ್ರಿಯ ತಿಂಡಿಗಳು ಕೋಡುಬಳೆ, ಚಕ್ಕುಲಿ, ಮೈಸೂರುಪಾಕ್, ಕೊಬ್ಬರಿ ಮಿಠಾಯಿ, ಬಿಸಿಬೇಳೆ, ಹುಳಿಯನ್ನ, ಹಯಗ್ರೀವ. ವೀಳ್ಯದೆಲೆ, ಬಣ್ಣಕಟ್ಟಿದ ಮೈಸೂರು ಅಡಿಕೆ–ಸುಣ್ಣ!! ಸಾಮಗರು ನಡೆಸುತ್ತಿದ್ದ ಸಮ್ಮೇಳನಗಳಲ್ಲಿ "ಆಹಾರೋತ್ಸವ"ವೂ ಒಂದು ಕಮ್ಮಟವಾಗಿತ್ತು. ಆಗ ಅನೇಕ ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ಸದಸ್ಯೆಯರೊಡನೆ ಜ್ಯೋತ್ಸ್ನಾರವರು ಕರ್ನಾಟಕ ಮಸಾಲೆ ಪುಡಿ, ತಿಂಡಿಗಳನ್ನು ಪ್ರದರ್ಶಿಸಿ–ಮಾರುತ್ತಿದ್ದರು. ಅದೊಂದು ಕಾಲ ಜ್ಯೋತ್ಸ್ನಾ ರಾವ್, ಸುಮಿತ್ರಾರಾವ್, ಅಹಲ್ಯಾಚಿಂತಾಮಣಿ ಎಂದರೆ ಕರ್ನಾಟಕ ಸಂಘದ



ಕಾರ್ಯಕ್ರಮಗಳ ನಿರ್ವಾಹಕರು ಎಂಬ ಮಾತು ಸದಾ ಕೇಳಿ ಬರುತ್ತಿತ್ತು. ದಿವಂಗತ ಗೋಪಾಲ ಶಾಸ್ತ್ರಿಗಳು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ ಮೊದಲ ಬಾರಿಗೆ ರಕ್ತದಾನ ಶಿಬಿರ ದಿ.ಕೆ.ಆರ್. ನಾಗರಾಜರವರು ಏರ್ಪಡಿಸಿದ್ದಾಗ ಜ್ಯೋತ್ಸ್ನಾ ಮತ್ತು ನಾನು ಇಬ್ಬರೂ ಮೊದಲು ರಕ್ತದಾನ ಮಾಡಿದಾಗ ರಕ್ತ ಕೊಟ್ಟರೆ ನಿಶ್ಶಕ್ತರಾಗುತ್ತೇವೆ ಎಂಬ ಭ್ರಮೆಯಿಂದ ಬಂದ ಜನ ಒಬ್ಬೊಬ್ಬರಾಗಿ ಪ್ರೇರಿತರಾಗಿ ಮುಂದೆ ಬರುತ್ತಿದ್ದರು ರಕ್ತದಾನ ಮಾಡಲು. ಜ್ಯೋತ್ಸ್ನಾ ಎಲ್ಲದರಲ್ಲೂ ಮುಂದು ಕನ್ನಡಿಗರ ಆಟಪಾಠದಲ್ಲಿ, ನೋಟ-ಊಟದಲ್ಲಿ ಅನೇಕ ಕಾರ್ಯಕ್ರಮಗಳನ್ನು ನಿರ್ವಹಿಸುವುದರಲ್ಲಿ ಮುಂದಾಳು. ದೆಹಲಿಯ "ಕನ್ನಡ ಭಾರತಿ"ಯಲ್ಲಿ ಅವರ ಪಾತ್ರಗಳು ಜನಪ್ರಿಯ. ಭರತನಾಟ್ಯ ಕಲಾವಿದೆಯಾಗಿದ್ದ ಅವರು "ಪ್ರೇಮ-ಕಾಮ", ತಾರರವರ "ಹಸೀನಾ", "ಫಣಿಯಮ್ಮ" ಮೊದಲಾದ ಚಿತ್ರಗಳಲ್ಲಿ ಕೂಡಾ ಅಭಿನಯಿಸಿದ್ದರು. ಅವರ ಹಿರಿಯ ಮಗಳು "ಕಿರಿಯ ಫಣಿಯಮ್ಮ" ಪಾತ್ರ ಮಾಡಿದ್ದಳು. ಜಿ.ವಿ. ಅಯ್ಯರ್, ಎಂ. ಎಸ್. ಸತ್ಯು, ಬಿ.ವಿ. ಕಾರಂತ, ಪ್ರೇಮಾ ಕಾರಂತ, ಗಿರೀಶ್ ಕಾರ್ನಾಡ್ ಇವರೆಲ್ಲರೂ ಅವರ ಒಡನಾಡಿಗಳು. ಅವರೆಲ್ಲಾ ದೆಹಲಿಗೆ ಬಂದಾಗಲೆಲ್ಲಾ ಅವರ ಮನೆಯಲ್ಲೇ ಸೇರುತ್ತಿದ್ದರು. ಅತಿಥಿ ಸತ್ಕಾರ-ಜ್ಯೋತ್ಸ್ನಾರವರ ಇನ್ನೊಂದು ವಿಶೇಷ ಗುಣ. ಯಾರೇ ಅತಿಥಿಗಳು ಬಂದರೂ ಅವರ ಮನೆಯಲ್ಲಿ ಊಟೋಪಾಚಾರವಿಲ್ಲದೆ ತೆರಳುತ್ತಿರಲಿಲ್ಲ.

ದೆಹಲಿ ಕರ್ನಾಟಕ ಸಂಘದ ಸುವರ್ಣ ಮಹೋತ್ಸವದಲ್ಲಿ ಅವರ ಕೊಡುಗೆ ಅಪಾರವಾಗಿತ್ತು. 'ಮಾತಿನ ಮಲ್ಲಿ' ಎಂದೇ ಖ್ಯಾತರಾಗಿದ್ದ ಜ್ಯೋತ್ಸ್ನಾ 'ಮಾತು ಬಲ್ಲವರಿಗೆ ಜಗಳವಿಲ್ಲ' ಎಂಬಂತೆ ಎಲ್ಲರ ಪ್ರೀತಿ, ಸ್ನೇಹ, ಸೌಹಾರ್ದತೆಯನ್ನು ಗೆದ್ದರು. ಎರಡು ತಿಂಗಳ ಹಿಂದೆ ಅವರನ್ನು ನೋಡಿ, ಮಾತನಾಡಿದ ತೃಪ್ತಿ ನನಗಿದೆ.

ಅಗಲಿದ ಆತ್ಮಕ್ಕೆ ಶಾಂತಿ ಕೊಡಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

ಡಾ. ಅಹಲ್ಯಾ ಚಿಂತಾಮಣಿ, ನವದೆಹಲಿ

# ಸರಳ, ಸಜ್ಜನಿಕೆಯ ಸ್ನೇಹಮಯಿ-ಜ್ಯೋತ್ಸ್ನಾ



'ಯಯಾತಿ'-ನಾಟಕದಲ್ಲಿ ಲಲಿತಾ ಕೃಷ್ಣಮೂರ್ತಿ-ದೇವಯಾನಿ, ಎಂ.ವಿ. ನಾರಾಯಣ ರಾವ್-ಯಯಾತಿ, ಜ್ಯೋತ್ಸ್ನಾ ರಾವ್-ಶರ್ಮಿಷ್ಠೆ ಪಾತ್ರದಲ್ಲಿ

ಹುಟ್ಟು ಆಕಸ್ಮಿಕ, ಬದುಕು ಅನಿವಾರ್ಯ, ಸಾವು ನಿಶ್ಚಿತ. ಆದರೂ ಸಾವಿನ ಸುದ್ದಿ ತಿಳಿದಾಗ, ಕೇಳಿದಾಗ ಮನಸ್ಸು ಒಂದೇ ರೀತಿ ಸಂತಾಪಗೊಳ್ಳುವುದಿಲ್ಲ. ನಿಧನರಾದ ವ್ಯಕ್ತಿಯ ಜೊತೆ ನಮ್ಮ ಸಂಬಂಧ ಯಾವ ರೀತಿ ಇರುತ್ತದೆಯೋ, ಅದೇ ರೀತಿ ದುಃಖವಾಗುತ್ತದೆ. ಶ್ರೀಮತಿ ಜ್ಯೋತ್ಸ್ನಾ ರಾವ್ ಅವರು ನಿಧನರಾದ ವಿಷಯ ತಿಳಿದಾಗ ತುಂಬಾ ದುಃಖವಾಯಿತು.

ಶ್ರೀಮತಿ ಜ್ಯೋತ್ಸ್ನಾ ರಾವ್ ಅವರು ನಮ್ಮ ಆತ್ಮೀಯ ಸ್ನೇಹಿತರಲ್ಲಿ ಒಬ್ಬರಾಗಿದ್ದರು. ಅವರ ಪರಿಚಯ ನಮಗೆ ಆಗಿದ್ದು "ಕನ್ನಡ ಭಾರತಿ"ಯ ಮೂಲಕ.

'ಕನ್ನಡ ಭಾರತಿ'ಯ ರಜತ ಮಹೋತ್ಸವದ ಸಂದರ್ಭದಲ್ಲಿ ಶ್ರೀಯುತ ಎಂ.ಎಸ್. ಸತ್ಯು ಅವರ ನಿರ್ದೇಶನದಲ್ಲಿ ಮೂರು ಗಂಟೆ ಅವಧಿಯ ಒಂದು ನಾಟಕವನ್ನು ಪ್ರದರ್ಶಿಸಲಾಯಿತು. ಅದುವೇ ಶ್ರೀ ಮುನ್ಷಿ ಪ್ರೇಮಚಂದ್ ಅವರ ಕೃತಿಯ ಕನ್ನಡ ಅನುವಾದ 'ಮೋಟೆರಾಮನ ಸತ್ಯಾಗ್ರಹ' ನಾಟಕ. ಈ ನಾಟಕದಲ್ಲಿ 50ಕ್ಕೂ ಹೆಚ್ಚು ಜನ ಕೆಲಸ ಮಾಡಿದರು. ಸುಮಾರು ಎರಡೂವರೆ ತಿಂಗಳ ತನಕ ರಿಹರ್ಸಲ್ ನಡೆಯಿತು. ಈ ನಾಟಕದಲ್ಲಿ ನನಗೆ ಮತ್ತು ನನ್ನ ಹೆಂಡತಿ ರಾಧಾ ಕೌಜಲಗಿ ಅವರಿಗೆ ಅಭಿನಯಕ್ಕೆ ಅವಕಾಶ ದೊರೆಯಿತು. ಶ್ರೀಯುತ ಸತ್ಯು ಅವರ ನಿರ್ದೇಶನದಲ್ಲಿ ಕೆಲಸ ಮಾಡುವ ಅವಕಾಶ ದೊರೆತದ್ದು ನಮ್ಮ ಜೀವನದ ಒಂದು ಮರೆಯಲಾಗದ ಅನುಭವ ಎಂದು ಹೇಳಬಹುದು.

ಈ ನಾಟಕದ ರಿಹರ್ಸಲ್‌ಗೆ ನಾವೆಲ್ಲ ಪ್ರತಿ ದಿನ ಸಂಜೆ ಸೇರುತ್ತಿದ್ದೆವು. ಈ ಮೂಲಕ ಬಹಳಷ್ಟು ಜನರ ಪರಿಚಯ ನಮಗಾಯಿತು. ಹಾಗೆಯೇ ಜ್ಯೋತ್ಸ್ನಾ ಅವರ ಪರಿಚಯ ಕೂಡಾ ಆಯಿತು. ಆ ಸಮಯದಲ್ಲಿ ಅವರನ್ನು ಹತ್ತಿರದಿಂದ ನೋಡುವ ಮತ್ತು ತಿಳಿದುಕೊಳ್ಳುವ ಅವಕಾಶ ಒದಗಿತು. ಕನ್ನಡ ಭಾರತಿಯಲ್ಲಿ ಅವರು ಈ ಮೊದಲೇ ಬಹಳಷ್ಟು ನಾಟಕಗಳನ್ನು ಮಾಡಿದ್ದರು. ಆಳವಾದ ಅನುಭವ ಅವರಿಗಿತ್ತು. ನಾಟಕದಲ್ಲಿ ಯಾವುದೇ ಪಾತ್ರವನ್ನು ಕೊಟ್ಟರೂ ಅದರಲ್ಲಿ ತಮ್ಮ ಪ್ರತಿಭೆಯನ್ನು ತೋರಿಸುವ ಛಲ ಅವರಿಗಿತ್ತು.

ಈ ನಾಟಕದಲ್ಲಿ ಅವರು ಅಭಿನಯಿಸಿದ್ದು ಬ್ರಿಟಿಷ್ ಮ್ಯಾಜಿಸ್ಟ್ರೇಟ್ ಆಫೀಸಿನಲ್ಲಿ ಮಹಿಳಾ ಅಧಿಕಾರಿಯ ಪಾತ್ರ. ನನ್ನ ಪಾತ್ರ ಮ್ಯಾಜಿಸ್ಟ್ರೇಟ್‌ನದಾಗಿತ್ತು. ಅವರು ತಮ್ಮ ಪಾತ್ರವನ್ನು ತುಂಬಾ ಚೆನ್ನಾಗಿ ನಿರ್ವಹಿಸಿದರು. ತಮ್ಮ ಅನುಭವಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿದ್ದರು ಮತ್ತು ನಮಗೆ ಮಾರ್ಗದರ್ಶನ ನೀಡುತ್ತಿದ್ದರು.

ನಾಟಕದ ರಿಹರ್ಸಲ್ ವೇಳೆಯಲ್ಲಿ ತಮ್ಮ ಸಹ ನಟರೊಂದಿಗೆ ಜ್ಯೋತ್ಸ್ನಾ ರಾವ್ ಅವರು ಅತ್ಯಂತ ಆತ್ಮೀಯತೆ, ಸರಳತೆ ಹಾಗೂ ಪ್ರೀತಿಯಿಂದ ಬೆರೆಯುತ್ತಿದ್ದರು. ಎಲ್ಲರೊಡನೆ ಅವರು ವರ್ತಿಸುತ್ತಿದ್ದ ರೀತಿ ನಿಜಕ್ಕೂ ಅನನ್ಯ ಹಾಗೂ ಅನುಕರಣೀಯವಾದದ್ದು. ಯಾವುದೇ ವಯಸ್ಸಿನ ತಾರತಮ್ಯವಿಲ್ಲದೇ ಎಲ್ಲರೊಡನೆ ಅವರು ಬೆರೆಯುತ್ತಿದ್ದನ್ನು ನಾನೆಂದಿಗೂ ಮರೆಯಲಾರೆ.

ಯಾವಾಗಲೂ ಎಲೆ ಅಡಿಕೆ ತಿನ್ನುವ ಅಭ್ಯಾಸವಿದ್ದ ಜ್ಯೋತ್ಸ್ನಾ ಎಲ್ಲರಿಗೂ ಸುಗಂಧಿತ ಅಡಿಕೆಯನ್ನು ಪ್ರೀತಿಯಿಂದ ಹಂಚಿಕೊಳ್ಳುತ್ತಿದ್ದರು. ನಾನೂ ಅವರೊಡನೆ ಎಲೆ ಅಡಿಕೆಯ ಸವಿ ಸುಖವನ್ನು ಅನುಭವಿಸಿದ್ದೇನೆ. ಅವರು ನನ್ನನ್ನು ಪ್ರೀತಿಯಿಂದ "ಅರವಿಂದು" ಎಂದೇ ಕರೆಯುತ್ತಿದ್ದರು. ನಾನು ಅವರನ್ನು ಗೌರವದಿಂದ "ಜ್ಯೋತ್ಸ್ನಾ" ಎಂದು ಕರೆಯುತ್ತಿದ್ದೆ.


ತಮ್ಮ ನಿವೃತ್ತ ಬದುಕನ್ನು ಕಳೆಯಲು ದೆಹಲಿಯಿಂದ ಮೈಸೂರಿಗೆ ತೆರಳಿದ ಮೇಲೆ ಅವರೊಡನೆಯ ಸಂಪರ್ಕ ಕಡಿಮೆಯಾಯಿತು. ಇಂದಿಗೂ ನಾನು ಯಾವುದೇ ನಾಟಕೋತ್ಸವ ಅಥವಾ ನಾಟಕಕ್ಕೆ ಸಂಬಂಧಿತ ವಿಚಾರದ ಚರ್ಚೆಯಲ್ಲಿ ಭಾಗವಹಿಸಿದಾಗ ಜ್ಯೋತ್ಸ್ನಾ ಅವರ ನೆನಪಿನ ಚಿತ್ರಗಳು ಮನದಾಳದಲ್ಲಿ ಅಚ್ಚಳಿಯದೇ ಮೂಡುತ್ತವೆ. ಅವರೊಡನೆ ಕಳೆದ ಅವಿಸ್ಮರಣೀಯ ದಿನಗಳು ನೆನಪಾಗುತ್ತವೆ.

ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಕೋರುತ್ತೇನೆ.

ಅರವಿಂದ ಕೌಜಲಗಿ, ನವದೆಹಲಿ

ಶ್ರದ್ಧಾಂಜಲಿ

# "ಇನ್ನಿಲ್ಲದ 'ಕನ್ನಡ-ಭಾರತಿ'ಯ ಕುವರಿ"



ಕನ್ನಡ-ಭಾರತೀ

KANNADA-BHARATI

BELLI HABBA

( SILVER JUBILEE CELEBRATIONS )

Dear friend

KANNADA-BHARATI presents MOTERAMANA SATYAGRAHA, a play in 12 scenes, on **Friday, 14 and Saturday, 15 December 1990 at 6-30 p.m. each day** at FINE ARTS THEATRE, Rafi Marg, New Delhi.

Based on a short story, SATYAGRAH, by Premchand, it was first adapted to Hindi stage by Late Shri Safdar Hashmi and Shri Habib Tanvir. Kannada rendering has been done by Shri S. Ramaswamy and Shri D. K. Venkata Rao.

SATYAGRAH was written by Premchand over fifty-five years ago. But, the story is relevant to the situations current in today's society, and is strikingly contemporaneous.

Shri M. S. Sathyu directs the play.

8 December 1990
NEW DELHI

Yours faithfully
*Members*
KANNADA-BHARATI

Entry to the shows is regulated by passes. They will be issued on 14 and 15 December '90 at the Fine Arts Theatre foyer between 11 a.m. and 6 p.m. on 'first come first served' basis. Kindly cooperate. Please occupy your seat by 6-15 p.m.

ನಾನು ದೆಹಲಿಗೆ ಬಂದ ಹೊಸದರಲ್ಲಿ ಜ್ಯೋತ್ಸ್ನಾ ರಾವ್ ಅವರನ್ನು ಭೇಟಿಯಾಗಿದ್ದು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ. ಸದಾ ಉತ್ಸಾಹ ತುಂಬಿದ, ಮುಗ್ಧ ಮನಸ್ಸಿನ, ಯಾವಾಗಲೂ ಹೊಸದನ್ನೇನಾದರೂ ಮಾಡಬೇಕು ಎಂಬ ಹಂಬಲ ಹೊಂದಿದ ಹಾಗೂ ತಮ್ಮನ್ನು ಯಾವಾಗಲೂ ಯುವತಿಯೆಂದೇ ಪರಿಚಯಿಸುತ್ತಿದ್ದ ಜ್ಯೋತ್ಸ್ನಾ ರಾವ್ ದೆಹಲಿಯ ಅನೇಕ ಕಲಾವಿದರಿಗೆ ಕಲೆಯಲ್ಲಿ ಆಸಕ್ತಿ ಹುಟ್ಟಿಸುತ್ತಿದ್ದ ಅಪ್ಪಟ ರಂಗ ಕಲಾವಿದೆ ಇನ್ನಿಲ್ಲ ಎಂದು ಕೇಳಿದಾಗ ಅತೀವ ದುಃಖವಾಯಿತು.

1963ರಲ್ಲಿ ಪ್ರಾರಂಭಗೊಂಡ ಕನ್ನಡ ಭಾರತಿಗೆ 4/1, W.E.A. ಕರೋಲ್‌ಬಾಗ್, ನವದೆಹಲಿ–110005 ವಿಳಾಸವಾಗಿತ್ತು. ಈ ವಿಳಾಸವೇ ಕನ್ನಡ–ಭಾರತಿಯ ಕುವರಿ ಜ್ಯೋತ್ಸ್ನಾ ರಾವ್ ಅವರದಾಗಿತ್ತು. ಕನ್ನಡ–ಭಾರತಿಯ ಎಲ್ಲ ಕಲಾವಿದರನ್ನು ಒಂದು ಕುಟುಂಬದ ಸದಸ್ಯರಂತೆ ಕಾಣುತ್ತಿದ್ದ, ಸರ್ವರಿಗೂ ಸಮಾನ ಆದರಾತಿಥ್ಯ ನೀಡುತ್ತಿದ್ದ, ಅವರ ಔದಾರ್ಯವನ್ನು ಈಗಲೂ ದೆಹಲಿಯ ಅಳಿದುಳಿದ ಕಲಾವಿದರು ನೆನೆಪಿಸಿಕೊಳ್ಳುತ್ತಿದ್ದೇವೆ. ರಂಗ ತಾಲೀಮಿಗೆಂದು ಅವರ ಮನೆಗೆ ಹೋದಾಗ ಅವರು ನೀಡುತ್ತಿದ್ದ ಉಪ್ಪಿಟ್ಟು, ಅವಲಕ್ಕಿ, ಚಹಾ ನಾವು ಮರೆಯಲಾಗುವುದಿಲ್ಲ. ಅಂದು ಕನ್ನಡ ಭಾರತೀ ಪೋಷಿಸಿದ ಅನೇಕ ಕಲಾವಿದರು ಉತ್ತಮ ಪ್ರದರ್ಶನಗಳನ್ನು ನೀಡುತ್ತಿದ್ದರು.

ಕನ್ನಡ ಭಾರತೀ–ಒಂದು ಅತ್ಯುತ್ತಮ ಸಂಘಟನೆಯಾಗಿತ್ತು. ಅಲ್ಲಿ ಯಾವುದೇ ರೀತಿಯ ರಾಜಕೀಯತೆ ತಲೆ ಹಾಕಿರಲಿಲ್ಲ ಎಂಬುದು ನನ್ನ ಅನಿಸಿಕೆ.

ಓದುಗರೇ, ಈ ಲೇಖನದೊಂದಿಗೆ ಪ್ರಕಟಿಸಿದ 'ಕನ್ನಡ–ಭಾರತಿ'ಯ ಬೆಳ್ಳಿ ಹಬ್ಬದ ಅಂಗವಾಗಿ ಪ್ರದರ್ಶಿತಗೊಳ್ಳಲಿದ್ದ "ಮೋಟೆರಾಮನ ಸತ್ಯಾಗ್ರಹ" ನಾಟಕದ ಆಮಂತ್ರಣ, ಕಾರ್ಯದರ್ಶಿ ಎಂಬ ಯಾವುದೇ ನಾಮಧೇಯಗಳಿಲ್ಲ. ಬದಲಿಗೆ ಸದಸ್ಯರು 'ಕನ್ನಡ–ಭಾರತೀ' ಎಂದಿದೆ. ಇಂಥ ಆಮಂತ್ರಣ ಪತ್ರಿಕೆಗಳು ಈಗ ಸಿಕ್ಕುತ್ತಿಲ್ಲ. ಅದೊಂದು ಕೇವಲ ಕಲೆಗಾಗಿ ಕೆಲಸ ಮಾಡುತ್ತಿದ್ದ ಕಾರ್ಯಕರ್ತರು ಹಾಗೂ ಕಲಾವಿದರಿಂದ ಕಟ್ಟಲ್ಪಟ್ಟ, ಪೋಷಿಸಲ್ಪಟ್ಟ, ಉತ್ತಮ ಕಾರ್ಯಕರ್ತರನ್ನು ಹೊಂದಿದ್ದ ಸಂಘಟನೆ ಆಗಿತ್ತು. ಇಂಥ ಸಂಘಟನೆ ಇದ್ದಾಗಲೇ ಅಲ್ಲವೇ ಉತ್ತಮ ಪ್ರದರ್ಶನಗಳನ್ನು ನೀಡಲು ಸಾಧ್ಯವಾಗುವುದು? ಆಡಂಬರದ ಆಮಂತ್ರಣ ಪತ್ರಿಕೆಗಳು, ಫೋನ್‌ಗಳು, ಇ–ಮೇಲ್‌ಗಳು ಎಲ್ಲ ಸಾಧನಗಳನ್ನು ಉಪಯೋಗಿಸಿಯೂ ನಮಗಿಂದು ಪ್ರೇಕ್ಷರನ್ನು ಒಟ್ಟುಗೂಡಿಸಲು ಆಗುತ್ತಿಲ್ಲ. ಈ ಯಾವ ಸಾಧನಗಳಿಲ್ಲದಾಗ 'ಕನ್ನಡ–ಭಾರತೀ' ನೀಡುತ್ತಿದ್ದ ಪ್ರದರ್ಶನಗಳು ದೆಹಲಿಯ ಪ್ರಮುಖ ರಂಗಮಂದಿರಗಳಲ್ಲಿ ಪ್ರದರ್ಶನಗೊಂಡು ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದವು ಎಂದರೆ ಓದುಗರೇ ನೀವೇ ಊಹಿಸಿ ಕಾರ್ಯಕ್ರಮದ ಗುಣಮಟ್ಟವನ್ನು!

ದೆಹಲಿಯ ಕಲಾವಿದರ ಕೈಲಾಸವೆನ್ನಬಹುದಾದ ಮಂಡಿಹೌಸ್‌ನಲ್ಲಿ ಇತ್ತೀಚೆಗೆ ನಡೆದ ನಾಟಕಕ್ಕೆ ಬೆಂಗಳೂರಿನಿಂದ ತಂಡವೊಂದು ಬಂದಿತ್ತು. ಅದರಲ್ಲಿನ ಹಿರಿಯ ಕಲಾವಿದರುಗಳು 'ಕನ್ನಡ–ಭಾರತಿ'ಯನ್ನು ನೆನಪಿಸಿಕೊಂಡರು. ಹಾಗೆ ನೆನೆಸಿಕೊಂಡವರಲ್ಲಿ ರಂಗತಜ್ಞ, ಬಿ.ವಿ. ರಾಮಮೂರ್ತಿ ಕೂಡ ಇದ್ದರು. 1990ರ ನಂತರ 'ಕನ್ನಡ–ಭಾರತೀ' ಯಾವುದೇ ಪ್ರದರ್ಶನ ನೀಡಿಲ್ಲವಾದರೂ ನೆನೆಸಿಕೊಳ್ಳುತ್ತಾರೆ ಎಂದರೆ ಪ್ರದರ್ಶನಗಳು ಎಷ್ಟು ಸತ್ವಯುತವಾಗಿರಬೇಕೆಂದು ಊಹಿಸಿರಿ.

ರಂಗ ತಂಡಗಳನ್ನು ಕಟ್ಟುವುದು ಸುಲಭ ಆದರೆ ರಂಗ ತಂಡಗಳನ್ನು ಬಹಳ ದಿವಸ ಉಳಿಸಿಕೊಳ್ಳುವುದು ಕಷ್ಟ! ಉತ್ತಮ ಪ್ರದರ್ಶನಗಳನ್ನು ನೀಡಲು ಕಲಾವಿದರು ಮುಖ್ಯವಾಗಿ ಅಗಾಧವಾದ ಕಲಾಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಒಂದು ಕುಟುಂಬ ಉಳಿಯಲು ಬೇಕಾದ ತ್ಯಾಗ, ಸಹನೆ, ಔದಾರ್ಯತೆ, ಸಹಕಾರ ಮನೋಭಾವ, ವಿಶ್ವಾಸದಂತಹ ಬಹುಮುಖ್ಯವಾದ ಗುಣಗಳು ಬೇಕಾಗುತ್ತವೆ.

ಇಂಥ ಎಲ್ಲ ಗುಣಗಳನ್ನು ನಮ್ಮ ಶ್ರೀಮತಿ ಜ್ಯೋತ್ಸ್ನಾ ರಾವ್ ಅವರಲ್ಲಿ ಕಂಡಿದ್ದೆ. ಅವರೊಂದಿಗೆ ಸಂಘದ ಕಾರ್ಯಕಾರಿ ಸಮಿತಿಯಲ್ಲಿಯೂ ಕೂಡಾ ಇದ್ದೆ. ಅವರೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಕೆಲಸ ಮಾಡಿದ್ದೇನೆ. ಸಂಘದ ವಾರ್ಷಿಕೋತ್ಸವಗಳಲ್ಲಿ, ಅದರಲ್ಲೂ ಆಟೋಟ ಸ್ಪರ್ಧೆಗಳಲ್ಲಿ ಹೊಸ ಆಟಗಳನ್ನು ಸೇರಿಸಿ ಇಳಿವಯಸ್ಸಿನಲ್ಲೂ ತಲೆಗೊಂದು ಕ್ಯಾಪ್ ಹಾಕಿ ಎಲ್ಲರಿಗಿಂತ ಮುಂದೆಯೇ ನಿಂತು ಮಕ್ಕಳೊಂದಿಗೆ ಮಗುವಾಗಿ, ಹಿರಿಯರೊಂದಿಗೆ ಯುವತಿಯಾಗಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಊಟವಾದ ನಂತರ ಅವರ ಎಲೆ–ಅಡಿಕೆ ಡಬ್ಬಿಯಿಂದ ನಾನು ಮತ್ತು ಕೃಷ್ಣ ಭಟ್ ತಿನ್ನುತ್ತಿದ್ದ ಎಲೆ–ಅಡಿಕೆ ಕಂಪನ್ನು ನಾವು ಮರೆಯುವಂತಿಲ್ಲ. ಅತೀವ ಪ್ರೀತಿಯಿಂದ ಎಲ್ಲರಿಗೂ ನಗುಮೊಗದಿಂದ ಹಂಚುತ್ತಿದ್ದರು. ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಓಡಾಡುತ್ತಿದ್ದ ಅವರಿಗೆ 'ನಿಧಾನವಾಗಿ ಓಡಾಡಿ ಮೇಡಂ ವಯಸ್ಸಾಯ್ತು' ಅಂದರೆ. "ಏಯ್! ನೀನು ಮುದುಕ ಆಗಿರಬಹುದು, ನಾನಿನ್ನೂ ಯುವತಿ" ಎನ್ನುತ್ತಿದ್ದರು. ಇಂಥ "ಕನ್ನಡ–ಭಾರತಿ"ಯ ಕುವರಿ ಇನ್ನಿಲ್ಲವಾದರೇ?

ಹೇ! 'ಕನ್ನಡ–ಭಾರತಿ'ಯ ಕುವರಿ ಜ್ಯೋತ್ಸ್ನಾ ರಾವ್ ನಿಮಗಿದೋ ಸದಾ ಯುವಕರಾಗಿಯೇ ಇರಬಯಸುವ ದೆಹಲಿಯ ಸಮಸ್ತ ಕನ್ನಡ–ಕಲಾವಿದರ ಶ್ರದ್ಧಾ ಸುಮನ.

ಚೆನ್ನು ಎಸ್. ಮಠದ, ನವದೆಹಲಿ

# ಕಣ್ಮರೆಯಾದ ದೆಹಲಿ ಕನ್ನಡಿಗರ ಮೆಚ್ಚಿನ ಶ್ರೀಮತಿ ಜ್ಯೋತ್ಸ್ನಾರಾವ್

ದೆಹಲಿಯ ಎಲ್ಲ ಕನ್ನಡ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶ್ರೀಮತಿ ಜ್ಯೋತ್ಸ್ನಾ ರಾವ್‌ರವರು 24.08.2012ರಂದು ಮೈಸೂರಿನಲ್ಲಿ ನಿಧನರಾದರು. ದೆಹಲಿ ಕನ್ನಡಿಗರ ಹೆಸರು ಬಂದಾಗ ಶ್ರೀಮತಿ ಜ್ಯೋತ್ಸ್ನಾ ರಾವ್‌ರನ್ನು ಮರೆಯುವಂತಿಲ್ಲ.

1937ರಲ್ಲಿ ಮೈಸೂರಿನಲ್ಲಿ ಜನಿಸಿದರು. ತಂದೆ ಕೆ.ಕೆ. ದಾಸ್ ಹೆಸರಾಂತ ಅಡ್ವೋಕೇಟ್ ಆಗಿದ್ದರು. ತಾಯಿ ಸುಂದರಮ್ಮ ಮೈಸೂರಿನಲ್ಲಿ ಸಮಾಜ ಸುಧಾರಕರಾಗಿ ಕೆಲಸ ಮಾಡುತ್ತಿದ್ದರು. ಮೈಸೂರಿನಲ್ಲಿ ಪಿಟೀಲು ಚೌಡಯ್ಯನವರ ಮನೆ ಎದುರು ವಾಸಿಸುತ್ತಿದ್ದರು. ಪಿಟೀಲು ಚೌಡಯ್ಯ ಹಾಗೂ ಜ್ಯೋತ್ಸ್ನಾ ರಾವ್‌ರ ತಾಯಿ ಮನೆ ಒಂದೇ ಮನೆಯಂತಾಗಿತ್ತು. ಹೀಗಾಗಿ ಬಾಲ್ಯದಿಂದಲೇ ಜ್ಯೋತ್ಸ್ನಾ ರಾವ್‌ರವರಿಗೆ ಸಂಗೀತ, ನಾಟಕ ಹಾಗೂ ನೃತ್ಯದಲ್ಲಿ ಬಹಳ ಆಸಕ್ತಿಯಿತ್ತು. ಮಾಸ್ಟರ್ ಸೋಹನ್ ಲಾಲ್ ಅವರ ಹತ್ತಿರ ಭರತನಾಟ್ಯ ಹಾಗೂ ಕಥಕ್ಕಳಿಯನ್ನು ಕಲಿತಿದ್ದರು. ಅವರು ಅನೇಕ ನೃತ್ಯ ಪ್ರದರ್ಶನ ಕೊಟ್ಟಿದ್ದಾರೆ. ಕ್ರೀಡೆಯಲ್ಲಿಯೂ ಸಹ ಆಸಕ್ತಿ ಹೊಂದಿದ್ದರು. ಮೊದಲನೆಯ ದೆಹಲಿಯ ಅಂತರರಾಜ್ಯ ವಿಶ್ವವಿದ್ಯಾಲಯ ಯುವ ಉತ್ಸವದಲ್ಲಿ ಭಾಗವಹಿಸಿದ್ದರು.

1961ರಲ್ಲಿ ಮೈಸೂರಿನ ಎಚ್.ಎಂ.ಆರ್. ರಾವ್ ಅವರನ್ನು ಮದುವೆಯಾದರು. ಒಂದು ವರ್ಷ ಹೈದರಾಬಾದ್‌ನಲ್ಲಿದ್ದು 1962ರಲ್ಲಿ ಇಂಡಿಯನ್ ಏರ್‌ಲೈನ್ಸ್‌ನಲ್ಲಿ ಪತಿಯ ನೌಕರಿಯ ಕಾರಣದಿಂದ ದೆಹಲಿಗೆ ಬಂದರು.

ದೆಹಲಿಯ ಎಲ್ಲಾ ಕನ್ನಡ ಸಂಘ ಸಂಸ್ಥೆಯಲ್ಲಿ ಭಾಗವಹಿಸುತ್ತಿದ್ದರು. ಈ ಸಮಯದಲ್ಲಿ ಎಂ.ವಿ. ನಾರಾಯಣ ರಾವ್ ಅವರು "ಕನ್ನಡ ಭಾರತೀ"ಯನ್ನು ಶುರು ಮಾಡಿದರು. ವಿದ್ಯಾವಂತ ದೆಹಲಿ ಕನ್ನಡಿಗರು ದೆಹಲಿ ಕನ್ನಡಿಗರಿಗಾಗಿ ನಾಟಕಗಳನ್ನು ಮಾಡುತ್ತಿದ್ದರು. ಶ್ರೀಮತಿ ಮತ್ತು ಶ್ರೀ ಎಂ.ವಿ. ನಾರಾಯಣ ರಾವ್, ಶ್ರೀಮತಿ ಮತ್ತು ಶ್ರೀ ಜ್ಯೋತ್ಸ್ನಾ ರಾವ್, ಶ್ರೀ ವಿ. ಸುಬ್ಬಯ್ಯ, ಶ್ರೀಮತಿ ಮತ್ತು ಶ್ರೀ ಮುರುಗೋಡ, ಆರ್.ಜಿ. ಪದಕಿ, ಶ್ರೀಮತಿ ಮತ್ತು ಶ್ರೀ ಕೌಜಲಗಿ, ಶ್ರೀ ರಾಮದಾಸ್, ಶ್ರೀ ಬಾಲುರಾವ್, ಶ್ರೀಮತಿ ಮತ್ತು ಶ್ರೀ ಪ್ರಭಾಕರ ರಾವ್ ಹೀಗೆ ಅನೇಕರು ಕನ್ನಡ ಭಾರತಿಯಲ್ಲಿ ತೊಡಗಿದ್ದರು.

ಸುಮಾರು 25–30 ನಾಟಕಗಳಲ್ಲಿ ಜ್ಯೋತ್ಸ್ನಾ ರಾವ್ ಅವರು ಪಾತ್ರ ವಹಿಸಿದ್ದರು. ಕರ್ನಾಟಕ ಮತ್ತು ಮುಂಬೈನಲ್ಲಿ ಅನೇಕ ಪ್ರದರ್ಶನಗಳನ್ನು ಕೊಟ್ಟಿದ್ದರು. ಇವರಿಗೆ ಮೂರು ಜನ ಹೆಣ್ಣು ಮಕ್ಕಳು. ಇಬ್ಬರು ಆಸ್ಟ್ರೇಲಿಯಾದಲ್ಲಿ ಹಾಗೂ ಒಬ್ಬರು ಅಮೆರಿಕಾದಲ್ಲಿದ್ದಾರೆ. ಇವರು ಮಕ್ಕಳ ಜೊತೆಗೆ ಸಿನಿಮಾದಲ್ಲಿಯೂ ಕೆಲಸ ಮಾಡಿದ್ದಾರೆ. 1994ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ದೊರೆಯಿತು. ಅವರ ಪ್ರತಿಯೊಂದು ಕೆಲಸಕ್ಕೂ ಶ್ರೀ ರಾವ್ ಅವರು ಪ್ರೋತ್ಸಾಹ ನೀಡುತ್ತಿದ್ದರು.

ಇವರು ಬಹಳ ಕ್ರಿಯಾಶೀಲ ಮಹಿಳೆಯಾಗಿದ್ದರು. ಕರೋಲ್‌ಬಾಗ್‌ನ ನಿವಾಸಿಯಾಗಿದ್ದ ಇವರು ಬೆಂಗಳೂರಿನಿಂದ ಬಂದ ಗಣ್ಯ ಕನ್ನಡಿಗರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಅತಿಥಿ ಸತ್ಕಾರ ನೀಡುತ್ತಿದ್ದರು. ಶ್ರೀ ರಾವ್ ಅವರು ನಿವೃತ್ತಿಹೊಂದಿದ ನಂತರ 2002ರಲ್ಲಿ ಮೈಸೂರಿಗೆ ಹೋಗಿ ನೆಲೆಸಿದರು. ಮೈಸೂರಿನಲ್ಲಿ ಚಾರಿಟಿ ಟ್ರಸ್ಟ್ ಅನ್ನು ಪ್ರಾರಂಭಿಸಿದರು. ಅವರು ಶಾಲೆಗಳಿಗೆ, ಗುರುಕುಲಗಳಿಗೆ, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಕಳೆದ ಮೂರು ವರ್ಷಗಳಿಂದ ಅವರ ಆರೋಗ್ಯ ಸರಿ ಇರಲಿಲ್ಲ. ಅವರ ಗಂಡ ಶ್ರೀ ರಾವ್ ಅವರು ಕೊನೆಯ ಸಮಯದಲ್ಲಿ ಬಹಳ ಸೇವೆ ಮಾಡಿದರು. ದೆಹಲಿ ಕನ್ನಡಿಗರು ಜ್ಯೋತ್ಸ್ನಾ ರಾವ್ ಅವರನ್ನು ಮರೆಯುವಂತಿಲ್ಲ.

ಸುಮಿತಾನಂದ್, ನವದೆಹಲಿ

---

## ಜ್ಯೋತ್ಸ್ನಾ

ಬಾನಂಗಳದಲಿ ಸಹಸ್ರ ತಾರೆಗಳು  
ತಾರೆಗಳ ನಡುವೆ ಪ್ರಕಾಶಮಾನವಾಗಿ  
ಮಿಂಚಿದ ಚೆಲುವೆ

ರೂಪ ಸೌಂದರ್ಯಗಳ ಮಹಾಪೂರ  
ಜೊತೆ ಜೊತೆಯಲಿ ನೃತ್ಯ ನಾಟಕಗಳಲಿ  
ಮೈವೆತ್ತ ಮೋಹಕ ಸುಂದರಿ

ಕನ್ನಡಿತಿಯಾಗಿ ಹುಟ್ಟಿ ಬೆಳೆದು  
ದೆಹಲಿಯ ಕನ್ನಡ ಭಾರತಿಯ  
ರಂಗದಲಿ ಸುವಾಸನೆ ಹರಿಸಿ  
ಮೆರೆದ ಮೈಸೂರು ಮಲ್ಲಿಗೆ

ಮನೆಯ ಲಕ್ಷ್ಮಿಯಾಗಿ  
ಪ್ರೀತಿಯ ಮಡದಿಯಾಗಿ  
ಮಕ್ಕಳ ತಾಯಾಗಿ ಸಂಭ್ರಮಿಸಿದ  
ಮೇರು ನಿಲಯೇ

ಸುರ ಸಂಪನ್ನೆ ಮಹಿಳಾಮಣಿ  
ಜ್ಯೋತ್ಸ್ನಾ ಅವರಿಗೆ ನಮೋನ್ನಮಃ  
ನಿಮ್ಮ ಚೇತನ ಚಿರಾಯುವಾಗಲಿ  
ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತ......................

ಶೈಲಜಾ ಗುಂಡೂರಾವ್, ಅಮೆರಿಕ

## ಯೋಧಗೀತೆ

ಜನ್ಮಭೂಮಿಗೆ ವಚನ ಕೊಟ್ಟು  
ಹೋರಾಡುವ ಪಣವ ತೊಟ್ಟು  
ದೇಶಕಾಗಿ ಪ್ರಾಣಬಿಟ್ಟ ವೀರರೇ  
ನಿಮ್ಮ ಜೀವನವನ್ನೆ ಬಲಿಕೊಟ್ಟ ಶೂರರೇ  
ವಂದನೆ ವಂದನೆ ವಂದನೆ–ಭಾರತಾಂಬೆ ಯೋಧರಿಗೆ ವಂದನೆ

ಹಗಲು ಇರುಳು ಎನ್ನದೆ  
ಗುಡುಗು ಸಿಡಿಲಿಗಂಜದೆ  
ಭಯ ಭೀತಿ ಅರಿಯದ ಯುವಕರೇ  
ಧೈರ್ಯದಿಂದ ಹೋರಾಡುವ ಧೀರರೇ  
ವಂದನೆ ವಂದನೆ ವಂದನೆ–ಭಾರತಾಂಬೆ ಕುವರರಿಗೆ ವಂದನೆ

ಮಡದಿ ಮಕ್ಕಳ ಮನೆಯಲಿಟ್ಟು  
ತಂದೆ ತಾಯಿ ಮನದಲಿಟ್ಟು  
ಬಂಧು ಬಳಗ ಮರೆತು ಬಿಟ್ಟು  
ನಮ್ಮ ನಾಡಿಗಾಗಿ ದುಡಿಯುತಿರುವ ಯೋಧರೇ  
ವಂದನೆ ವಂದನೆ ವಂದನೆ–ಭಾರತಾಂಬೆ ಶೂರರಿಗೆ ವಂದನೆ

ಬಿಸಿಲು ಮಳೆಗೆ ಜಗ್ಗದ  
ಚಳಿಗಾಳಿಗೆ ಕುಗ್ಗದ  
ಬೆದರಿಕೆಗೆ ಬಗ್ಗದ ಧೀರರೇ  
ಸ್ಥೈರ್ಯದಿಂದ ಮುನ್ನುಗ್ಗುವ ವೀರರೇ  
ನಮ್ಮ ದೇಶವನ್ನು ಕಾಯುತಿರುವ ತರುಣರೇ  
ವಂದನೆ ವಂದನೆ ವಂದನೆ–ಭಾರತಾಂಬೆ ಯೋಧರಿಗೆ ವಂದನೆ

**ಟಿ. ವಿಜಯ್‌ಕುಮಾರ್, ಮೈಸೂರು**  
**0–9986035559**

# ಮನರಂಜಿಸಿದ 'ಸಾಂಸ್ಕೃತಿಕ ಸಮಾಗಮ'





ರಾಜಧಾನಿಯಲ್ಲಿ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿರುವ ಜನಕಪುರಿ ಕನ್ನಡ ಕೂಟವು ಇತರ ಸಂಘ ಸಂಸ್ಥೆಗಳಿಗೆ ಮಾದರಿಯಾಗಿದೆ ಎಂದು ಹಿರಿಯ ರಂಗಕರ್ಮಿ ಎಚ್.ಎಸ್. ಕುಲಕರ್ಣಿ ಶ್ಲಾಘಿಸಿದರು. ಅವರು 19.08.2012ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಜನಕಪುರಿ ಕನ್ನಡ ಕೂಟವು 'ದೆಹಲಿ ಮಿತ್ರ'ದ ಸಹಭಾಗಿತ್ವದಲ್ಲಿ ಹಮ್ಮಿಕೊಂಡ 'ಸಾಂಸ್ಕೃತಿಕ ಸಮಾಗಮ' ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಈ ಉತ್ಸಾಹ ಹೀಗೆ ಮುಂದುವರಿಯಬೇಕು ಎಂದವರು ಆಶಿಸಿದರು. ಈ ಕಾರ್ಯಕ್ರಮದ ಯಶಸ್ಸಿಗೆ ಪೂರ್ಣ ಸಹಕಾರ ನೀಡಿದ 'ದೆಹಲಿ ಮಿತ್ರ'ದ ಕಾರ್ಯಯೋಜನೆಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಎಸ್.ಎಲ್. ಭಂಡಾರ್‌ಕರ್ ಅವರು ಕಲಾವಿದರ ಆಸಕ್ತಿಯಿಂದ ಈ ಕಾರ್ಯಕ್ರಮ ಸಾಧ್ಯವಾಗಿದೆ ಎಂದರು. 'ದೆಹಲಿ ಮಿತ್ರ'ದ ಸಂಚಾಲಕ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ 'ಸಾಂಸ್ಕೃತಿಕ ವಲಯ'ದಲ್ಲಿ ಎಲ್ಲರೂ ಒಂದಾಗಿರಬೇಕು, ಈ ನಿಟ್ಟಿನಲ್ಲಿ ವಿವಿಧ ಸಂಘಗಳು ಒಟ್ಟಾಗಿ ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು 'ಸಾಂಸ್ಕೃತಿಕ ಸಮಾಗಮ'ದ ಆಶಯ ಎಂದರು. ಜನಕಪುರಿ ಮಹಿಳಾ ಮಂಡಳಿ ಅಧ್ಯಕ್ಷೆ ಶ್ರೀಮತಿ ಸವಿತಾ ಇನಾಂದಾರ್ ಉಪಸ್ಥಿತರಿದ್ದರು.

ಮಹಿಳಾ ಮಂಡಳಿಯ ಸದಸ್ಯೆ ಪ್ರೇರಣಾ ವೆಂಕಟೇಶ್ ಅವರು ಶಾರದಾ ಸ್ತುತಿಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಮಾರಂಭದಲ್ಲಿ ಈ ಬಾರಿ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಯುವ ಪ್ರಶಸ್ತಿ ಪಡೆದ ಖ್ಯಾತ ಗಾಯಕಿ ಶ್ರೀಮತಿ ವೀಣಾ ಮರಡೂರ ಅವರನ್ನು ಸನ್ಮಾನಿಸಲಾಯಿತು.

ಪುಟ್ಟ ಬಾಲಕಿ ವಾಸುಕಿ ದೇಶಪಾಂಡೆಯ ಗಣೇಶ ಸ್ತುತಿಯೊಂದಿಗೆ ಆರಂಭಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪುಟಾಣಿ ನಿತ್ಯಶ್ರೀ ಅಶೋಕ್ ಮತ್ತು ಭಕ್ತಿ ಅವರ ಭರತನಾಟ್ಯ, ಮನೀಷ್ ಪೂಜಾರಿಯ ಪಾಶ್ಚಾತ್ಯ ನೃತ್ಯ, ವೈಷ್ಣವಿ ಬಸವರಾಜ್ ಮತ್ತು ಮನುಶ್ರೀ ಅವರ ಜಾನಪದ ನೃತ್ಯ, ಮಾನಸಿ, ನಿಸರ್ಗ ಹಾಗೂ ಮಾನ್ಯ ಅವರ ನೃತ್ಯ, ಡಾ. ಅಶೋಕ್ ಈಟಿಯವರ ಚಲನಚಿತ್ರ ಗೀತೆ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು.

ಕಾರ್ಯಕ್ರಮಕ್ಕೆ ವಿಶಿಷ್ಟ ಮೆರುಗನ್ನು ತಂದವರು ಜನಕಪುರಿ ಮಹಿಳಾ ಮಂಡಳಿಯ ಉತ್ಸಾಹಿ ಮಹಿಳೆಯರು. ಡಾ. ದೊಡ್ಡ ರಂಗೇಗೌಡ ಅವರ "ಮುಂಗಾರು" ಸಮೂಹಗಾನ ಹಾಗೂ "ಚೆಲ್ಲಿದರು ಮಲ್ಲಿಗೆಯಾ" ಜಾನಪದ ನೃತ್ಯ ವಿಶೇಷ ಮೆಚ್ಚುಗೆ ಗಳಿಸಿತು. ಈ ಸಾಂಸ್ಕೃತಿಕ ಕಾರ್ಯಕ್ರಮಗಳ ಹೊಣೆ ಹೊತ್ತಿದ್ದ ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಸವಿತಾ ಇನಾಂದಾರ್ ಅವರು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದರು.

ನಂತರ ಗಾಯಕಿ ವೀಣಾ ಮರಡೂರವರು ಭಕ್ತಿಗೀತೆ, ನಾಡಗೀತೆ ಮತ್ತು ವಚನಗಳನ್ನು ಸುಶ್ರಾವ್ಯವಾಗಿ ಹಾಡಿದರು. ಭಾನುವಾರದ ಈ ಸಂಜೆಯ ಕಾರ್ಯಕ್ರಮ ದೆಹಲಿ ಕನ್ನಡಿಗರ ಮನರಂಜಿಸುವಲ್ಲಿ ಯಶಸ್ವಿಯಾಯಿತು.

ವೈ. ಅವನೀಂದ್ರನಾಥ್ ರಾವ್ ವಂದಿಸಿದರು, ಜನಕಪುರಿ ಕನ್ನಡ ಕೂಟದ ಕಾರ್ಯದರ್ಶಿ ಎನ್. ಆರ್. ಶ್ರೀನಾಥ್ ಕಾರ್ಯಕ್ರಮ ನಿರೂಪಿಸಿದರು.

**ವೈ. ಅವನೀಂದ್ರನಾಥ್ ರಾವ್**

# ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ವಾರ್ಷಿಕ ಮಹಾಸಭೆ

ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್‌ನ ವಾರ್ಷಿಕ ಮಹಾಸಭೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಇದೇ ಆಗಸ್ಟ್ 12ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆಯಿತು.

ವಾರ್ಷಿಕ ಮಹಾ ಸಭೆಯಲ್ಲಿ ಲೆಕ್ಕ ಪತ್ರಗಳನ್ನು ಮಂಡಿಸಿ ಅನುಮೋದಿಸಲಾಯಿತು. ಮುಂದಿನ 2012–13ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆರಿಸಲಾಯಿತು. ಸಮಿತಿಯ ಅಧ್ಯಕ್ಷರನ್ನಾಗಿ ಎನ್. ಎಂ. ಶೆಟ್ಟಿ ಅವರನ್ನು ಪುನರಾಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ : ಸುರೇಶ್ ಶೆಟ್ಟಿ ಮತ್ತು ಹರ್ದೀಶ್ ಕುಮಾರ್, ಕಾರ್ಯದರ್ಶಿ : ಪ್ರೇಮನಾಥ್ ಖಜಾಂಚಿ : ಪಿ.ಎಸ್. ಶೆಟ್ಟಿ ಹಾಗೂ ಜತೆ ಕಾರ್ಯದರ್ಶಿಗಳಾಗಿ : ಟಿ. ಶಿವಪ್ರಸಾದ್ ಶೆಟ್ಟಿ ಮತ್ತು ಕೆ.ಎಸ್.ಜಿ. ಶೆಟ್ಟಿ ಅವರು ಆಯ್ಕೆಯಾದರು.

ಜತೆಗೆ 17 ಕಾರ್ಯಕಾರಿ ಸದಸ್ಯರನ್ನೂ ಆರಿಸಲಾಯಿತು. ವಾರ್ಷಿಕ ಮಹಾಸಭೆಯ ನಂತರ ಸುಂದರವಾದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಆರಂಭದಲ್ಲಿ ಕು. ವಂದನಾ ರೈ ಅವರಿಂದ ಬಾಲಿವುಡ್ ಹಾಡಿಗೆ ನೃತ್ಯ ಕಾರ್ಯಕ್ರಮ ನಡೆಯಿತು. ನಂತರ ಬೆಂಗಳೂರಿನ ಶುಭ ಧನಂಜಯ ಮತ್ತು ನಾಟ್ಯಾಂತರ ಕಲಾವಿದರಿಂದ ನೃತ್ಯ ಪ್ರದರ್ಶನ ನಡೆಯಿತು. ನಂತರ ವಂದನಾ ರೈ ಮತ್ತು ಅಭಿಷೇಕ್ ರೈ ಅವರು ದಿಲ್ ಡೂಬಾ ನೃತ್ಯ ಪ್ರದರ್ಶಿಸಿದರು.

ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ತಮ್ಮ ಸಮಾಜ ಬಾಂಧವರನ್ನು ದೆಹಲಿ ಮತ್ತು ರಾಷ್ಟ್ರೀಯ ರಾಜಧಾನಿ ಪ್ರದೇಶದಲ್ಲಿ ಗುರುತಿಸಿ ಒಗ್ಗೂಡಿಸುವ ಕಾರ್ಯವನ್ನು ಯಶಸ್ವಿಯಾಗಿ ಕೈಗೊಂಡಿದೆ. ಅದರ ಪರಿಣಾಮವಾಗಿ ಈ ಸಮಾರಂಭದಲ್ಲಿ ಅತಿ ಗಣನೀಯ ಸಂಖ್ಯೆಯಲ್ಲಿ ಸಮಾಜದ ಹಳೆಯ ಸದಸ್ಯರ ಜತೆಗೆ ಹೊಸ ಯುವಕ ಯುವತಿಯರೂ ಪಾಲ್ಗೊಂಡಿದ್ದರು.

ಕಾರ್ಯಕಾರಿ ಸಮಿತಿ ಸದಸ್ಯ ದೀಪಕ್ ಶೆಟ್ಟಿ ಅವರ ಶ್ರಮದಿಂದಾಗಿ ದೆಹಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಶನ್ ತನ್ನದೇ ಸ್ವಂತ ವೆಬ್ ಸೈಟ್ ಒಂದನ್ನು ಈ ಸಂದರ್ಭದಲ್ಲಿ ಉದ್ಘಾಟಿಸಲಾಯಿತು. (www.delhibunts.com) ಈ ವೆಬ್ ಸೈಟ್ ಮೂಲಕ ಬಂಟ್ಸ್ ಸಮಾಜದ ದೆಹಲಿಯ ಮತ್ತು ವಿಶ್ವದೆಲ್ಲೆಡೆಯ ಬಂಧು ಬಾಂಧವರು ಮಾಹಿತಿ ಪಡೆಯಬಹುದು ಎಂದು ತಿಳಿಸಲಾಯಿತು.

ಬಂಟ್ಸ್ ಸಮಾಜದ ಪಾರಂಪರಿಕ ಭೋಜನದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಕೆ.ಎಸ್.ಜಿ. ಶೆಟ್ಟಿ**

# ಮೂರ್ತಿ ದಂಪತಿಗಳ ದಶಕದ ದೆಹಲಿ .ವಾಸ





ಡಾ. ಬಿ.ಟಿ. ಚಿದಾನಂದಮೂರ್ತಿ ಹಾಗೂ ಡಾ. ಹೇಮಲತಾ ಮೂರ್ತಿಯವರ ಜೊತೆಗೆ ನನ್ನ ಪರಿಚಯವಾಗಿದ್ದು 2004ರಿಂದ ಅಂತ ಹೇಳಬಹುದು. ಇವರು ಜನಕಪುರಿಯಲ್ಲಿ ಮನೆ ಮಾಡಿದ್ದರಿಂದ ಹಾಗೂ ನಾನು ಜನಕಪುರಿಯ ಕನ್ನಡ ಕೂಟದ ಸದಸ್ಯನಾಗಿದ್ದರಿಂದ ಅವರೊಂದಿಗೆ ಹೆಚ್ಚಿನ ಬಾಂಧವ್ಯ ಬೆಳೆಯಿತು.

ಡಾ. ಚಿದಾನಂದ ಮೂರ್ತಿಯವರು, ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ, ಯೋಗ ಮತ್ತು ನಿಸರ್ಗ ಚಿಕಿತ್ಸಾ ಪರಿಷತ್ತಿನ ನಿರ್ದೇಶಕರಾಗಿ ಕೇಂದ್ರೀಯ ಲೋಕಸೇವಾ ಆಯೋಗದ ಮುಖಾಂತರ ಆಯ್ಕೆಯಾಗಿ ದೆಹಲಿಗೆ ಬಂದಿದ್ದರು. ಶ್ರೀಯುತರು ನಿರ್ದೇಶಕರಾಗಿದ್ದರೆ ಶ್ರೀಮತಿ ಡಾ. ಹೇಮಲತಾ ಮೂರ್ತಿಯವರು ಯೋಗ ವಿಜ್ಞಾನ, ನಿಸರ್ಗ ಚಿಕಿತ್ಸೆಯಲ್ಲಿ ಡಾಕ್ಟರೇಟ್ ಪಡೆದಿದ್ದರು. ಇವರು ಹಸ್ತ ಮುದ್ರಾ ಭವಿಷ್ಯ, ಗೃಹ ವಾಸ್ತುಶಿಲ್ಪ ಹಾಗೂ ಇನ್ನಿತರ ಅನೇಕ ವಿಷಯಗಳಲ್ಲಿ ನಿಪುಣತೆ ಸಾಧಿಸಿದ್ದರು.

ದಂಪತಿಗಳಿಗೆ ಕನ್ನಡ ಭಾಷೆ, ಸಂಸ್ಕೃತಿ ಕಲೆಯ ಬಗ್ಗೆ ಎಷ್ಟೊಂದು ಕಾಳಜಿ ಇತ್ತು ಅಂದರೆ ದೆಹಲಿಗೆ ಬಂದಾಕ್ಷಣದಲ್ಲೇ ಕನ್ನಡದವರನ್ನು ಶೋಧಿಸಿ ದೆಹಲಿಯ ಎಲ್ಲ ಕನ್ನಡ ಸಂಘ ಸಂಸ್ಥೆಗಳಿಗೆ ಸದಸ್ಯರಾದರು. ಚಿದಾನಂದ ಮೂರ್ತಿಯವರು ತಾವು ನಿರ್ದೇಶಕರಾಗಿದ್ದಾಗ, ಜನಕಪುರಿ ಕನ್ನಡ ಕೂಟದ ಆರೋಗ್ಯ ಮೇಳಕ್ಕೆ ಸಾಕಷ್ಟು ಕೊಡುಗೆ ನೀಡಿದರೆ, ಶ್ರೀಮತಿ ಹೇಮಲತಾ ಮೂರ್ತಿಯವರು ಆರೋಗ್ಯ ಮೇಳದ ಮುಂದಾಳತ್ವ ವಹಿಸಿ ಆರೋಗ್ಯ ಮೇಳವನ್ನು ಅತೀವ ಯಶಸ್ವಿಯಿಂದ ನಡೆಸಿಕೊಟ್ಟರು.

ಇವರಿಬ್ಬರ ಕನ್ನಡ ಪ್ರೇಮ ಕಂಡ ಜನಕಪುರಿ ಕನ್ನಡ ಕೂಟದವರು ಡಾ. ಚಿದಾನಂದ ಮೂರ್ತಿಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರೆ ಡಾ. ಹೇಮಲತಾ ಅವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಹಾಗೆಯೇ ಮೂರ್ತಿಯವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದರೆ, ಹೇಮಲತಾ ಮೂರ್ತಿಯವರು ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿಯಾಗಿ ಹಾಗೂ ಸಂಘದ ಸಾಹಿತ್ಯ ಉಪಸಮಿತಿಯ ಸಮಿತಿಯ ಸಂಚಾಲಕರಾಗಿ ಸಹ ಕೆಲಸ ನಿರ್ವಹಿಸಿದ್ದಾರೆ. ಇವರಿಬ್ಬರೂ ದೆಹಲಿ ಒಕ್ಕಲಿಗ ಗೌಡ ಸಂಘದಲ್ಲೂ ಸೇವೆ ಸಲ್ಲಿಸಿದರು. ಡಾ. ಚಿದಾನಂದ ಮೂರ್ತಿಯವರು ಗೌಡ ಸಮಾಜದ ಅಧ್ಯಕ್ಷರಾಗಿದ್ದಾಗ ದೆಹಲಿಯಲ್ಲಿ ಕೆಂಪೇಗೌಡ ಉತ್ಸವ ನಡೆಸಿದ್ದನ್ನು ಎಂದೆಂದಿಗೂ ಮರೆಯಲಾಗದು.

ಅವರಿಬ್ಬರೂ ದೆಹಲಿಯ ನಾಟಕೋತ್ಸವಗಳಲ್ಲಿ ಜನಕಪುರಿಯ ಕನ್ನಡ ಕೂಟದ ಸದಸ್ಯರಾಗಿ ತಮ್ಮ ನಟನೆಯ ಕಲೆಯನ್ನು ಸಹ ಜನರಿಗೆ ತೋರಿಸಿಕೊಟ್ಟಿದ್ದಾರೆ.

ಡಾ. ಬಿ.ಟಿ. ಚಿದಾನಂದಮೂರ್ತಿಯವರಿಗೆ ದೇಶದ ಅನೇಕ ಉನ್ನತ ಪುರಸ್ಕಾರಗಳು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೂ ಸಹ ಭಾಜನರಾಗಿದ್ದಾರೆ. ಇವರು ನಿರ್ದೇಶಕರಾಗಿದ್ದಾಗ, ಸಾಕಷ್ಟು ಕರ್ನಾಟಕದ ಕಾಲೇಜುಗಳಿಗೆ, ಆಸ್ಪತ್ರೆಗಳಿಗೆ ಸರಕಾರದ ಹಣ ಸಹಾಯ ನೀಡಿದ್ದಾರೆ. ಇವರಿಬ್ಬರೂ ಭಾರತದ ಅನೇಕ ವಿಶ್ವವಿದ್ಯಾಲಯಗಳ ಪಠ್ಯಕ್ರಮ ತಿದ್ದುಪಡಿ ಸಮಿತಿಯ ಸದಸ್ಯರಾಗಿದ್ದು ಅನೇಕ ನೇರ ನೇಮಕಾತಿ ಮಂಡಳಿಯ ಸದಸ್ಯರು ಸಹ ಹೌದು.

ಇತ್ತೀಚೆಗೆ ಡಾ. ಚಿದಾನಂದ ಮೂರ್ತಿಯವರು ನಿರ್ದೇಶಕ ಹುದ್ದೆಯಿಂದ ಸೇವಾ ನಿವೃತ್ತಿ ಹೊಂದಿದ್ದರಿಂದ, ಈ ದಂಪತಿಗಳಿಬ್ಬರೂ ತಾಯ್ನಾಡು ಬೆಂಗಳೂರಿಗೆ ತೆರಳಿದ್ದಾರೆ, ಹಾಗಾಗಿ ದೆಹಲಿಯ ನಮ್ಮೆಲ್ಲ ಕನ್ನಡ ಸಂಘ-ಸಂಸ್ಥೆಗಳು ಈ ಉತ್ಸಾಹಿ ದಂಪತಿಗಳಿಬ್ಬರ ಸೇವೆಯನ್ನು ಇನ್ನು ಮುಂದೆ ಪಡೆಯಲು ಕೊರತೆಯಾಗಬಹುದು ಎಂಬುದರಲ್ಲಿ ಸಂಶಯವಿಲ್ಲ.

ತಾಯ್ನಾಡಿನಲ್ಲಿ ಇವರಿಬ್ಬರಿಗೂ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಲಭಿಸಲಿ, ಕನ್ನಡದ ಸೇವೆ ಮಾಡಲು ಆ ದೇವರು ಶಕ್ತಿ ನೀಡಲಿ ಎಂದು ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ದೆಹಲಿಯ ಎಲ್ಲ ಕನ್ನಡಿಗರ ಪರವಾಗಿ ಹಾರೈಸುತ್ತೇನೆ.

**ಎಸ್.ಎಲ್. ಭಂಡಾರ್‌ಕರ್**




ಹೆಣ್ಣು ಮಗುವನ್ನು ರಕ್ಷಿಸುವ ಸಲುವಾಗಿ ಜನರಲ್ಲಿ ಅರಿವು ಮೂಡಿಸಲು 'Save Baby Girl Child to save the Country' ಎಂಬ ಘೋಷಣೆಯೊಂದಿಗೆ ಕರ್ನಾಟಕದ ಬೆಳಗಾಂನಿಂದ ದೆಹಲಿಗೆ ಸುಮಾರು 2000 ಕಿಲೊಮೀಟರ್ ಸ್ಕೇಟಿಂಗ್‌ನಲ್ಲಿ ಬಂದ ತಂಡವನ್ನು ಸೆಪ್ಟೆಂಬರ್ 1 ರಂದು ದೆಹಲಿ ಕರ್ನಾಟಕ ಸಂಘಕ್ಕೆ ಬರಮಾಡಿಕೊಂಡು ಗೌರವಿಸಲಾಯಿತು. ಇವರಲ್ಲಿ ಅಭಿಷೇಕ್ ನವಾಲೆ ಸ್ಕೇಟಿಂಗ್‌ನಲ್ಲಿ 3 ಬಾರಿ ಸ್ವರ್ಣ ಪದಕಗಳನ್ನು ಪಡೆದಿದ್ದಾನೆ. ಕರ್ನಾಟಕ ಸರ್ಕಾರ ಕೂಡಾ ಈ ಎಳೆಯ ಪ್ರತಿಭೆಯನ್ನು ಗೌರವಿಸಿದೆ. ಈತನಿಗೆ ಇನ್ನೂ ಹೆಚ್ಚಿನ ಯಶಸ್ಸು ಸಿಗಲಿ ಎಂದು ಶುಭ ಹಾರೈಸುತ್ತೇವೆ.

# ಅಮೇರಿಕಾದ ಹಲವಾರು ನಗರಗಳಲ್ಲಿ ಯಕ್ಷ ಮಂಜೂಷ ತಂಡದಿಂದ ತೆಂಕುತಿಟ್ಟು ಯಕ್ಷಗಾನ ಪ್ರದರ್ಶನ




2005ರಿಂದ ಹಿಂದಿ ಮತ್ತು ಕನ್ನಡ ಯಕ್ಷಗಾನಗಳ ಮೂಲಕ ದೇಶದ 19 ರಾಜ್ಯಗಳಲ್ಲಿ, 300ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ನಡೆಸಿದ ಯಕ್ಷ ಮಂಜೂಷ ತಂಡ, ಈ ವರ್ಷ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯಕ್ಷೋತ್ಸವವನ್ನು ಆಯೋಜಿಸಿದೆ. ಆಗಸ್ಟ್ 30ರಿಂದ ಅಕ್ಟೋಬರ್ 29ರ ತನಕ, ಅಂದರೆ ಎರಡು ತಿಂಗಳ ಕಾಲ ಅಮೇರಿಕಾದಲ್ಲೆಲ್ಲಾ ತಿರುಗಾಟ ನಡೆಸುವ ಯಕ್ಷಮಂಜೂಷದ ಮೊದಲ ಪ್ರದರ್ಶನ ಅಟ್ಲಾಂಟಾದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಆಗಸ್ಟ್ 31ರಿಂದ ಸೆಪ್ಟಂಬರ್ 2ರ ತನಕ 'ಅಕ್ಕಾ'ದ ವಿಶ್ವ ಕನ್ನಡ ಸಮ್ಮೇಳನದಲ್ಲಿ ತೆಂಕುತಿಟ್ಟು ಯಕ್ಷಗಾನದ ಪ್ರದರ್ಶನ ನೀಡಿತು. ಶ್ರೀಮತಿ ವಿದ್ಯಾ ಕೋಳ್ಯೂರು ನೇತೃತ್ವದ ಯಕ್ಷ ಮಂಜೂಷ ತಂಡ ತದನಂತರ, ಅಮೇರಿಕಾದಲ್ಲಿ ವಾಸ್ತವ್ಯವಿರುವ ಎರಡು ತಿಂಗಳ ಅವಧಿಯಲ್ಲಿ ಸುಮಾರು 10 ನಗರಗಳಲ್ಲಿ ತೆಂಕುತಿಟ್ಟು ಶೈಲಿಯ ಯಕ್ಷಗಾನ ಪ್ರದರ್ಶನಗಳನ್ನು ನಡೆಸಲಿದೆ. ತೆಂಕುತಿಟ್ಟು ಯಕ್ಷಗಾನದ ಇತಿಹಾಸದಲ್ಲಿ, ಅಮೇರಿಕಾದಲ್ಲಿ ಹಲವಾರು ಕಡೆ ಪ್ರದರ್ಶನ ನೀಡಿದ ಮೊಟ್ಟಮೊದಲ ವೃತ್ತಿಪರ ತಂಡ ಇದಾಗಲಿದೆ.

ಅಟ್ಲಾಂಟಾ, ರ‍್ಯಾಲಿ, ರಿಚ್‌ಮಂಡ್, ನ್ಯೂಜರ್ಸಿ, ನ್ಯೂಯಾರ್ಕ್, ಬಾಸ್ಟನ್, ಕ್ಯಾಲಿಫೋರ್ನಿಯಾಗಳಲ್ಲಿ ಈಗಾಗಲೇ ಕಾರ್ಯಕ್ರಮಗಳು ನಿಗದಿತವಾಗಿದ್ದು, ಇನ್ನೂ ಹಲವಾರು ನಗರಗಳಲ್ಲಿ ತೆಂಕುತಿಟ್ಟು ಯಕ್ಷಗಾನ ಪ್ರದರ್ಶನಗಳು ನಡೆಯಲಿವೆ. ಆಗಸ್ಟ್ 31ರಿಂದ ಅಕ್ಟೋಬರ್ 29ರ ತನಕ ಅಮೇರಿಕಾದಲ್ಲಿರುವ ಯಕ್ಷ ಮಂಜೂಷ ತೆಂಕುತಿಟ್ಟು ಯಕ್ಷಗಾನದ ಪ್ರಚಾರ ಪ್ರಸಾರದ ಪ್ರತಿಯೊಂದು ಅವಕಾಶಗಳನ್ನು ಸಹ ಬಳಸಿಕೊಳ್ಳಲಿದೆ. ಅಂತರರಾಷ್ಟ್ರೀಯ ದೇಶಗಳೊಡನೆ ಸಾಂಸ್ಕೃತಿಕ ಸಂಬಂಧವೇರ್ಪಡಿಸುವುದಕ್ಕಾಗಿಯೇ ಭಾರತದ ವಿದೇಶಾಂಗ ವ್ಯವಹಾರ ಖಾತೆಯ, ಸಾಂಸ್ಕೃತಿಕ ಸಂಬಂಧಗಳಿಗಾಗಿರುವ ಭಾರತೀಯ ಮಂಡಳಿ (Indian Council for Cultural Relations-ICCR) ಯಕ್ಷಮಂಜೂಷದ 10ಮಂದಿ ಕಲಾವಿದರನ್ನು ಮಂಗಳೂರಿನಿಂದ ಕಳುಹಿಸಿಕೊಡುವ ಹಾಗೂ ಕರೆತರುವ ಪ್ರಯಾಣ ವೆಚ್ಚವನ್ನು ಪ್ರಾಯೋಜಿಸಿ ಈ ಅಭಿಯಾನದ ಬೃಹದ್ ಹೊರೆಯನ್ನು ಹೊತ್ತುಕೊಂಡಿದೆ. ಯಕ್ಷಗಾನದ ಸಾಗರೋಲ್ಲಂಘನಕ್ಕಾಗಿ ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣನವರು ಆಮಂತ್ರಣ ಇತ್ತು ಮಾರ್ಗದರ್ಶನ ಮಾಡಿದ್ದಾರೆ.

ಶ್ರೀಮತಿ ವಿದ್ಯಾ ಕೋಳ್ಯೂರವರ ನೇತೃತ್ವದಲ್ಲಿ ಅಮೇರಿಕಾ ಪ್ರವಾಸ ಕೈಗೊಳ್ಳುತ್ತಿರುವ ಈ ತಂಡದಲ್ಲಿ ಸರವು ಕೃಷ್ಣ ಭಟ್ ನಿರ್ವಹಣೆಯನ್ನು ನೋಡಿಕೊಳ್ಳುತ್ತಾರೆ. ಭಾಗವತರಾಗಿ ತೆಂಕುತಿಟ್ಟಿನ ಜನಪ್ರಿಯ ಪ್ರಾತಿನಿಧಿಕ ಭಾಗವತ ಶ್ರೀ ಪುತ್ತಿಗೆ ರಘುರಾಮ ಹೊಳ್ಳರು, ಮದ್ದಳೆ ವಾದಕರಾಗಿ ಪಳಗಿದ ಕೈಯೆಂದೇ ಜನಪ್ರಿಯರಾಗಿರುವ ಶ್ರೀ ಪದ್ಯಾಣ ಜಯರಾಮ ಭಟ್, ಚೆ–ಂಡೆ ವಾದಕರಾಗಿ ಉದಯೋನ್ಮುಖ ಕಲಾವಿದ ಪದ್ಯಾಣ ಚೈತನ್ಯ ಕೃಷ್ಣ ಭಾಗವಹಿಸಲಿದ್ದಾರೆ.

ಮುಮ್ಮೇಳದಲ್ಲಿ ಸುಪ್ರಸಿದ್ಧ ಪುಂಡುವೇಷಧಾರಿ ಶ್ರೀ ಚಂದ್ರಶೇಖರ ಧರ್ಮಸ್ಥಳ, ಹಾಸ್ಯಗಾರರಾಗಿ ಶ್ರೀ ಧರ್ಮಸ್ಥಳ ಮೇಳದ ಹಾಸ್ಯಗಾರ ಶ್ರೀ ಮಹೇಶ ಮಣಿಯಾಣಿ, ಬಣ್ಣದ ವೇಷಧಾರಿಯಾಗಿ ತೆಂಕುತಿಟ್ಟಿನ ಇನ್ನೊಬ್ಬ ಸುಪ್ರಸಿದ್ಧ ಕಲಾವಿದ ಶ್ರೀ ಹರಿನಾರಾಯಣ ಭಟ್ ಎಡನೀರು ಹಾಗೂ ಕಟೀಲು ಶ್ರೀ ದುರ್ಗಾಪರಮೇಶ್ವರಿ ಮೇಳದ ಜನಪ್ರಿಯ ಯುವ ಕಲಾವಿದರುಗಳಾದ ಪ್ರಶಾಂತ ಶೆಟ್ಟಿ ನೆಲ್ಯಾಡಿ ಹಾಗೂ ಬೆಳ್ಳಿಪ್ಪಾಡಿ ಮೋಹನ ಈ ತಂಡದಲ್ಲಿ ಭಾಗವಹಿಸುತ್ತಿದ್ದಾರೆ. ಅಕ್ಟೋಬರ್ 31ರಂದು ಮುಂಜಾನೆ ಈ ತಂಡ ಮರಳಿ ತವರೂರಿಗೆ ಬರಲಿದೆ.

ದಕ್ಷಿಣ ಭಾರತದ ಪ್ರತಿಷ್ಠಿತ ಸಾಂಸ್ಕೃತಿಕ ಕಲೆಯಾದ ಯಕ್ಷಗಾನವನ್ನು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪಸರಿಸುತ್ತಿರುವ ಯಕ್ಷ ಮಂಜೂಷ ತಂಡಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು ಹಾಗೂ ಶುಭ ಹಾರೈಕೆಗಳು.

# ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನಿಂದ ಅಡುಗೆ ಸ್ಪರ್ಧೆ



ಸ್ವಾತಂತ್ರ್ಯ ದಿನೋತ್ಸವದ ಹಿನ್ನೆಲೆಯಲ್ಲಿ ತ್ರಿವರ್ಣ ಆಧಾರಿತ ಅಡುಗೆ ಸ್ಪರ್ಧೆಯನ್ನು ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಆಗಸ್ಟ್ 16ರಂದು ಏರ್ಪಡಿಸಿತ್ತು. ತಾಜ್ ಹೋಟೆಲ್‌ನ ಖ್ಯಾತ ಬಾಣಸಿಗ ನೀಲೇಶ್ ಡೇ ಅವರು ತೀರ್ಪುಗಾರರಾಗಿ ಆಗಮಿಸಿದ್ದರು. 13 ಉತ್ಸಾಹಿ ಸದಸ್ಯೆಯರು ತ್ರಿವರ್ಣಮಯ ಬಗೆ ಬಗೆಯ ಖಾದ್ಯಗಳನ್ನು ತಯಾರಿಸಿ ತಂದು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಈ ಸ್ಪರ್ಧೆಯಲ್ಲಿ ಶ್ರೀಮತಿ ಸರೋಜ ಮಾಧವ ಅವರು ಪ್ರಥಮ ಬಹುಮಾನ ಹಾಗೂ ಶ್ರೀಮತಿ ರಂಗಮಣಿ ರಾವ್ ಅವರು ದ್ವಿತೀಯ ಬಹುಮಾನ ಪಡೆದರು. ನೀಲೇಶ್ ಡೇ ಅವರು ವಿಜೇತರಿಗೆ ಬಹುಮಾನ ನೀಡಿ, ಸ್ಪರ್ಧೆಯಲ್ಲಿ ಭಾಗವಹಿಸಿದ ಸದಸ್ಯೆಯರನ್ನು ಅಭಿನಂದಿಸಿದರು.

ಅಭಿನಂದನೆ

# ಪಂಪ ಪ್ರಶಸ್ತಿಗೆ ಬರಗೂರು ಆಯ್ಕೆ



ಹಿರಿಯ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಪ್ರೊ. ಬರಗೂರು ರಾಮಚಂದ್ರಪ್ಪ ಅವರು 2011ನೇ ಸಾಲಿನ ಪ್ರತಿಷ್ಠಿತ ಪಂಪ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಬರಗೂರು ರಾಮಚಂದ್ರಪ್ಪನವರು 1946ರ ಅಕ್ಟೋಬರ್ 18ರಂದು ತುಮಕೂರು ಜಿಲ್ಲೆಯ ಬರಗೂರು ಗ್ರಾಮದಲ್ಲಿ ಜನಿಸಿದರು. ಇವರ ತಾಯಿ ಕೆಂಚಮ್ಮ, ತಂದೆ ರಂಗದಾಸಪ್ಪ. ಪಾಟಿ ಚೀಲ ಹಿಡಿದು ಕೆಂಪು ಬಸ್ಸಿನ ಹಿಂದೆ ಓಡುತ್ತಿದ್ದ ಬರಗೂರು, ತುಮಕೂರು, ಬೆಂಗಳೂರಿನಲ್ಲಿ ಪ್ರಾಧ್ಯಾಪಕರಾಗಿ, ಸಾಹಿತಿಗಳಾಗಿ, ನಾಡಿನಲ್ಲಿ ಹೊಸ ಆಲೋಚನೆ, ಚಿಂತನೆಗಳಿಗೆ ಕಾರಣರಾದವರು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ ಬರಗೂರರು ಸಲ್ಲಿಸಿದ ಸೇವೆ ಗಣನೀಯವಾದದ್ದು. ಸಾಹಿತ್ಯದಷ್ಟೇ ಸಿನೆಮಾವನ್ನು ಗಾಢವಾಗಿ ಪ್ರೀತಿಸುವ ಅವರು ಸಿನೆಮಾದ ಕಮರ್ಷಿಯಲ್ ಸೂತ್ರಗಳಿಗೆ ಜೋತು ಬೀಳದೆ ಅಲ್ಲೂ ಕೂಡ ವಿಭಿನ್ನ ಹಾದಿ ಹಿಡಿದವರು. ಬರಗೂರರ ಚಿತ್ರಗಳು ಬಡವರ, ದಲಿತರನ್ನು ಧ್ವನಿಸುವ ಮೂಲಕ ಭಾರತೀಯ ಸಿನೆಮಾ ರಂಗದ ಚರಿತ್ರೆಯ ಪುಟಗಳಾಗಿ ಮಿಂಚಿವೆ. ಕನ್ನಡದ ಮೇರು ನಟ ಡಾ.ರಾಜ್‌ಕುಮಾರ್ ಅವರೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರು. ಅವರ ಸಿನಿಮಾ ನಿರ್ದೇಶನ, ಹಾಡುಗಳು, ಕಥೆ, ಚಿತ್ರಕಥೆ ಇವೆಲ್ಲಾ ಕಲಾತ್ಮಕ ಹಾಗೂ ಜನಮಾನಸಗಳನ್ನು ತನ್ನದೇ ಆದ ರೀತಿಯಲ್ಲಿ ಸೆಳೆದಿವೆ.

ಆಡಳಿತಗಾರರಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆ ಇವುಗಳಲ್ಲಿ ಬರಗೂರರು ದಕ್ಷರಾಗಿ ಕೆಲಸಮಾಡಿದ್ದಾರೆ. ಕನ್ನಡ ಪರ ಹೋರಾಟ ಮತ್ತು ಚಿಂತನೆಗಳಲ್ಲಿ ಅವರು ಎಂದೂ ಹಿಂದೆ ಬೀಳದವರು. ಕನ್ನಡ ಪರ ಕಾರ್ಯಕ್ರಮಗಳು, ಕನ್ನಡತನವನ್ನು ಬಿತ್ತುವ ಕೆಲಸ ಅವರಿಗೆ ಎಂದೆಂದೂ ಪ್ರಿಯ.

ಪಂಪ ಪ್ರಶಸ್ತಿ ವಿಜೇತ ಬರಗೂರು ರಾಮಚಂದ್ರಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# ಸ್ವರಶ್ರೀ ಶ್ರೀಮತಿ ವೀಣಾ ಮರಡೂರ ಅವರಿಗೆ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಯುವ ಪ್ರಶಸ್ತಿ



ಧಾರವಾಡದ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನಿಂದ ಈ ಬಾರಿಯ ಪಂಡಿತ ಬಸವರಾಜ ರಾಜಗುರು ರಾಷ್ಟ್ರೀಯ ಯುವ ಪ್ರಶಸ್ತಿ ಶ್ರೀಮತಿ ವೀಣಾ ಮರಡೂರ ಅವರಿಗೆ ಲಭಿಸಿದೆ. ಶ್ರೀಮತಿ ವೀಣಾ ಮರಡೂರ ಹಿಂದುಸ್ತಾನಿ ಶಾಸ್ತ್ರೀಯ ಗಾಯಕರಲ್ಲಿ ಗುರುತಿಸಿಕೊಂಡವರು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ನೆಲೆಗಟ್ಟು ಕರ್ನಾಟಕದ ಧಾರವಾಡದಲ್ಲಿ ಹುಟ್ಟಿದ ವೀಣಾ ಮರಡೂರ ಈ ನೆಲದ ಹಿರಿಮೆಯನ್ನು ಮೆರೆಸಿದ ಕಲಾವಿದೆ. ಹಿಂದುಸ್ತಾನಿ ಸಂಗೀತ ಕ್ಷೇತ್ರಕ್ಕೆ ಧಾರವಾಡದ ಕೊಡುಗೆ ಅಪಾರ. ಪ್ರಖ್ಯಾತ ಗಾಯಕರಾದ ಪಂಡಿತ ಮಲ್ಲಿಕಾರ್ಜುನ ಮನ್ಸೂರ, ಪಂಡಿತ ಬಸವರಾಜ ರಾಜಗುರು, ಪಂಡಿತ ಕುಮಾರ ಗಂಧರ್ವ, ಡಾ. ಗಂಗೂಬಾಯಿ ಹಾನಗಲ್, ಪಂಡಿತ ಭೀಮಸೇನ ಜೋಷಿ ಹಾಗೂ ಉಭಯಗಾನ ವಿಶಾರದ ಪಂಡಿತ ಪುಟ್ಟರಾಜ ಗವಾಯಿಗಳು ಹೀಗೆ ಪಟ್ಟಿ ಬೆಳೆಯುತ್ತದೆ.

ಪಂಡಿತ ಬಸವರಾಜ ರಾಜಗುರು ಅವರ ಶಿಷ್ಯ ಪಂಡಿತ ಸೋಮನಾಥ ಮರಡೂರ ಅವರ ಮಾರ್ಗದರ್ಶನದಲ್ಲಿ ವೀಣಾ ಎಂಟನೇ ವಯಸ್ಸಿನಿಂದಲೇ 'ಕಿರಾಣಾ ಘರಾಣಾ'ದಲ್ಲಿ ಸಂಗೀತದ ಅಭ್ಯಾಸ ಪ್ರಾರಂಭಿಸಿದರು. ಪಂಡಿತ ಪಂಚಾಕ್ಷರಿ ಮತ್ತಿಗಟ್ಟಿಯವರ ಗರಡಿಯಲ್ಲಿ ಸಂಗೀತ ಶಿಕ್ಷಣ ಪಡೆಯುವ ಭಾಗ್ಯ ಇವರದ್ದು. ಪಂಡಿತ ಮತ್ತಿಗಟ್ಟಿಯವರು ಪಂಡಿತ ಮಲ್ಲಿಕಾರ್ಜುನ ಮನ್ಸೂರರ ಶಿಷ್ಯರು. ಇಂಥ ಮಹಾನ್ ಗಾಯಕರ ಮಾರ್ಗದರ್ಶನದಲ್ಲಿ ಸಂಗೀತಾಭ್ಯಾಸ ಮಾಡಿರುವ ಶ್ರೀಮತಿ ಮರಡೂರರು 'ಕಿರಾಣಾ' ಹಾಗೂ 'ಜಯಪುರ್ ಘರಾಣ'ಗಳ ಎಲ್ಲ ಸತ್ವಗಳನ್ನು ಅರಗಿಸಿಕೊಂಡು ಶಾಸ್ತ್ರೀಯ ಸಂಗೀತದಲ್ಲಿ ವಿದ್ವತ್ತನ್ನು ಪಡೆದಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಎಂ.ಎ. (ಸಂಗೀತ) ಪ್ರಥಮ ರ‍್ಯಾಂಕ್ ಪಡೆಯುವುದರೊಂದಿಗೆ ಸ್ವರ್ಣ ಪದಕ ವಿಜೇತೆ ಕೂಡ. ಕರ್ನಾಟಕ ಸರ್ಕಾರದ ಸಂಗೀತ ಪರೀಕ್ಷೆಯಲ್ಲಿ 'ವಿದ್ವತ್' ಉಪಾಧಿಯನ್ನು ಪಡೆದಿದ್ದಾರೆ, ಜೊತೆಗೆ ಗಂಧರ್ವ ಮಹಾವಿದ್ಯಾಲಯದ 'ಸಂಗೀತ ವಿಶಾರದ' ಕೂಡ ಇವರು ಪಡೆದಿದ್ದಾರೆ. ಇವರು ಆಕಾಶವಾಣಿ ಕಲಾವಿದೆಯಾಗಿದ್ದು ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಸುಮಾರು ವರ್ಷಗಳಿಂದ ಸಂಗೀತ ಕಾರ್ಯಕ್ರಮ ಕೊಡುತ್ತಿದ್ದಾರೆ. ಕರ್ನಾಟಕದ ವಿವಿಧ ಭಾಗಗಳಷ್ಟೇ ಅಲ್ಲದೆ ದೇಶದ ವಿವಿಧ ಭಾಗಗಳಲ್ಲಿ ತಮ್ಮ ಸುಮಧುರ ಧ್ವನಿಯಿಂದ ಏಕವ್ಯಕ್ತಿ ಸಂಗೀತ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ಅವರು ಶಾಸ್ತ್ರೀಯ ಸಂಗೀತದೊಟ್ಟಿಗೆ ಠುಮರಿ, ದಾದರಾ ಗಝಲ್, ಭಜನೆ ಹಾಗೂ ವಚನ ಗಾಯನಗಳಿಂದ ಕೇಳುಗರ ಮನಸೂರೆಗೊಂಡಿದ್ದಾರೆ. ತಮ್ಮ ಕಾರ್ಯಕ್ರಮಗಳಿಂದ ಜನಮಾನಸಗಳ ಮೇಲೆ ಅಚ್ಚಳಿಯದ ಛಾಪನ್ನು ಮೂಡಿಸಿದ್ದಾರೆ. ಅವರ ಸಂಗೀತ ಯಾತ್ರೆಯಲ್ಲಿ ಅನೇಕ ಪುರಸ್ಕಾರಗಳು ಅವರನ್ನರಸಿ ಬಂದಿವೆ. ಅವುಗಳಲ್ಲಿ ಪ್ರಮುಖವಾದವು, ಡಾ. ಗಂಗೂಬಾಯಿ ಹಾನಗಲ್ ಹುಬ್ಬಳ್ಳಿ, ಹಾನಗಲ್ ಮ್ಯುಸಿಕ್ ಫೌಂಡೇಶನ್‌ನ 'ತಾಮ್ರಣ್‌ಕರ್ ಪ್ರಶಸ್ತಿ', ವೀರಶೈವ ಸಮನ್ವಯ ಸಮಿತಿ ಬೆಂಗಳೂರು ಕೊಡಮಾಡಿದ 'ಸ್ವರಶ್ರೀ ಪ್ರಶಸ್ತಿ–1997', ಶರಣ ಸಾಹಿತ್ಯ ಪರಿಷತ್‌ನ 'ಯುವ ಪ್ರತಿಭಾ ಪುರಸ್ಕಾರ–2002' ಹಾಗೂ ವಾರಣಾಸಿಯ 'ಬೈಜುಬಾವರಾ ಸಂಗೀತ ಸಮಾರೋಹ ಪ್ರಶಸ್ತಿ' ಇತ್ಯಾದಿ.

ಶ್ರೀಮತಿ ಮರಡೂರರಿಗೆ ಮುಂಬರುವ ದಿನಗಳಲ್ಲಿ ಒಳ್ಳೆಯ ಭವಿಷ್ಯತ್ತಿದೆ. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡುವ ಹುಮ್ಮಸ್ಸಿದೆ. ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಗಾಯಕಿಯಾಗಿ ತಮ್ಮದೇ ಆದ ಗಟ್ಟಿ ಸ್ಥಾನ ರೂಪಿಸುವತ್ತ ಅವರ ಗಮನ.

ವೀಣಾ ಮರಡೂರ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಅವರ ಸಂಗೀತ ಸಾಧನೆಯಲ್ಲಿ ಮತ್ತಷ್ಟು ಯಶಸ್ಸು ಸಿಗಲಿ ಎಂದು ಹಾರೈಸುತ್ತೇವೆ.

# ಶ್ರೀ ಸುಧೀರ್ ಫಡ್ನೀಸ್ ಅವರ ಕಲಾ ಪ್ರದರ್ಶನ



ದೆಹಲಿಯ ಲಲಿತಕಲಾ ಅಕಾಡೆಮಿಯಲ್ಲಿ ದಿನಾಂಕ 9ರಿಂದ 16ನೇ ಆಗಸ್ಟ್‌ವರೆಗೆ ನಮ್ಮೆಲ್ಲರ ನೆಚ್ಚಿನ ಶ್ರೀ ಸುಧೀರ್ ಫಡ್ನೀಸ್ ಹಾಗೂ ಅವರ ಸ್ನೇಹಿತರ ಚಿತ್ರಕಲಾ ಪ್ರದರ್ಶನವಿತ್ತು. ಶ್ರೀ ಫಡ್ನೀಸ್‌ರವರ ಜೊತೆ ಶ್ರೀ ಚಂದ್ರಕಾಂತ ಪ್ರಜಾಪತಿ, ಶ್ರೀ ಎಫ್.ವಿ. ಚಿಕ್ಕಮಠ ಹಾಗೂ ಶ್ರೀ ರಮೇಶ್ ಪಚ್‌ಪಾಂಡೆಯವರು ಈ ಅದ್ಭುತವಾದ ಪ್ರದರ್ಶನದಲ್ಲಿ ತಮ್ಮ ವಿಶಿಷ್ಟವಾದ ಕಲಾಕೃತಿಗಳಿಂದ ಪಾಲ್ಗೊಂಡಿದ್ದರು. ಯುವ ಕಲಾವಿದರ ಚಿತ್ರಕಲೆಯ ಪ್ರದರ್ಶನವನ್ನು ಲಲಿತ ಕಲಾ ಅಕಾಡೆಮಿಯ ಹಂಗಾಮಿ ಚೇರ್ಮನ್ ಆಗಿರುವ ನಮ್ಮವರೇ ಆದ ಶ್ರೀ ಕೆ.ಆರ್. ಸುಬ್ಬಣ್ಣ ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ದೆಹಲಿಯ ಪರ್ಲ್ ಆರ್ಟ್ ಗ್ಯಾಲರಿಯ ಮುಖ್ಯಸ್ಥೆ ಶ್ರೀಮತಿ ನಿಶಾ ಸಿಂಗ್ ಉಪಸ್ಥಿತರಿದ್ದರು.

ಈ ಪ್ರದರ್ಶನವನ್ನು ನೋಡಲು ಬರಬೇಕೆಂದು ಫಡ್ನೀಸ್‌ರವರು ಹೇಳಿದ್ದರು. ಅದಕ್ಕೂ ಮುಖ್ಯವಾಗಿ ಈ ಬಗೆಯ ಪ್ರದರ್ಶನವನ್ನು ಲಲಿತಕಲಾ ಅಕಾಡೆಮಿಯಲ್ಲಿ ನೋಡುವುದೇ ಒಂದು ಆನಂದ. ಲಲಿತಕಲಾ ಅಕಾಡೆಮಿಯ ಎಂಟನೇಯ ಗ್ಯಾಲರಿಯಲ್ಲಿ ತಮ್ಮ ಹತ್ತಾರು ಅದ್ಭುತ ಕಲಾಕೃತಿಗಳಿಂದ ಈ ಎಲ್ಲ ಕಲಾವಿದರು ತಮ್ಮ ಕಲಾಪ್ರದರ್ಶನವನ್ನು ಮಾಡಿದ್ದರು. ಶ್ರೀ ಫಡ್ನೀಸ್ ಹಾಗೂ ಸ್ನೇಹಿತರು ಈ ಪ್ರದರ್ಶನಕ್ಕೆ ಕನ್ನಡದಲ್ಲಿ ಬರೆಯುವುದಾದರೆ "ಸೃಜನಶೀಲತೆ, ಕನಸು, ಬಿಂಬ, ಸಮರಸ" ಎಂಬ ಶೀರ್ಷಿಕೆಯನ್ನು ನೀಡಿದ್ದರು. ಶ್ರೀ ಫಡ್ನೀಸ್‌ರವರ ಕಲಾಕೃತಿಗಳು ಒಂದು ಬಗೆಯ ಅದ್ಭುತವಾದ ರಂಗಿನಲೋಕವನ್ನೇ ನಮ್ಮೆದುರು ತೆರೆದಿಡುತ್ತದೆ. ಅವರು ಯಾವುದೋ ಮಂಡಲವನ್ನು ರಚಿಸಿ ಇರಿಸಿದ್ದಾರೆಂದು ತೋರುತ್ತಿತ್ತು. ಅವರ ಚಿತ್ರಗಳಲ್ಲಿ ತುಂಬಿರುವ ನೇರ ಗೆರೆಗಳು, ಅವುಗಳು ನಮ್ಮಲ್ಲಿ ಮೂಡಿಸುವ ಭಾವ ಒಂದು ಬಗೆಯಲ್ಲಿ ಅದ್ಭುತವಾದ ಅನುಭವವನ್ನು ನೀಡುತ್ತಿತ್ತು. ನನಗೆ ಅನಿಸಿದ ಹಾಗೆ ಶ್ರೀ ಫಡ್ನೀಸ್‌ರವರ ಚಿತ್ರಗಳಲ್ಲಿ ಅಡಗಿರುವ ಸಂಕೀರ್ಣತೆಯನ್ನು ಅರ್ಥಮಾಡಿಕೊಂಡು, ಮನದಲ್ಲಿ ಹಿಡಿದಿಡುವುದು ಸುಲಭವಲ್ಲ. ಒಂದು ಬಗೆಯ ಆಧ್ಯಾತ್ಮಿಕತೆಯ ಆವರಣವನ್ನೇ ಅವರು ಸೃಜಿಸುತ್ತಾರೆ. ಸುಮಾರು ಹತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ಅವರು ಪ್ರದರ್ಶಿಸಿದ್ದರು. ಈ ಪ್ರತಿಯೊಂದು ಕಲಾಕೃತಿಯಲ್ಲಿ ಶ್ರೀ ಫಡ್ನೀಸ್‌ರವರ ಛಾಪು ಎದ್ದು ಕಾಣುತ್ತಿತ್ತು.

ನಾನು ನಿಧಾನವಾಗಿ ಈ ಕಲಾಕೃತಿಗಳನ್ನು ನೋಡುತ್ತ, ಆಸ್ವಾದಿಸುತ್ತ ಸಾಗಿದೆ. ಅವರ ಹಾಗೂ ಸ್ನೇಹಿತರ ಈ ಕಲಾಕೃತಿಗಳು ನಮ್ಮನ್ನು ಇನ್ನೊಂದು ಪ್ರಪಂಚಕ್ಕೆ ಒಯ್ಯುತ್ತವೆ. ಕಲಾವಿದನೊಂದಿಗೆ ಈ ಕಲೆಯನ್ನು ನೋಡುವವರಿಗೆ ಒಂದು ಬಗೆಯ ಸಂವೇದನಾಶೀಲತೆ ಬೇಕಾಗುತ್ತದೆ. ಪ್ರತಿಯೊಂದು ಚಿತ್ರಕ್ಕೂ 'ಶೀರ್ಷಿಕೆ' ಇರಬೇಕೆ? ಬೇಡವೇ? ಎಂಬುದರ ಕುರಿತಾಗಿ ನಾವು ಚರ್ಚಿಸಿದೆವು. ಶೀರ್ಷಿಕೆಯಿಲ್ಲದಿದ್ದರೆ, ಈ ಕಲಾಪ್ರದರ್ಶನವನ್ನು ನೋಡುವವನು ತನ್ನದೇ ಆದ ಸಂವೇದನಾಶೀಲತೆಯ ಮೂಲಕ ಈ ಚಿತ್ರಗಳಲ್ಲಿ ಹೊಸಹೊಸ ಆಯಾಮಗಳನ್ನು ಕಾಣಬಹುದು. ಅದು ಶ್ರೀ ಫಡ್ನೀಸ್‌ರವರ ಚಿತ್ರಗಳನ್ನು ನಾವು ನೋಡುತ್ತ ಸಾಗಿದ ಹಾಗೆ ಆಗುವ ಅನುಭವ.

ಶ್ರೀ ಸುಧೀರ್ ಫಡ್ನೀಸ್‌ರವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಆತ್ಮೀಯವಾದ ಅಭಿನಂದನೆಗಳು.

ಡಾ. ವೆಂಕಟಾಚಲ ಹೆಗಡೆ

## ವೃತ್ತ–ಅನ್ವೇಷಣೆ–ಬೆಸುಗೆ

ದೆಹಲಿ ಕಲಾವಿದರಾದ ಶ್ರೀ ಸುಧೀರ್ ಫಡ್ನೀಸ್ ಅವರ ಮನಃಶಾಂತಿದಾಯಕ ಹಾಗೂ ಆತ್ಮ ಪರಮಾತ್ಮ ಸಂಬಂಧವನ್ನು ಬಿಂಬಿಸುವ ಚಿತ್ರಗಳು ಅವರ ಚಿಂತನಾಕ್ರಮವನ್ನು ತೋರಿಸುತ್ತವೆ. ವೃತ್ತಗಳನ್ನು ಪದರಗಳಲ್ಲಿ ಆಡುವ ಸುಧೀರರು, ಆ ವೃತ್ತಗಳನ್ನು ಒಂದಕ್ಕೊಂದು ಬೆಸೆಯುವ ರೀತಿ ಅನನ್ಯವಾದದ್ದು. ಜೀವನದ ಓಟ ವೃತ್ತಾಕಾರವಾಗಿರುವಂತೆ ಅಂದರೆ ಹುಟ್ಟಿದವ ಸಾಯುವುದು, ಸತ್ತವನು ಹುಟ್ಟುವ ಪ್ರಕ್ರಿಯೆಯಂತೆ, ಮಾನವ ಹುಟ್ಟು ಮತ್ತು ಸಾವಿನ ರಹಸ್ಯವನ್ನು ಮಾನವ ಜನಾಂಗ ಹುಟ್ಟಿದಂದಿನಿಂದಲೇ ಹುಡುಕುವುದಕ್ಕೆ ತೆ–ಡಗಿದಂತೆ ಫಡ್ನೀಸರ ವೃತ್ತಗಳು ಎಲ್ಲಿ ಆರಂಭವಾಗುತ್ತವೆ, ಎಲ್ಲಿ ಅಂತ್ಯ ಕಾಣುತ್ತವೆ ಎಂದು ಹೇಳುವುದೇ ಕಷ್ಟ. ಅಲ್ಲಲ್ಲಿ ಬೆಳಕು–ಕತ್ತಲೆಯನ್ನು ಬಳಸಿಕೊಳ್ಳುವ ಮೂಲಕ ನಮ್ಮೊಳಗೆ ಬೆಳಕು ಇರುವಂತೆ ಕತ್ತಲೂ ಕೂಡಾ ತನ್ನ ಅಸ್ತಿತ್ವ ಇರಿಸಿಕೊಂಡಿದೆ, ಈ ಕತ್ತಲು–ಬೆಳಕಿನ ದ್ವಂದ್ವದಲ್ಲೇ ಮನುಷ್ಯ ಕೇಂದ್ರಕ್ಕೆ ಹೋಗಲು ತೊಳಲಾಡುತ್ತಾನೆ, ದಾರಿ ಕಾಣದೆ ವಿಫಲನಾಗಿ ಭ್ರಮೆಗೊಳಗಾಗುತ್ತಾನೆ ಎಂಬುದನ್ನು ಚಿತ್ರಗಳು ಹೇಳುತ್ತವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇತ್ತೀಚೆಗೆ ತಮ್ಮ ಚಿತ್ರವನ್ನು ಪ್ರದರ್ಶಿಸಿ ಪ್ರಶಂಸೆಗೆ ಪಾತ್ರರಾಗಿರುವ ನಮ್ಮ ಹೆಮ್ಮೆಯ ಸುಧೀರ್ ಫಡ್ನೀಸರ ಕುಂಚ 'ಪೂರ್ಣಮೇವಾವಶಿಷ್ಯತೆ' ಎಂಬುದನ್ನು ಸಾರುತ್ತ ಸಾಗಿದೆ.

ಸಂತೋಷ ಕುಮಾರ್ ಉಪಾಧ್ಯಾಯ

## ಆತ್ಮೀಯ ಆಮಂತ್ರಣ


**ಜನಕಪುರಿ ಕನ್ನಡ ಕೂಟದ ಗಣೇಶೋತ್ಸವ ಕಾರ್ಯಕ್ರಮವನ್ನು ಸೆಪ್ಟೆಂಬರ್ 23 ರಂದು ಬೆಳಿಗ್ಗೆ 9.00 ಗಂಟೆಗೆ, ಸಿ–3, ಜನಕಪುರಿ, ರಾಮಮಂದಿರದಲ್ಲಿ ಆಚರಿಸಲಾಗುವುದು.**

**ಗೌಡ ಸಾರಸ್ವತ ಸಮಾಜವು 37ನೇ ಸಾರ್ವಜನಿಕ ಗಣೇಶ ಮಹೋತ್ಸವವನ್ನು, ಸಾರಸ್ವತ ಸಂಸ್ಕೃತಿ ಭವನ, ನವ ರಾಜೇಂದ್ರನಗರದಲ್ಲಿ ಸೆಪ್ಟೆಂಬರ್ 19 ರಿಂದ 23 ರವರೆಗೆ 5 ದಿನಗಳ ಕಾಲ ಆಯೋಜಿಸಿದೆ. ಪ್ರತಿ ದಿನ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಪೂಜೆ, ಭಜನೆ, ಪ್ರಸಾದವನ್ನು ಏರ್ಪಡಿಸಲಾಗಿದೆ.**

ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯಿಂದ ಗಣೇಶ ಹಬ್ಬವನ್ನು ಸೆಪ್ಟೆಂಬರ್ 19 ರಿಂದ 23 ರವರೆಗೆ 5 ದಿನಗಳ ಕಮ್ಯುನಿಟಿ ಸೆಂಟರ್, ಅಶೋಕ್ ವಿಹಾರ್, ನವದೆಹಲಿ ಇಲ್ಲಿ ಆಚರಿಸಲಾಗುವುದು.

**ದೆಹಲಿಯ ಕನ್ನಡಿಗರಿಗೆಲ್ಲರಿಗೂ ಆದರದ ಸ್ವಾಗತ**

# ನಾಟಕೀಯತೆಯೇ ಶಿವಪ್ರಕಾಶ್ ಕವಿತೆಗಳ ಜೀವಾಳ: ರೆಹಮತ್ ತರೀಕೆರೆ



ಎಚ್.ಎಸ್. ಅನುಪಮಾ, ರೆಹಮತ್ ತರೀಕೆರೆ, ಡಾ. ರಾಜೇಂದ್ರ ಚೆನ್ನಿ, ಪ್ರೊ. ಎಚ್.ಎಸ್. ಶಿವಪ್ರಕಾಶ್, ಜಿಂಗೋನಿಯಾ ಜಿಂಗೋನೆ

ಕವಿ ಎಚ್.ಎಸ್. ಶಿವಪ್ರಕಾಶರ ಕವಿತೆಗಳು ನಾಟಕೀಯತೆಯಿಂದ ಕೂಡಿವೆ. ನಾಟಕೀಯತೆಯೇ ಅವರ ಕವಿತೆಗಳ ಜೀವಾಳ. ನಾಟಕೀಯ ತಿರುವುಗಳು ಕವಿತೆಗಳ ವಿಶೇಷ ಎಂದು ವಿಮರ್ಶಕ ರೆಹಮತ್ ತರೀಕೆರೆ ಅಭಿಪ್ರಾಯಪಟ್ಟರು.

ಶಿವಮೊಗ್ಗದ ಕಮಲಾನೆಹರು ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಆಗಸ್ಟ್ 29ರಂದು ಅಹರ್ನಿಶಿ ಪ್ರಕಾಶನದಿಂದ ಏರ್ಪಡಿಸಿದ್ದ ಎಚ್.ಎಸ್.ಶಿವಪ್ರಕಾಶ್ ಅವರ 'ಮಾತು ಮಂತ್ರವಾಗುವವರೆಗೆ' ಮತ್ತು 'ಮರೆತು ಹೋದ ದೊಂಬರಾಕೆ' ಕವನ ಸಂಕಲನಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಶಿವಪ್ರಕಾಶ್ ಅವರ ಕಾವ್ಯದಲ್ಲಿ ಒಂದು ರೀತಿಯ ತಲ್ಲಣ, ವಿಹ್ವಲ, ಚಡಪಡಿಕೆ, ವಿಷಾದವಿದೆ. ಇದು ವೈಯಕ್ತಿಕವೋ, ಸಾಮಾಜಿಕವೋ, ರಾಜಕೀಯ ತಲ್ಲಣವೋ ಅರಿವಾಗುವುದಿಲ್ಲ. ಕವಿತೆಗಳ ನಾಯಕರು ಕೂಡ ಈ ತಲ್ಲಣ, ವಿಹ್ವಲತೆ ಅನುಭವಿಸುತ್ತಾರೆ. 'ಮಾತು ಮಂತ್ರವಾಗುವವರೆಗೆ' ಹೆಚ್ಚು ಪ್ರಾರ್ಥನೆಗಳನ್ನು, ಕ್ರಿಯಾ ರೂಪಗಳನ್ನು ಒಳಗೊಂಡಿರುವ ಕವನ ಸಂಕಲನ. ಕುವೆಂಪು, ಬೇಂದ್ರೆ ಕಾವ್ಯದಲ್ಲಿ ಬಿಟ್ಟರೆ ಶಿವಪ್ರಕಾಶ್ ಕಾವ್ಯದಲ್ಲಿ ಇಂತಹ ಕ್ರಿಯಾರೂಪ ಕಾಣಬಹುದು. ಹಾಗೆಯೇ ಅಡಿಗರನ್ನು ಬಿಟ್ಟರೆ ಇಷ್ಟೊಂದು ಪ್ರಾರ್ಥನೆ, ಆವಾಹನೆ ಇರುವುದು ಇವರ ಕವಿತೆಗಳಲ್ಲಿ. ಒಂದು ರೀತಿಯ ಆರ್ತದನಿಯೂ ಇದೆ ಎಂದು ವಿಶ್ಲೇಷಿಸಿದರು.

ತನ್ನನ್ನು ತಾನರಿಯುವ ಹಂತದಲ್ಲಿರುವ ಈ ಕವಿತೆಗಳು ಕುದಿತದಲ್ಲಿ ತಿಳಿಯುವಂತಹವು. ಈ ಮಟ್ಟದಲ್ಲಿ ಅವೈದಿಕ, ಅನುಭಾವಿಕ ಕವಿಗಳಿಂದ ಪ್ರೇರಣೆ ಪಡೆದ ಕವಿ ಮತ್ತೊಬ್ಬರಿಲ್ಲ. ಕುವೆಂಪು ಸಾಹಿತ್ಯದಲ್ಲಿ ಶಿವ ಸಂಸ್ಕೃತಿ ಇದೆ. ಹಾಗೆಯೇ ಶಿವಪ್ರಕಾಶ್ ಕಾವ್ಯದಲ್ಲೂ ಶಿವ ಸಂಸ್ಕೃತಿ ಕಾಣಬಹುದು. ಆದರೆ, ಇವು ಹೆಚ್ಚು ಅವೈದಿಕ ಸಂಸ್ಕೃತಿಯವು. ಬೇರೆ ಬೇರೆ ದಾರ್ಶನಿಕ, ಕಾವ್ಯ ಪರಂಪರೆಯಿಂದ ಅನುಸಂಧಾನ ಮಾಡಿ ಶೋಧಿಸುವ ಕಾರ್ಯವನ್ನು ಬೇರೊಬ್ಬರು ಮಾಡಿಲ್ಲ. ಆಧುನಿಕ ವಿಕಾರಗಳಿಗೆ ಇವು ಮದ್ದು ಎಂಬ ಭಾವ ಕೂಡ ಕವಿಗೆ ಇಲ್ಲ ಎಂದರು.

ಕವಿತೆಗಳು ಎಳನೀರಿನಂತೆ ಪಾರದರ್ಶಕವಾಗಿದ್ದರೂ ಅನೇಕ ವರ್ಷಗಳ ಅನುಭವದಿಂದ ಪಾಕಗೊಂಡ ಕವನ ಸಂಕಲನವಿದು. ಚಿಂತನಶೀಲತೆ, ಅಹಂಭಾವಿಕವಾದ ಸಂವೇದನಾಶೀಲತೆ ಇದೆ. ಶ್ರಮ ಸಂಸ್ಕೃತಿಯ ಅರಿವು ಇರುವವರು ಮಾತ್ರ ಇಂತಹ ಆಳವಾದ, ಸಾಮುದಾಯಿಕ ಪ್ರಜ್ಞೆಯಿಂದ ಕವಿತೆ ಬರೆಯಲು ಸಾಧ್ಯ ಎಂದು ಹೇಳಿದರು.

ಸಾಹಿತಿಗಳು ಭಾಷೆ ಬಗ್ಗೆ ತಾಳುತ್ತಿರುವ ಮಡಿವಂತಿಕೆಯಿಂದ ಭಾಷೆ ಕುಬ್ಜವಾಗುವ ಅಪಾಯವಿದೆ. ಅಪೂರ್ವವಾದ ಅನೇಕ ಪದಗಳು ನಶಿಸಬಹುದು. ಆದರೆ, ಶಿವಪ್ರಕಾಶ್ ಅಂತಹ ಮಡಿವಂತಿಕೆ ತೋರಿಲ್ಲ. ನಶಿಸುವ ಹಂತದಲ್ಲಿರುವ ಪದ, ಹಳಗನ್ನಡ ಪದ, ಜಾನಪದ, ಪಾರ್ಸಿ, ಉರ್ದು ಪದಗಳನ್ನೂ ಕಾವ್ಯದಲ್ಲಿ ದುಡಿಸಿಕೊಂಡಿದ್ದಾರೆ. ಇತ್ತೀಚೆಗೆ ಆಳವಾದ, ಗರ್ಭಾವಸ್ಥೆಯಿಂದ ಹುಟ್ಟುವ ಕಾವ್ಯಗಳು ಕಡಿಮೆಯಾಗುತ್ತಿವೆ. ಒಂದು ರೀತಿಯ ಏಕತಾನತೆ ಹುಟ್ಟುತ್ತಿರುವ ಸಂದರ್ಭದಲ್ಲಿ ಎಚ್.ಎಸ್.ಶಿವಪ್ರಕಾಶರ ಕವಿತೆಗಳು ಹಿರಿ–ಕಿರಿಯ ಲೇಖಕರಿಗೆ ಸವಾಲಿನ ರೀತಿಯಲ್ಲಿವೆ ಎಂದು ಬಣ್ಣಿಸಿದರು.

ಸಾಹಿತಿ ಪ್ರೊ.ಎಚ್.ಎಸ್.ಶಿವಪ್ರಕಾಶ್ ಮಾತನಾಡಿ, ಕಾವ್ಯಗಳನ್ನು ಅನುವಾದಿಸುವ ಮೂಲಕ ಸಾಕಷ್ಟು ಕಲಿತಿದ್ದೇನೆ. ದ್ವೈತ, ಅದ್ವೈತ ಯಾವುದೂ ಅಂತಿಮವಲ್ಲ. ಜಗತ್ತಿಗೆ ಅಂತಿಮ ರೂಪ ಇಲ್ಲ. ಅದು ಪರಿವರ್ತನಾಶೀಲವಾದುದು. ಸಿದ್ಧ ಚೌಕಟ್ಟಿಗೆ ಜಗತ್ತನ್ನು ಒಳಪಡಿಸುವುದು ಸರಿಯಲ್ಲ ಎಂದರು.

ಮರೆತುಹೋದ ದೊಂಬರಾಕೆ ಕೃತಿಯ ಮೂಲ ಲೇಖಕಿ ಇಟಲಿಯ ಜಿಂಗೋನಿಯಾ ಜಿಂಗೋನೆ ಕವಿತೆಗಳನ್ನು ವಾಚಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ.ರಾಜೇಂದ್ರ ಚೆನ್ನಿ, ಲೇಖಕಿ ಎಚ್.ಎಸ್.ಅನುಪಮಾ ಮಾತನಾಡಿದರು. ಪೂಜಾ ಪ್ರಾರ್ಥಿಸಿ, ಅಹರ್ನಿಶಿ ಪ್ರಕಾಶನದ ಅಕ್ಷತಾ ಸ್ವಾಗತಿಸಿದರು. ನಾಗಭೂಷಣ ನಿರೂಪಿಸಿದರು.

---



ಆಗಸ್ಟ್ 17 ರಿಂದ 23 ರ ವರೆಗೆ ನೇಪಾಳದಲ್ಲಿ ನಡೆದ ಜಾಗತಿಕ ಜಾನಪದ ಚರ್ಚಾಗೋಷ್ಠಿಯಲ್ಲಿ ಕನ್ನಡದ ತರುಣ ಸಾಹಿತಿ ಅರುಣ ಜೋಳದಕೂಡ್ಲಿಗಿ ಭಾಗವಹಿಸಿದ್ದರು. ನೇಪಾಳಕ್ಕೆ ಪ್ರಯಾಣ ಬೆಳೆಸುವ ಮುನ್ನ ಆಗಸ್ಟ್ 13ರ ಸಂಜೆ ಸಂಘಕ್ಕೆ ಭೇಟಿ ನೀಡಿದ್ದರು. ತನ್ನವ್ವನ ಕಷ್ಟ ಸುಖಗಳನ್ನು ಬಿಂಬಿಸುವ 'ಅವ್ವನ ಅಂಗನವಾಡಿ' ಕವನಸಂಕಲನ, 'ಸಂಡೂರು ಭೂ ಹೋರಾಟ' ಕೃತಿಗಳ ಮೂಲಕ ತಮ್ಮನ್ನು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡ ಅರುಣ್ ಜೋಳದಕೂಡ್ಲಿಗಿ ಹೊಸ ತಲೆಮಾರಿನ ಯುವ ಬರಹಗಾರ. ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಎಂ.ಎ. ಜಾನಪದ ಹಾಗೂ ಜಾನಪದದಲ್ಲಿ ಪಿಹೆಚ್‌ಡಿ ಪದವಿ ಪಡೆದ ಅರುಣ್ ಪ್ರಸ್ತುತ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ಯೋಜನೆಯೊಂದರಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ. ನೇಪಾಳದಲ್ಲಿ ನಡೆಯುವ ಈ ಗೋಷ್ಠಿಯಲ್ಲಿ ಭಾರತದಿಂದ 20 ಕ್ಕೂ ಹೆಚ್ಚು ಜಾನಪದ ವಿದ್ವಾಂಸರು ತೆರಳುತ್ತಿದ್ದು, ಆ ಪೈಕಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಡಾ. ಅರುಣ್ ಜೋಳದಕೂಡ್ಲಿಗಿ ಕರ್ನಾಟಕದ ಪ್ರದರ್ಶನಾತ್ಮಕ ಕಲೆಗಳ ಮೇಲೆ ಜಾಗತೀಕರಣದ ಪ್ರಭಾವ ಕುರಿತು ಮಾತನಾಡುವವರಿದ್ದರು. ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅರುಣ ಅವರನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಜಾಗತೀಕರಣದ ಸಂದರ್ಭದಲ್ಲಿ ಪ್ರದರ್ಶನಾತ್ಮಕ ಕಲೆಗಳು ಮತ್ತು ಕಲಾವಿದರ ಮನೋಭೂಮಿಕೆ, ಬದಲಾಗುತ್ತಿರುವ ದೃಷ್ಟಿಕೋನ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿ ಕುರಿತು ನಡೆದ ಕುತೂಹಲಕಾರಿ ಚರ್ಚೆ ಅರ್ಥಪೂರ್ಣವಾಗಿತ್ತು. ನೇಪಾಳಕ್ಕೆ ಹೊರಟ ಸಾಹಿತಿ ಗೆಳೆಯನಿಗೆ ತುಂಬು ಹೃದಯದ ಶುಭಾಶಯಗಳನ್ನು ಸಲ್ಲಿಸಲಾಯಿತು.

**Delhi Karnataka Sangha's Abhimatha Monthly,**
**September -2012, Price Rs.1/-  RNI Regn. No. 53405/91, DL-SW-15/4016/10-11-12**
**Printout Date : September 8th / 9th, Postal Date :10th / 11th, Total Pages-24**



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770